ಜನಶಕ್ತಿ



ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 11
ಮಾರ್ಚ್ 17, 2013


ಪುಟ 16 ರೂ. 10/-



ಉರುಳಿದೆ ವೆನೆಜುವೆಲಾದ ಹೆಮ್ಮರ ಮುಳುಗಿದೆ ವಿಶ್ವ ದುಃಖ ಸಾಗರ



4ನೇ ಬಾರಿ
ತ್ರಿಪುರಾ ಮುಖ್ಯಮಂತ್ರಿಯಾಗಿ
ಮಾಣಿಕ್ ಸರ್ಕಾರ್



ಮಹಿಳಾ ಹಕ್ಕುಗಳ
ಹೋರಾಟಗಾರ್ತಿ
ಕ್ಲಾರಾ ಜೆಟ್ಕಿನ್

ರೈತರ ಸಾಲ ಮನ್ನಾದಲ್ಲಿ ಕನ್ನ ಹಾಕಿದ ಕಾಂಗ್ರೆಸ್



ಕರ್ನಾಟಕದಲ್ಲಿ 'ಸಂಘರ್ಷ ಜಾಥಾ'

ಹಾಸ್ಟೆಲ್ ವಿದ್ಯಾರ್ಥಿಗಳ ನರಕ ಯಾತನೆ

ಜಾಗತೀಕರಣ ನೀತಿ ಆರೋಗ್ಯ ಪರವೇ?

70ರ ದಶಕದಲ್ಲಿಯೇ ರೂಪುಗೊಂಡು ಜಾಗತೀಕರಣ ನೀತಿ ಭಾರತದಲ್ಲಿ ಜಾ-ರಿಯಾದದ್ದು 90ರ ದಶಕದಲ್ಲಿ. ಅಂದಿನಿಂದ ಆಗೊಮ್ಮೆ, ಈಗೊಮ್ಮೆ ರಾಜಕಾರಣಿಗಳು, ಸಮಾಜ ಸೇವಕರು ಸಾಹಿತಿಗಳಲ್ಲಿ ಕೆಲವರು ಅದರ ಪರವಾಗಿ ಹಾಗೂ ಇನ್ನು ಕೆಲವರು ಅದರ ವಿರುದ್ಧವಾಗಿ ಮಾತನಾಡುವುದನ್ನು ಕೇಳಿದ್ದೇವೆ. ಈ ನೀತಿ ದೇಶದ ಆರ್ಥಿಕತೆಗೆ ಸಂಬಧಿಸಿದುದು. ಅಂದಮೇಲೆ ಅದು ಜನರ ಜೀವನದ ಮೇಲೆ, ಜನಾರೋಗ್ಯದ ಮೇಲೆ ಖಂಡಿತ ಪರಿಣಾಮ ಬೀರುತ್ತದೆ ಎಂಬಂತಾಯಿತು. ಜಾಗತೀಕರಣ ಅಂದರೆ ಏನು, ಅದು ಆರೋಗ್ಯ ಕ್ಷೇತ್ರದ ಮೇಲೆ ಹೇಗೆ ಪರಿಣಾಮ ಬೀರುತ್ತಬಂದಿದೆ ಎಂಬುದನ್ನು ಅವಲೋಕಿಸೋಣವೇ?

ಏನಿದು ಜಾಗತಿಕರಣ :

17ನೇ ಶತಮಾನದ ನಂತರ ಜಗತ್ತಿನ ಬಲಾಢ್ಯ ರಾಷ್ಟ್ರಗಳು ಇತರೆ ರಾಷ್ಟ್ರಗಳ ಮೇಲೆ ಸಾಮ್ರಾಜ್ಯಶಾಹಿ ಧೋರಣೆಯನ್ನು ಹೇರುವುದು ತೀವ್ರಗೊಂಡಿತು. ಇವುಗಳಲ್ಲಿ ಪೋರ್ಚುಗಿಸರು, ಬ್ರಿಟಿಷರು, ಡಚ್ ಮುಖ್ಯವಾದವರು ಎಂಬುದನ್ನು ಇತಿಹಾಸದಲ್ಲಿ ಓದಿದ್ದೇವೆ. ಇವರು ತಾವು ಆಕ್ರಮಿಸಿದ ದೇಶಗಳ ಜನರ ಸ್ವಾತಂತ್ರ್ಯವನ್ನು ಮೊಟಕು ಗೋಳಿಸಿದರು ಹಾಗೂ ದೇಶವನ್ನು ಲೂಟಿ ಮಾಡಿದರು. ಇದರ ಪರಿಣಾಮವಾಗಿ ಶ್ರೀಮಂತ ದೇಶಗಳು ಕೊಬ್ಬಿದವು. ಹಾಗೂ ಬಡದೇಶಗಳು ಸೊರಗಿದವು.

ಆದರೆ ಅದು ನಿರಂತರವಾಗಿ ಮುಂದುವರೆಯಲು ಸಾಧ್ಯವಾಗಲಿಲ್ಲ. ವಿಮೋಚನಾ ಹೋರಾಟಗಳು ಹಾಗೂ ಬದಲಾದ ಜಾಗತಿಕ ಬಲಾಬಲಗಳ ಪರಿಸ್ಥಿತಿಯ ಪರಿಣಾಮವಾಗಿ ಅನೇಕ ದೇಶಗಳು ಸ್ವಾತಂತ್ರ್ಯ ಗಳಿಸಿದವು. ಅದರಲ್ಲಿ ಭಾರತವೂ ಒಂದು. ಸಾಮ್ರಾಜ್ಯಶಾಹಿ ದೇಶಗಳಿಗೆ ಸ್ವಾತಂತ್ರ್ಯ ನೀಡುವ ಅನಿವಾರ್ಯತೆ ಇದ್ದರೂ, ಅವು ಸುಮ್ಮನಿರದೇ ತಮ್ಮ ಸಾಮ್ರಾಜ್ಯಶಾಹಿ ಧೋರಣೆಯನ್ನು ಬಡ ರಾಷ್ಟ್ರಗಳ ಮೇಲೆ ಹೇರಲು ಹೊಂಚು ಹಾಕುತ್ತಿದ್ದವು. ಎಲ್ಲ ಬಡ ರಾಷ್ಟ್ರಗಳಿಗೆ ಮೊದಲು ಧನ ಸಹಾಯ ನಂತರ ಸಾಫ್ಟಲೋನ್ ಕೊಟ್ಟು ಸಾಲದ ಸುಳಿಯಲ್ಲಿ ಸಿಲುಕುವಂತೆ ಮಾಡಿದವು.



70ರ ದಶಕದಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟು ಉಂಟಾಯಿತು. ಇದರ ಲಾಭ ಪಡೆಯಲು ಸಾಮ್ರಾಜ್ಯಶಾಹಿ ರಾಷ್ಟ್ರಗಳ ಮುಂದಾದವು. ಅಮೇರಿಕಾ ಸಾಮ್ರಾಜ್ಯಶಾಹಿ ನೀತಿಯನ್ನು ಬಲವಾಗಿ ಪ್ರತಿಪಾದಿಸುತ್ತ ಪ್ರಾಮುಖ್ಯತೆ ಪಡೆಯಿತು. ಈ ಹಂತದಲ್ಲಿ ಎಲ್ಲ ಶ್ರೀಮಂತ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಜಾಗತೀಕರಣ ನೀತಿಯನ್ನು ಪ್ರತಿಪಾದಿಸಿದವು ಹಾಗೂ ಎಲ್ಲ ರಾಷ್ಟ್ರಗಳನ್ನು ಆ ನೀತಿಗೆ ಬೆಂಬಲ ನೀಡಲು ಪ್ರೋತ್ಸಾಹಿಸಿದವು.

ಈ ನೀತಿಯು ಜಗತ್ತಿನ ಎಲ್ಲ ದೇಶಗಳಿಗೂ 'ಮುಕ್ತವಾದ' ಒಂದೇ ಮಾರುಕಟ್ಟೆಯನ್ನು ನಿರ್ಮಿಸಿ ವ್ಯಾಪಾರ ಮಾಡಬಹುದು ಎಂಬುದಾಗಿತ್ತು. ಎಲ್ಲ ದೇಶಗಳು ತಮ್ಮ ಸರಕುಗಳನ್ನು ಇತರೆ ದೇಶಗಳಿಗೆ ಮಾರಾಟ ಮಾಡಿ ಲಾಭ ಪಡೆದು ತಮ್ಮ ಆರ್ಥಿಕತೆಯನ್ನು ಸುಧಾರಿಸಬಹುದೆಂದು ಹೇಳಲಾಯಿತು. ಈ ನೀತಿಯನ್ನು ಅನೇಕ ರಾಷ್ಟ್ರಗಳು ಒಪ್ಪಿಕೊಂಡವು. ಇನ್ನು ಕೆಲವನ್ನು ಒತ್ತಾಯಿಸಲಾಯಿತು. ಅಮೇರಿಕಾ ಹಾಗೂ ಇತರೆ ಮುಂದುವರೆದ ರಾಷ್ಟ್ರಗಳೊಡನೆ ವ್ಯಾಪಾರ ಮಾಡುತ್ತ, ಆ ದೇಶಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಂಡು ಶ್ರೀಮಂತರಾಗುವ ಕನಸು ಕಾಣಲಾರಂಭಿಸಿದವು. ಈ ನೀತಿ ಯಾವ ವೈಜ್ಞಾನಿಕ ಆಧಾರದ ಮೇಲೆ ರೂಪುಗೊಂಡಿಲ್ಲ ಹಾಗೂ ಈ ನೀತಿ ಸಾಮ್ರಾಜ್ಯಶಾಹಿ ನೀತಿಯನ್ನು ಮುಂದುವರೆಸಲು ಹೂಡಿದ ತಂತ್ರವೆಂಬುದು ಸ್ಪಷ್ಟವಾಗಿತ್ತು. ಈ ನೀತಿಯನ್ನು ಮೊದಲಿಗೆ ಮೆಕ್ಸಿಕೊ, ಆಫ್ರಿಕದ ದೇಶದ ಮೇಲೆ 70ರ ದಶಕದಲ್ಲೇ ಪ್ರಯೊಗ ಮಾಡಲಾಯಿತು. ಒಂದೇ ದಶಕದ ಪ್ರಯೋಗದ ನಂತರ ಗೊತ್ತಾದ ಅಂಶವೆಂದರೆ, ಈ ನೀತಿ ದೇಶಗಳ ಆರ್ಥಿಕತೆಯನ್ನು ಸುಧಾರಿಸಲು ವಿಫಲವಾಗಿತ್ತು. ಆಗ ಈ ನೀತಿಯಲ್ಲಿ ಕೆಲವು ಸುರಕ್ಷಾ ಅಂಶಗಳನ್ನು ಅಳವಡಿಸಿ ಇತರ ದೇಶಗಳ ಮೇಲೆ 90ರ ದಶಕದಲ್ಲಿ ಹೇರಲಾಯಿತು. ಇದೇ ವೇಳೆಗೆ ಸಮಾಜವಾದಿ ರಾಷ್ಟ್ರಗಳ ಪತನಗೊಂಡಿದ್ದರಿಂದ ಜಾಗತೀಕರಣಕ್ಕೆ ಪ್ರತಿ-ರೋಧ ಬರಲಿಲ್ಲ.

ಜಾಗತೀಕರಣದ ಶರತ್ತುಗಳು

ಜಾಗತೀಕರಣದ ನೀತಿಯನ್ನು ಮುಂದುವರೆದ ರಾಷ್ಟ್ರಗಳು ತಮ್ಮ ಮೂಗಿನ ನೇರಕ್ಕೆ ತಕ್ಕಂತೆ ರೂಪಿಸಿದ್ದವು. ಈ ನೀತಿಯನ್ನು ಸಂಪೂರ್ಣವಾಗಿ ಒಪ್ಪಬೇಕು ಅಥಾವ ತಿರಸ್ಕರಿಸಬೇಕೆಂದು ಆದೇಶಿಸಲಾಗಿತ್ತು. ಈ ನೀತಿಯನ್ನು ಜಾರಿಗೆ ತರಲಾಗಿದೆಯೇ ಎಂಬುದರ ಮೇಲ್ವಿಚಾರಣೆಯನ್ನು ವಿಶ್ವ ವ್ಯಾಪಾರ ಸಂಘಟನೆ ತೆ-ಗೆದು ಕೊಂಡಿದೆ. ನೀತಿಯನ್ನು ಹೇಗೆ ಜಾರಿಗೆ ತರಬೇಕೆಂಬುದನ್ನು ವಿಶ್ವಬ್ಯಾಂಕ್, ಅಂತರ ರಾಷ್ಟ್ರಿಯ ಹಣಕಾಸು ಸಂಸ್ಥೆ ಹೇಳುತ್ತದೆ.

1.ಎಲ್ಲ ರಾಷ್ಟ್ರಗಳು ತಮ್ಮ ಮಾರುಕಟ್ಟೆಯನ್ನು ತೆರೆದಿಡಬೇಕು ಹಾಗೂ ಒಂದೇ ವಿಶ್ವ ಮಾರುಕಟ್ಟೆಯಲ್ಲಿ ಪಾಲುಗೊಳ್ಳಬೇಕು (ಸ್ವಾತಂತ್ರ್ಯ ಪಡೆದ ಎಲ್ಲ ರಾಷ್ಟ್ರಗಳು ತಮ್ಮ ದೇಶದ ಆರ್ಥಿಕತೆಯನ್ನು ವೃದ್ಧಿಪಡಿಸಲು ರಕ್ಷಣಾತ್ಮರ ನೀತಿಯನ್ನು ರೂಪಿಸಿಕೊಂಡಿದ್ದವು. ಇದರಿಂದಾಗಿ ಹೊರದೇಶಗಳ ಸರಕುಗಳಿಗೆ ಮಾರುಕಟ್ಟೆಯಲ್ಲಿ ಮುಕ್ತ ಪ್ರವೇಶವಿರುವುದಿಲ್ಲ. ಇದನ್ನು ಬದಲಿಸಿ ಬಹುರಾಷ್ಟ್ರೀಯ ಕಂಪನಿಯ ಸರಕುಗಳಿಗೆ ಮಾರುಕಟ್ಟೆ ಕಲ್ಪಿಸುವುದೇ ಈ ನೀತಿಯ ಉದ್ದೇಶ)

2.ರಾಷ್ಟ್ರಿಯ ನೀತಿಗಳನ್ನು ಬದಲಿಸಿ ಜಾಗತೀಕರಣ ನೀತಿಯನ್ನು ಅನುಸರಿಸಿ (ಸಾರ್ವಭೌಮತ್ವವನ್ನು ಕೈ ಬಿಡಲು ಆದೇಶ)

3.ಆಮದು ಶುಲ್ಕ ಕಡಿಮೆ ಮಾಡಿ (ಎಲ್ಲದೇಶಗಳು ತಮ್ಮ ದೇಶದ ಸರಕುಗಳನ್ನು ಪ್ರೋತ್ಸಾಹಿಸಲು ಹಾಗೂ ಇತರೇ ದೇಶಗಳ ಸರಕುಗಳನ್ನು ಪ್ರೋತ್ಸಾಹಿಸದೇ ಇರಲು ಆಮದು ಶುಲ್ಕವನ್ನು ವಿಧಿಸುತ್ತವೆ. ಹಾಗೂ ಅದು ಹೆಚ್ಚಿದ್ದಲ್ಲಿ ಆಮದನ್ನು ಸ್ವಾಭಾವಿಕವಾಗಿಯೇ ಪ್ರೋತ್ಸಾಹಿಸಿದಂತಾಗುತ್ತದೆ. ಅದನ್ನು ಕಡಿಮೆ ಮಾಡಿದರೆ ಆಮದನ್ನು ಪ್ರೋತ್ಸಾಹಿಸಿದಂತಾಗುತ್ತದೆ.)



4.ಆರ್ಥಿಕತೆ ಸುಧಾರಿಸಿಕೊಳ್ಳಲು ಈ ಕೆಳಗಿನ ನೀತಿಗಳನ್ನು ಪಾಲಿಸಬೇಕು

(ಅ)ಸರ್ಕಾರದ ವೆಚ್ಚ ಕಡಿಮೆ ಮಾಡಬೇಕು. ವ್ಯವಸಾಯ, ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಕೊಡಲಾಗುತ್ತಿರುವ ಸಹಾಯಧನವನ್ನು ತೆಗೆದು ಹಾಕಬೇಕು (ಬಡದೇಶವಾದ ಭಾರತದಲ್ಲಿ ವ್ಯವಸಾಯ, ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಸಹಾಯಧನ ಕೊಡಲೇ ಬೇಕಾದ ಅನಿವಾರ್ಯತೆ ಇದೆ.)

(ಆ)ನಿಮ್ಮ ದೇಶದ ಸರಕುಗಳನ್ನು ರಫ್ತು ಮಾಡಿ (ಭಾರತ ವಾಣಿಜ್ಯ ಬೆಳೆ ಬೆಳೆದು ಉತ್ಪನ್ನಗಳನ್ನು ಗಳನ್ನು ರಫ್ತು ಮಾಡಿ ಆಹಾರದ ಬೆಳೆಗಳನ್ನು ಬೇರೆ ದೇಶಗಳಿಂದ ತರಿಸುವಂತೆ ಪಾಠ ಹೇಳಲಾಯಿತು. ಇದರಿಂದ ಕ್ರಮೇಣ ನಾವು ಪರಾವಲಂಬಿಗಳಾಗುತ್ತೇವೆ.

(ಇ)ಖಾಸಗೀಕರಿಸಿ.

ಆರೋಗ್ಯ ಕ್ಷೇತ್ರದಲ್ಲಿ ಜಾಗತೀಕರಣ:

1987 ರಲ್ಲಿ ವಿಶ್ವಬ್ಯಾಂಕ್ ಒಂದು ದಸ್ತಾವೇಜನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ವಿಶ್ವಬ್ಯಾಂಕ್ ಆರೋಗ್ಯ ಕ್ಷೇತ್ರದಲ್ಲಿ ಹಣ ಹೂಡಿಕೆ ಬಗ್ಗೆ ವಿವರಣೆ ನೀಡಿದೆ, ಹಾಗೂ ಜಾಗತೀಕರಣ ನೀತಿಯನ್ನು ಜಾರಿಗೆ ತರಲು ಅದನ್ನು ಅನುಸರಿಸಬೇಕೆಂದು ಸ್ಪಷ್ಟವಾಗುತ್ತದೆ. ಇದರ ನೇರ ಪರಿಣಾಮವಾಗಿ 1991 ರಲ್ಲಿ ಮನ್‌ಮೋಹನ್ ಸಿಂಗ್ ಅವರು ಹಣಕಾಸಿನ ಮಂತ್ರಿಗಳಾಗಿ ಮುಂಗಡ ಪತ್ರದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹಣಕಾಸು ಕಡಿತ ಮಾಡಿದರು, ಆದರೆ ಕುಟುಂಬ ಯೋಜನೆಗೆ ಮಾಡಲಿಲ್ಲ. ಇದರಿಂದಾಗಿ ಆರೋಗ್ಯ, ಪೌಷ್ಟಿಕತೆ ಹಾಗೂ ನೈರ್ಮಲ್ಯಕ್ಕೆ ಆಪತ್ತು ಬಂದೊದಗಿ-ತು. ಮುಂದಿನ ಮುಗಡ ಪತ್ರದಲ್ಲಿ ಈ ಕಡಿತ ಮುಂದುವರಿಯಿತಲ್ಲದೇ, ಆರೋಗ್ಯ ಕ್ಷೇತ್ರದಲ್ಲಿ ಜಾಗತಿಕರಣ ನೀತಿಯ ಅನೇಕ ಬದಲಾವಣೆಗಳು ಕಂಡುಬಂದವು.

ಏನಿದು ಬದಲಾವಣೆ :

ಆನಾರೋಗ್ಯ ಸಾಧನೆಗೆ 'ಪ್ರಾಥಮಿಕ ಆರೋಗ್ಯ ವ್ಯವಸ್ಥೆ' ಅಗತ್ಯ ನೈರ್ಮಲ್ಯ ಹಾಗೂ ಇತರೇ ಜೀವನದ ಅಗತ್ಯತೆಗಳಿಗೆ ಹಣಕಾಸಿನ ಕಡಿತವಾದ್ದರಿಂದ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಸಾಧಿಸಲು ಆಗುವುದಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪರಿಸ್ಥಿತಿ ಚಿಂತಾಜನಕವಾಗಿದೆ. ಸಾಂಕ್ರಾಮಿಕ ರೋಗಗಳಾದ ಪ್ಲೇಗು, ಡೆಂಗೂ, ಚಿಕುಗುನ್ಸ್, ಹಕ್ಕಿಜ್ವರ, ಜೆಪನೀಸ್ ಎಂಸೆಫೆಲೈರಿಸ್ ಹೆಚ್ಚುತ್ತಲಿದೆ. ಸಮಗ್ರ ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಜಾರಿಗೆ ಬರದೆ ಭಾರತದಂತ ಬಡ ರಾಷ್ಟ್ರ ಸಮಗ್ರ ಪ್ರಾಥಮಿಕ ಆರೋಗ್ಯ ಪಾಲನೆಗೆ ಹೆಚ್ಚು ಹಣ ಹೂಡಬೇಕಾಗುತ್ತದೆ. ಅದರ ಬದಲು ಅಗತ್ಯವಾದ, ಸಾವು-ನೋವು ಉಂಟುಮಾಡುವ ಸಮಸ್ಯೆಗಳಿಗೆ ಮಾತ್ರ ಗಮನ ಹರಿಸಲು ಆದೇಶ ನೀಡಲಾಗಿದೆ. ಉದಾ: ಪೋಲಿಯೇ, ಏಡ್ಸ್, ಮಲೇರಿಯಾ ಇತ್ಯಾದಿ.

ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಇಲ್ಲದ್ದರಿಂದ ಚಿಕಿತ್ಸೆ ಖಾಸಗಿ ಕೇಂದ್ರಗಳಲ್ಲಿ ಪಡೆಯಬೇಕಾಗುತ್ತದೆ ಹಾಗೂ ಅದು ದುಬಾರಿಯಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಪಯೋಗ ಶುಲ್ಕ ವಿಧಿಸುವ ಪ್ರಕ್ರಿಯೆ ಪ್ರಾರಂಭವಾದಾಗಿನಿಂದ, ಪ್ರಾಥಮಿಕ ಆರೋಗ್ಯ ಕೇಂದ್ರದ ಉಪಯೋಗವೂ ಕಡಿಮೆಯಾದುದು ಕಂಡುಬಂದಿದೆ.

ಆರೋಗ್ಯಕ್ಕೆ ಕಡಿಮೆ ಹಣಕಾಸು

ಆರೋಗ್ಯ-ಕ್ಕೆ ಮುಂಗಡ ಪತ್ರದಲ್ಲಿ ಕಡಿಮೆ ಹಣಕಾಸು ದೊರಕುತ್ತಿರುವುದರಿಂದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಶಿಥಿಲಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಇದನ್ನು ಬೇರೆ ದೇಶಗಳಲ್ಲಿಯೂ ನೋಡಬಹುದಾಗಿದೆ.

ನಿವ್ವಳ ಆಂತರಿಕ ಉತ್ಪನ್ನದ

ಭಾರತ	1.3 (1990ರಲ್ಲಿ)	9 (1999ರಲ್ಲಿ)
ಫಿಲಿಪೀನ್ಸ	3.5 (1985)	2 (2003)
ಮೆಕ್ಸಿಕೋ	4.7 70 ರ ದಶಕದಲ್ಲಿ	2.7 1980

ಮೆಕ್ಸಿಕೋದಲ್ಲಿ ಜಾಗತೀಕರಣ 1980 ರ ಹೊತ್ತಿಗೆ ಜಾರಿಯಾಗಿತ್ತು.

ರಾಜ್ಯದ ಆರೋಗ್ಯದ ಮುಂಗಡ ಪತ್ರದಲ್ಲಿಯೂ ಹಣಕಾಸು ಕಡಿತ 7 ರಿಂದ 5.5 ಆಗಿದೆ.

ಖಾಸಗೀಕರಣ : ಜನಾರೋಗ್ಯ ಸಾಧನೆಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದು ಅತ್ಯವಶ್ಯಕ. ಅದರ ಬದಲು (ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು) ಖಾಸಗೀಕರಣ ವ್ಯವಸ್ಥೆಯನ್ನು ಬಲಪಡಿಸಲು ಹೇಳಲಾಗಿದೆ. ಖಾಸಗಿ ಆರೋಗ್ಯ ಸಂಸ್ಥೆಗಳಿಗೆ ಸವಲತ್ತು (ನೀರು, ವಿದ್ಯುತ್, ಭೂಮಿ) ಕೊಟ್ಟು ಅವುಗಳನ್ನು ಸರಕಾರ ಪ್ರೋತ್ಸಾಹಿಸುತ್ತಿದೆ ಇದಲ್ಲದೇ ಖಾಸಗಿ ಸಂಸ್ಥೆಗಳು ಉಪಕರಣಗಳನ್ನು ತರಿಸಲು ಆಮದು ಕರ ರಿಯಾಯಿತಿಯನ್ನು ಪಡೆ-ಯುತ್ತದೆ. ಇದಕ್ಕೆ ಪ್ರತಿಯಾಗಿ ಈ ಸಂಸ್ಥೆಗಳು ಬಡಜನರಿಗೆ ಉಚಿತ ಚಿಕಿತ್ಸೆ ನೀಡಲು ಬದ್ಧರಾಗಿವೆ. ಆದರೆ ಈ ಸಂಸ್ಥೆಗಳ ಉಚಿತ ಚಿಕಿತ್ಸೆಗಳನ್ನು ನೀಡುತ್ತಿಲ್ಲ ಹಾಗೂ ಪ್ರಾಥಮಿಕ ಚಿಕಿತ್ಸೆ ಬದಲು ದ್ವಿತೀಯ ಹಾಗೂ ತೃತೀಯ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

32 ಸಾವಿರ ಹಳ್ಳಿಗಳಲ್ಲಿ ನೀರಿಲ್ಲ! ನೀರಿನ ಸದ್ಬಳಕೆಗೆ ಮುಂದಾಗೋಣ

ಕರ್ನಾಟಕದ ಒಟ್ಟು 59,630 ಹಳ್ಳಿಗಳ ಪೈಕಿ 32 ಸಾವಿರ ಹಳ್ಳಿಗಳಲ್ಲಿ ಕುಡಿಯುವ ನೀರಿನ ಗಂಭೀರ ಸಮಸ್ಯೆ ತಲೆದೋರಿದೆ. ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಕಲಬುರ್ಗಿ, ಯಾದಗಿರಿ, ವಿಜಾಪುರ, ಧಾರವಾಡ ಜಿಲ್ಲೆಗಳ ನೂರಾರು ಹಳ್ಳಿಗಳಿಗೆ ಈಗಾಗಲೇ ಟ್ಯಾಂಕರಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೂ ಸೇರಿದಂತೆ ರಾಜ್ಯದ ಎಲ್ಲಾ ನಗರಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಉಲ್ಬಣೀಸಿದೆ ರಾಜ್ಯದಲ್ಲಿ ಇನ್ನೊಂದು ತಿಂಗಳೊಳಗೆ ಮಳೆ ಬಾರದೇ ಹೋದರೆ ಕುಡಿಯುವ ನೀರಿಗಾಗಿನ ಹಾಹಾಕರ ಮುಗಿಲು ಮುಟ್ಟಲಿದೆ.

ಮಳೆ ವೈಫಲ್ಯದಿಂದ 157 ತಾಲೂಕುಗಳು ಬರಪೀಡಿತವಾಗಿವೆ. ಉಳಿದ ತಾಲೂಕುಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಇದೆ. ಅಣೆಕಟ್ಟುಗಳು ಬರಿದಾಗಿವೆ. ಕೆರೆಕಟ್ಟೆಗಳು ಬತ್ತಿವೆ. ಅಂತರ್ಜಲದ ಮಟ್ಟ ತೀವ್ರವಾಗಿ ಕುಸಿದಿದೆ. ಸಾವಿರ ಅಡಿ ಕೊರೆದರೂ ನೀರು ಸಿಗುತ್ತಿಲ್ಲ. ರಾಜ್ಯದಲ್ಲಿರುವ ಸುಮಾರು 3 ಲಕ್ಷ ಕೊಳವೆ ಬಾವಿಗಳು ನೀರು ಪೊರೈಕೆಯ ಪ್ರಮುಖ ಮೂಲಗಳಲ್ಲಿ ಒಂದಾಗಿವೆ. ಮಾರ್ಚ್ ಅಂತ್ಯದೊಳಗಾಗಿ ಮಳೆ ಬಾರದೇ ಇದ್ದರೆ ಈ ಕೊಳವೆ ಬಾವಿಗಳಲ್ಲಿ ಅರ್ಧದಷ್ಟು ಸಂಪೂರ್ಣ ಒಣಗಿಹೋಗುವ ಸಾಧ್ಯತೆಯಿದೆ.

ಗ್ರಾಮೀಣ ಕುಡಿಯುವ ನೀರಿನ ಪೂರೈಕೆ ಯೋಜನೆಗಾಗಿ ರಾಜ್ಯ ಸರ್ಕಾರ 2012–13 ನೇ ಸಾಲಿಗೆ 1700 ಕೋಟಿ ರೂ. ಗಳ ಕ್ರಿಯಾ ಯೋಜನೆ ರೂಪಿಸಿತ್ತು. ಇದರಡಿ ಮಾರ್ಚ್ 1 ರ ವರೆಗೆ ಸುಮಾರು 1250 ಕೋಟಿ ರೂ. ವಿವಿಧ ಕುಡಿಯುವ ನೀರಿನ ಯೋಜನೆಗಳಿಗೆ ವೆಚ್ಚ ಮಾಡಲಾಗಿದೆ. ಆದರೂ ಗ್ರಾಮೀಣ ಪ್ರದೇಶದಲ್ಲಿ ಸಮರ್ಪಕವಾಗಿ ಕುಡಿಯುವ ನೀರು ದೊರಕುತ್ತಿಲ್ಲ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಕೊಳವೆ ಬಾವಿ ತೋಡಲು, ಕಟ್ಟಿರುವ ಕೊಳವೆಬಾವಿಗಳ ರಿಪೇರಿ ಮಾಡಲು, ಪೈಪ್ ಲೈನ್ ಅಳವಡಿಕೆ ಮಾಡಲು ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಪೂರೈಕೆ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ 200 ಕೋಟಿ ರೂ ಅನುದಾನವನ್ನು ಫೆಬ್ರವರಿಯಲ್ಲಿ ಘೋಷಿಸಿ ಇದರಲ್ಲಿ 100 ಕೋಟಿ ರೂ ಗಳನ್ನು ಈ ತಿಂಗಳ ಆರಂಭದಲ್ಲಿ ಬಿಡುಗಡೆ ಮಾಡಿದೆ. ಇದರಿಂದಾಗಿ ಮೊದಲ ಹಂತದಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಸರಿಸುಮಾರು 45ಲಕ್ಷ ರೂ ದೊರಕಿದೆ. ಇದು ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ. ತಾಲೂಕು ಕೇಂದ್ರಗಳಲ್ಲಿ 24 ಗಂಟೆ ಸೇವೆ ಸಲ್ಲಿಸಲು ಕಂಟ್ರೋಲ್ ರೂಂ. ಗಳನ್ನು ತೆರೆಯಲಾಗಿವೆ. ಈ ಕಂಟ್ರೋಲ್ ರೂಂ ಗಳಿಗೆ ಪ್ರತಿ ನಿತ್ಯ ಸಾವಿರಾರು ದೂರುಗಳು ಬರುತ್ತಾ ಇದ್ದರೂ ದೂರುಗಳಿಗೆ ಪರಿಹಾರ ದೊರೆಯತ್ತಿಲ್ಲ. ಗಡ್ಡಕ್ಕೆ ಬೆಂಕಿ ಹತ್ತಿಕೊಂಡಾಗ ಬಾವಿತೋಡುವವರಂತೆ ಪ್ರತಿ ಸಲ ಬೇಸಿಗೆ ಹತ್ತಿರವಾದಾಗ ಮಾತ್ರವೇ ನೀರಿನ ಸಮಸ್ಯೆ ಬಗೆಹರಿಹಸಲು ಸರ್ಕಾರ ತಲೆಕೆಡಿಸಿಕೊಳ್ಳುತ್ತಿದೆ. ಶಾಶ್ವತ ಪರಿಹಾರ ಒದಗಿಸಲು ಆದ್ಯತೆ ನೀಡುತ್ತಿಲ್ಲ.

ಇವೆಲ್ಲದರ ಜೊತೆಯಲ್ಲಿ ನೀರಿನ ಸದ್ಬಳಕೆಗೆ ಒಂದು ಜನಾಂದೋಲನವನ್ನು ರೂಪಿಸುವುದು ಅಗತ್ಯವಿದೆ. ಸಕಾರ ವಿವಿಧ ಸಂಘ ಸಂಸ್ಥೆಗಳನ್ನೂ ಜನಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದು–ಕೊಂಡು ಮಳೆ ನೀರಿನ ಕೊಯ್ಲು, ನೀರಿನ ಸದ್ಬಳಕೆ, ನೀರು ಪೋಲಾಗುವುದನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾದ ನಿರಂತರವಾದ ಪ್ರಚಾರ ಅಭಿಯಾನ ನಡೆಯಬೇಕಾಗಿದೆ. ಒಂದು ಮೂಲದ ಪ್ರಕಾರ ಕಾವೇರಿ ಕೊಳ್ಳದಿಂದ ಬೆಂಗಳೂರಿಗೆ ಪ್ರತಿನಿತ್ಯ 1200 ದಶಲಕ್ಷ ಲೀಟರ್ ನೀರು ಪೂರೈಕೆಯಾಗುತ್ತಿದೆ. ಪ್ರತಿ ಒಂದು ಸಾವಿರ ಲೀಟರ್ ನೀರನ್ನು ಬೆಂಗಳೂರಿಗೆ ಹರಿಸಲು ಜಲಮಂಡಳಿ 26 ರೂ ಖರ್ಚು ಮಾಡುತ್ತಿದೆ. ಆದರೆ ಅಷ್ಟೆಲ್ಲಾ ಖರ್ಚುಮಾಡಿ ತರಲಾಗುವ ನೀರಿನ ಪೈಕಿ ಶೇ 40 ರಷ್ಟು ನೀರು ಚರಂಡಿಗೆ ಸೇರುತ್ತಿದೆ. ಪ್ರತಿನಿತ್ಯ ಸುಮಾರು 500 ದಶಲಕ್ಷ ಲೀಟರ್ ನೀರು ಪೋಲಾಗುತ್ತಿದೆ ಎನ್ನಲಾಗಿದೆ. ಇಂತಹ ಬೇಜವಾಬ್ದಾರಿತನವನ್ನು ತಡೆಗಟ್ಟಲು ಸರ್ಕಾರ ಹಾಗೂ ಜನತೆ ಒಟ್ಟಾಗಿ ಮುಂದಾಗಬೇಕಾಗಿದೆ. ಎಷ್ಟೋಕಡೆ ನೀರಿನ ಪೈಪು ಒಡೆದು ಹೋಗಿ ನೀರು ಸೋರಿಕೆಯಾಗುತ್ತಿರುತ್ತದೆ. ಸಾರ್ವಜನಿಕರು ಅದನ್ನು ಗಮನಿಸಿಯೂ ಸುಮ್ಮನಿರುತ್ತಾರೆ. ಜೀವಜಲವನ್ನು ಸಂರಕ್ಷಿಸುವುದು ನಮ್ಮೆಲ್ಲರ ಕಾಳಜಿಯಾಗಬೇಕಾಗಿದೆ.

ಚರಂಡಿಗಳಲ್ಲಿ ಹರಿದು ಹೋಗುವ ಕೊಳಚೆ ನೀರನ್ನು ಸಂಸ್ಕರಿಸಿ ಶುದ್ದೀಕರಣ ಮಾಡಿ ಅದರ ಪುನರ್ ಬಳಕೆಗೆ ಅಗತ್ಯ ಏರ್ಪಾಡು ಮಾಡುವುದು ಸಹ ಆಗಬೇಕಾಗಿದೆ. ರಾಜ್ಯಾದ್ಯಂತ ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ತಲೆದೋರಿರುವ ಜಲ ಕ್ಷಾಮದಿಂದಾಗಿ ಕುಗ್ರಾಮಗಳಲ್ಲಿ, ಲಿಂಬಾಣಿ ತಾಂಡಾಗಳಲ್ಲಿ ವಾಸಿಸುವ ಜನ ಬತ್ತಿಹೋದ ಕೆರೆಕಟ್ಟೆಗಳಲ್ಲಿ ಅಳಿದುಳಿದ ರಾಡಿ ನೀರನ್ನು ಕುಡಿಯುತ್ತಿರುತ್ತಾರೆ. ಶುದ್ಧ ನೀರಿನ ಕೊರತೆಯಿಂದಾಗಿ ಜನ ಅನೇಕ ತರಹದ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದಲೂ ಪರಿಸ್ಥಿಯನ್ನು ಎದುರಿಸಲು ಸರ್ಕಾರ ಸಮರೋಪಾದಿಯಲ್ಲಿ ಮುನ್ನುಗ್ಗಬೇಕಾಗಿದೆ.

ಅಗತ್ಯ ವಸ್ತುಗಳ ಐದು ವರ್ಷಗಳ ಬೆಲೆ ಏರಿಕೆ


(ಬೆಲೆ : ಪ್ರತಿ ಕೆ.ಜಿ.ಗೆ ರೂ.ಗಳಲ್ಲಿ)

	2009	2010	2011	2012	2013
ಅಕ್ಕಿ	34–36	30–32	28–30	34–35	45–50
ಬಿಳಿಜೋಳ	14.00	19.00	35.00	28.00	30–35
ರಾಗಿ	11–12	11–12	12–13	12–13	28–32
ಸಕ್ಕರೆ	22–23	32–33	28–29	29–30	35–40
ಬೆಲ್ಲ	23–24	28–29	25–26	30–32	38–40
ಗೋಧಿ	16–17	19–20	19–20	30–32	26–30
ಹೆಸರುಬೇಳೆ	48–49	82–84	64–66	58–60	75–80
ತೊಗರಿಬೇಳೆ	50–52	62–64	67–69	63–64	70–75
ಕಡ್ಲೆಬೇಳೆ	28–30	28–30	33–35	48–50	52–55
ಹಾಲು	14–16	16–19	19–21	21–24	27.00
ವಿದ್ಯುತ್ (ಯೂನಿಟ್)	4.12	4.42	4.70	4.70	6.20
ಮನೆ ಬಾಡಿಗೆ	4500	6000	8000	10000	12000
ಕಾಫಿ–ಟೀ	5–6	6–8	8–10	10–12	12–15
ಇಡ್ಲಿ–ವಡೆ	15–18	20–22	23–25	25–27	30–35
ಊಟ	18–20	22–25	25–30	30–35	40–45
ಎಲ್‌ಪಿಜಿ (1 ಕ್ಕೆ)	332.30	360.55	415.00	415.00	420.00
ಪೆಟ್ರೋಲ್	59.00	65.32	77.00	73.52	76.03
ಡೀಸೆಲ್	37.00	39.40	42.30	46.20	52.64
ಸನ್‌ಫ್ಲವರ್	55–56	56–58	74–75	77–78	85–90
ತಾಳೆಎಣ್ಣೆ	34–35	43–44	61–62	63–64	60–62
ಶೇಗಾ ಎಣ್ಣೆ	72.00	82.00	92.00	110.00	80–120
ಈರುಳ್ಳಿ	8–10	9–10	7–9	6–7	20–22
ಆಲೂಗೆಡ್ಡೆ	6–7	8–9	8–10	7–8	20–25
ಉದ್ದಿನಬೇಳೆ	46–48	72–76	70–72	60–62	75–80
ಮೊಟ್ಟೆ (1ಕ್ಕೆ)	2.30	2.60	2.50	2.90	4.25
ಮೀನು	50.00	80.00	90.00	120.00	150–225
ಮಟನ್	270	290	320	350	380

ಬೆಲೆ ಏರಿಕೆಯ ಧಾವಾಗ್ನಿ

ಬೆಲೆ ಏರಿಕೆಯ ಧಾವಾಗ್ನಿ ಬಡವರನ್ನು ಹೇಗೆ ಸುಡುತ್ತಿದೆ ಎಂಬುದನ್ನು ತೋರಿಸುವ ಈ ಪಟ್ಟಿಯನ್ನು ನೋಡಿ. ಕೇಂದ್ರ ಕಾಂಗ್ರೆಸ್ ಸರ್ಕಾರದ ಧೋರಣಗಳ ಪರಿಣಾಮವಾಗಿ 5 ವರ್ಷಗಳಲ್ಲಿ ಎಂತಹ ಅಗಾಧ ಬೆಲೆ ಏರಿಕೆ. ಎಷ್ಟು ದುಡಿದರೂ ಬಡವರಾಗೇ ಉಳಿದವರು ಜೀವ ಉಳಿಸಿಕೊಳ್ಳುವುದೆಂತು?

ಕಾರ್ಟೂನ್ ಕಾರ್ನರ್



ಕೊಡಗು ಜಿಲ್ಲೆಯಲ್ಲಿ ನೆಮ್ಮದಿಯ ಸಾವಿಗೂ ಅವಕಾಶವಿಲ್ಲ!

ಇದು ಫೆಬ್ರವರಿ 20, 2013 ರಂದು 'ಕೊಡಗು ಸಮಾಚಾರ' ಎಂಬ ಕೊಡಗಿನ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿ. ಕೊಡಗಿನಲ್ಲೂ ರಾಜ್ಯದಲ್ಲೂ ಜನಸಾಮಾನ್ಯರ ಬದುಕು, ಸಾಮಾಜಿಕ ಪರಿಸ್ಥಿತಿ ಎಲ್ಲಿಗೆ ಬಂದು ತಲುಪುತ್ತಿದೆ ಎನ್ನುವುದಕ್ಕೆ ಅರ್ಥ ಮಾಡೊಕೊಳ್ಳಲು ಇದು ಒಂದು ಸೂಚನೆ–ಒಂದು ಪ್ರತೀಕ ಎಂದು ಕಾಣುತ್ತಿದೆ. ನೀವೂ ಓದಿ ನೋಡಿ.

ಕೊಡಗಿನ ಕೊಡಗು ಜಿಲ್ಲೆಯಲ್ಲಿ ಈಗ ಯಾರು ಕೂಡ ನೆಮ್ಮದಿಯಿಂದ ಸಾಯುವಂತಹ ಸ್ಥಿತಿಯೂ ಇಲ್ಲ ಎನ್ನುವಂವತಹ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಕಾರಣ ಸತ್ತ ನಂತರ ಶವ ಸಂಸ್ಕಾರಕ್ಕೆ ಅವಕಾಶ ಸಿಗದೇ ಇರುವುದಾಗಿದೆ. ಶವ ಸಂಸ್ಕಾರ ಮಾಡಲು ಕೆಲವು ಸಂಘಟನೆಗಳು ಅಡ್ಡಿ ಮಾಡುತ್ತವೆ. ಇದು ಕೊಡಗು ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಪ್ರಕ್ಷುಬ್ಧ ವಾತಾವರಣ ಸೃಷ್ಠಿಯಾಗಲು ಕಾರಣವಾಗಬಹುದು.

ಕಳೆದ ವಾರದಲ್ಲಿ ಪರಿಶಿಷ್ಠ ಜಾತಿಗೆ ಸೇರಿದ ಚೇತನ್ ಎಂಬ ವ್ಯಕ್ತಿ ಅಫಘಾತಕ್ಕೆ ಒಳಗಾಗಿ ಸಾವನ್ನಪ್ಪಿದ್ದ. ಇಲ್ಲಿನ ಗ್ಯಾಸ್ ಏಜೆನ್ಸಿಯಲ್ಲಿ ನೌಕರನಾಗಿರುವ ಚೇತನ್ ಎಂಬ ವ್ಯಕ್ತಿಗೆ ಜೋಡುಬಟ್ಟಿಯಲ್ಲಿರುವ ಲೈಫ್ ಲೈನ್ ಆಸ್ಪತ್ರೆಯ ಬಳಿ ವಾಹನ ಡಿಕ್ಕಿ ಹೊಡೆದ ಪರಿಣಾಮ ಚೇತನ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದ.

ಆತನ ಬೈಕಿಗೆ ಡಿಕ್ಕಿ ಹೊಡೆದ ವಾಹನ ಯಾವುದೆಂದು ಇಲ್ಲಿಯವರೆಗೂ ತಿಳಿದಿಲ್ಲ. ಮರಣೋತ್ತರ ಪರೀಕ್ಷೆಯ ನಂತರ ಆತನ ಶವವನ್ನು ಶವ ಸಂಸ್ಕಾರಕ್ಕಾಗಿ ಗೋಣಿಕೊಪ್ಪಲಿನಲ್ಲಿರುವ ಸಾರ್ವಜನಿಕ ರುದ್ರ ಭೂಮಿಗೆ ತೆಗೆದುಕೊಂಡು ಹೋಗಲಾಗಿತ್ತು. ಅಲ್ಲಿ ಕೆಲವು ಹಿಂದೂಪರ ಸಂಘಟನೆಯವರು ಆತನ ಶವ ಸಂಸ್ಕಾರಕ್ಕೆ ಅವಕಾಶ ಕೊಡಲಿಲ್ಲ.

ಕಾರಣ ಆತ ಕ್ರೈಸ್ತ ಧರ್ಮದ ಪೆಂಥ ಕೋಸ್ತ್ ವರ್ಗಕ್ಕೆ ಮತಾಂತರಗೊಂಡಿದ್ದಾನೆ. ಆತನಿಗೆ ಇಲ್ಲಿ ಶವ ಸಂಸ್ಕಾರಕ್ಕೆ ಅವಕಾಶ ನೀಡುವುದಿಲ್ಲ ಎಂಬುದು ಅವರ ವಾದವಾಗಿತ್ತು. ವಾಸ್ತವದಲ್ಲಿ ಈ ರುದ್ರ ಭೂಮಿ ಸಾರ್ವಜನಿಕ ರುದ್ರ ಭೂಮಿಯಾಗಿದ್ದು, ಕ್ರೈಸ್ತ ಧರ್ಮಿಯರಿಗೆ ಮತ್ತು ಮುಸಲ್ಮಾನರಿಗೆ ಪ್ರತ್ಯೇಕ ರುದ್ರ ಭೂಮಿ ಎಂದು ಗುರುತಿಸಿ, ಅಲ್ಲಿ ಫಲಕವನ್ನು ಹಾಕಲಾಗಿದೆ. ಇದರ ಹಿಂಭಾಗದಲ್ಲಿಯೇ ಸುಮಾರು 50 ಸೆಂಟ್ ಕ್ರೈಸ್ತ ಧರ್ಮದ ರುದ್ರ ಭೂಮಿಯ ಸ್ಥಳವಾಗಿದೆ. ಇದನ್ನು ಪ್ರತ್ಯೇಕವಾಗಿ ಇಟ್ಟಿಲ್ಲ. ಹಾಗಾಗಿ ಈ ರುದ್ರ ಭೂಮಿಯ ಜವಾಬ್ದಾರಿ ತಮ್ಮದು ಎಂದು ಹಿಂದೂಪರ ಸಂಘಟನೆಯವರು ಹೇಳಿಕೊಳ್ಳುತ್ತಿದ್ದಾರೆ.

ವಾಸ್ತವದಲ್ಲಿ ಇದು ಖಾಸಗಿ ರುದ್ರ ಭೂಮಿ ಅಲ್ಲದೇ ಇರುವುದರಿಂದ ಇದರ ಜವಾಬ್ದಾರಿ ಸರಕಾರದ್ದಾಗಿದೆ.

ಆದರೆ ಸರಕಾರ ಇಲ್ಲಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವುದರಿಂದ, ಕೆಲವರು ಸಮಿತಿಗಳನ್ನು ರಚಿಸಿಕೊಂಡು, ರುದ್ರ ಭೂಮಿಯ ಪರಿಸರವನ್ನು ಉತ್ತಮವಾಗಿ ಇಡಲು ಪ್ರಯತ್ನಿಸುತ್ತಾರೆ.

ಆದರೆ ಸ್ಮಶಾನವನ್ನೇ ತಮ್ಮದೆಂದು ಹೇಳಿಕೊಂಡು ಅಲ್ಲಿ ಶವ ಸಂಸ್ಕಾರಕ್ಕೆ ಅವಕಾಶ ಕಲ್ಪಿಸದೇ ಇರುವುದು ಎಷ್ಟು ಸರಿ ಎಂಬ ಪ್ರಶ್ನೆ ಈಗ ಹಲವರನ್ನು ಕಾಡುತ್ತಿದೆ.

ಚೇತನ್ ರವರ ಕುಟುಂಬಸ್ಥರ ಪ್ರಕಾರ ಆತ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿಲ್ಲ. ಒಂದೆರಡು ಬಾರಿ ಚರ್ಚಿಗೆ ತೆರಳಿರಬಹುದು. ಚರ್ಚಿಗೆ ತೆರಳಿದ ತಕ್ಷಣ ಆತ ಮತಾಂತರ ಹೊಂದಿದ್ದಾನೆ ಎಂಬ ಹೇಳಲು ಸಾಧ್ಯವಿಲ್ಲ. ಒಂದು ವೇಳೆ ಆತ ಮತಾಂತರ ಹೊಂದಿದ್ದ ಎಂದಾದರೆ ಇದಕ್ಕೆ ಕಾರಣಕರ್ತರು ಮೇಲ್ವರ್ಗದ ಹಿಂದೂ ಜನಾಂಗದವರು. ಅವರು ಇವರನ್ನು ಅಸ್ಪೃಶ್ಯರಂತೆ ಕಾಣುವುದರಿಂದ, ಕ್ರೈಸ್ತ ಧರ್ಮಕ್ಕೆ ಅವರು ಮತಾಂತರ ಹೊಂದುತ್ತಾರೆ.

ಇಲ್ಲಿ ಚೇತನ್ ಶವವನ್ನು ಹುಣಸೂರಿನ ಸ್ಮಶಾನಕ್ಕೆ ಶವ ಸಂಸ್ಕಾರಕ್ಕಾಗಿ ತೆಗೆದುಕೊಂಡು ಹೋಗಲಾಯಿತು. ಆದರೆ ಅಲ್ಲಿ ಚರ್ಚ್‌ನವರು ಕೂಡ ತಮ್ಮ ಸ್ಮಶಾನ ಭೂಮಿಯಲ್ಲಿ ಶವ ಸಂಸ್ಕಾರಕ್ಕೆ ಅವಕಾಶ ನೀಡಲಿಲ್ಲ. ಕಾರಣ ಚೇತನ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು.

ಎರಡೂ ಕಡೆ ಶವ ಸಂಸ್ಕಾರಕ್ಕೆ ಅವಕಾಶವಿಲ್ಲದೇ ಇರುವಾಗ, ಶವವನ್ನು ತಮ್ಮ ಬಳಿ ಇಟ್ಟುಕೊಳ್ಳಲು ಸಾಧ್ಯವೂ ಇಲ್ಲದೆ, ಸಮಯ ಕಳೆಯುತ್ತಿದ್ದಂತೆ ಅಪಾಂ ಎದುರಾಗುತ್ತಿದೆ ಎಂದು ಮನಗಂಡು, ಅವರ ಕುಟುಂಬಸ್ಥರು ಹುಣಸೂರಿನ ಬಳಿ ಕೆರೆಯ ಸಮೀಪ ಶವವನ್ನು ಹೂತಿದ್ದಾರೆ. ತಮ್ಮ ಬಂಧುವಿನ ಶವವನ್ನು ಅನಾಥವಾಗಿ ಹೂಳಬೇಕಾಯಿತಲ್ಲ ಎಂಬುದು ಅವರ ಕುಟುಂಬಸ್ಥರ ವೇದನೆಯಾಗಿದೆ.

ಜಿಲ್ಲೆಯಲ್ಲಿ ಇತ್ತೀಚೆಗೆ ಅಮ್ಮತ್ತಿ ಪ್ರದೇಶದಲ್ಲಿ ಶವ ಸಂಸ್ಕಾರಕ್ಕೆ ಅಡ್ಡಿಪಡಿಸಿದ ಪ್ರಕರಣ ಎರಡು ಬಾರಿ ನಡೆದಿದೆ. ಅರ್ವತೊಕ್ಲು ಕಾರೆಕಾಡು ಪೈಸಾರಿಯಲ್ಲಿ ಕೂಡ ಇಂತಹದ್ದೇ ಒಂದು ಘಟನೆ ನಡೆದಿದೆ. ಹೀಗೆ ಕೊಡಗಿನಲ್ಲಿ ಮೇಲಿಂದ ಮೇಲೆ ಶವ ಸಂಸ್ಕಾರಕ್ಕೂ ಅಡ್ಡಿಪಡಿಸುತ್ತಿರುವ ಪ್ರಕರಣಗಳು ಬೆಳಕಿಗೆ ಬರುತ್ತಿವೆ.

ಇವೆಲ್ಲವೂ ಜಿಲ್ಲೆಯಲ್ಲಿ ಬಡ ವರ್ಗದ..., ಹಿಂದುಳಿದ ವರ್ಗದವರ, ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯವಾಗಿವೆ. ಶವ ಸಂಸ್ಕಾರಕ್ಕೆ ಇಷ್ಟೊಂದು ಸಮಸ್ಯೆಗಳನ್ನು ಜನರು ಎದುರಿಸುತ್ತಿರುವಾಗ, ಕೊಡಗು ಜಿಲ್ಲೆಯಲ್ಲಿ ಜಿಲ್ಲಾಡಳಿತ ಏನು ಮಾಡುತ್ತಿದೆ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ. ಜಿಲ್ಲಾಡಳಿತ ಇದಕ್ಕೊಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಇದು ಬೃಹದಾಕಾರದ ಸಮಸ್ಯೆಯಾಗಿ ಕಾಡಬಹುದು.

ದೇಶದ ಉದ್ದಗಲಕ್ಕೂ ಸಂಚರಿಸುವ ಸಿಪಿಐ(ಎಂ) ನೇತೃತ್ವದ ಸಂಘರ್ಷ ಸಂದೇಶ ಜಾಥಾ

ನಾಲ್ಕು ಜಾಥಾಗಳು ಕನ್ಯಾಕುಮಾರಿ, ಕೋಲ್ಕತ್ತಾ, ಮುಂಬೈ ಮತ್ತು ಅಮೃತಸರದಿಂದ ಆರಂಭ

ಮಾರ್ಚ್ 19ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ

ಜನರು ಎದುರಿಸುತ್ತಿರುವ ಬಹುಮುಖ್ಯ ಸಮಸ್ಯೆಗಳನ್ನು ಇಟ್ಟುಕೊಂಡು ಹಾಗೂ ಸಿಪಿಐ(ಎಂ) ಪ್ರತಿಪಾದಿತ ಪರ್ಯಾಯ ರಾಜಕಾರಣ ಕುರಿತು ಜನರನ್ನು ಜಾಗೃತಿಗೊಳಿಸುವುದು ಜಾಥಾದ ಪ್ರಮುಖ ಉದ್ದೇಶವಾಗಿದೆ.

ಯುಪಿಎ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ನೀತಿಗಳು ನಿರಂತರವಾಗಿ ಬೆಲೆ ಏರಿಕೆಗೆ ಕಾರಣವಾಗುತ್ತಿವೆ. ಕೃಷಿ ಬಿಕ್ಕಟ್ಟು, ನಿರುದ್ಯೋಗ ಹೆಚ್ಚಳವಾಗುತ್ತಿದೆ, ಅಲ್ಲದೇ ಭ್ರಷ್ಟಾಚಾರ ಮೇರೆ ಮೀರುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿಯ ಮೂಲ ನೀತಿಗಳನ್ನು ನೋಡಿದಾಗ ಈ ಎರಡೂ ಪಕ್ಷಗಳಿಗೂ ಯಾವುದೇ ವ್ಯತ್ಯಾಸವಿಲ್ಲವಾಗಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರದ ಆಡಳಿತದಲ್ಲಿ ಜಾರಿಯಾಗಿರುವ ಜನ ವಿರೋಧಿ ನೀತಿಗಳು, ಆರ್ಥಿಕ ನೀತಿಗಳು ಹಾಗೂ ಕೋಮುವಾದೀಕರಣದ ವಿರುದ್ಧ ಜನರು ಐಕ್ಯ ಹೋರಾಟ ಮಾಡುವಂತೆ ಜಾಥಾ ಕರೆ ನೀಡಲಿದೆ. ಇಷ್ಟೇ ಅಲ್ಲದೇ ಈ ಕೆಳಗಿನ ವಿಷಯಗಳನ್ನು ಜಾಥಾ ಪ್ರಮುಖವಾಗಿ ಕೈಗೊಂಡಿದೆ.

1. ಭೂಮಿ ಮತ್ತು ವಸತಿ ಹಕ್ಕು: ಭೂ ರಹಿತರಿಗೆ ದೇಶದಲ್ಲಿರುವ ಹೆಚ್ಚುವರಿ ಭೂಮಿ ಹಂಚಲು ಕಾನೂನು ತಿದ್ದುಪಡಿ ಮಾಡಬೇಕು. ಭೂ ರಹಿತ ಜನರಿಗೆ ನಿವೇಶನ ಮತ್ತು ವಸತಿ ಒದಗಿಸುವ ಭರವಸೆಯನ್ನು ಸರ್ಕಾರ ನೀಡಬೇಕು.

2. ಬೆಲೆ ಏರಿಕೆ ನಿಯಂತ್ರಣ ಮತ್ತು ಆಹಾರದ ಹಕ್ಕು: ಬಡತನವನ್ನು ವರ್ಗೀಕರಿಸುವ ಎಪಿಎಲ್, ಬಿಪಿಎಲ್ ಪಟ್ಟಿ ಪದ್ಧತಿಯನ್ನು ರದ್ದು ಮಾಡಿ ಸಾರ್ವತ್ರಿಕವಾಗಿ ಪ್ರತಿ ಕುಟುಂಬಕ್ಕೂ ರೂ. 2 ಅಂತೆ 35 ಕೆಜಿ ಅಕ್ಕಿ ನೀಡಬೇಕು. ಆಹಾರ ಮತ್ತು ಇನ್ನಿತರ ಅಗತ್ಯ ವಸ್ತುಗಳ ವಾಯಿದಾ ವ್ಯಾಪಾರ ಮುಂಗಡ ವ್ಯಾಪಾರದ ಮೇಲೆ ನಿರ್ಬಂಧ ಹೇರಬೇಕು.

3. ಶಿಕ್ಷಣ ಮತ್ತು ಆರೋಗ್ಯದ ಹಕ್ಕು: ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಖಾಸಗೀಕರಣವನ್ನು ನಿಲ್ಲಿಸಬೇಕು. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಹೆಚ್ಚು ಹಣ ಹಂಚಿಕೆ ಮಾಡಬೇಕು. ಶಿಕ್ಷಣದ ಹಕ್ಕು ಖಾತರಿ ನೀಡಬೇಕು. ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ಮತ್ತಷ್ಟು ಸಶಕ್ತಗೊಳಿಸುವ ಜೊತಗೆ ಖಾಸಗಿ ಆರೋಗ್ಯ ಕ್ಷೇತ್ರವನ್ನು ನಿಯಂತ್ರಣದಲ್ಲಿಡಲು ಕಠಿಣ ಕ್ರಮಗಳನ್ನು ಜಾರಿಗೊಳಿಸಬೇಕು.

4. ಉದ್ಯೋಗದ ಹಕ್ಕು: ಉದ್ಯೋಗ ಸೃಷ್ಟಿಸಲು ಅನುವಾಗುವಂತೆ ಸಾರ್ವಜನಿಕ ಬಂಡವಾಳ ಹೂಡಿಕೆ ಮಾಡುವ ಭರವಸೆಯನ್ನು ನೀಡಬೇಕು. ಎಲ್ಲ ಹುದ್ದೆಗಳ ಮೇಲಿರುವ ನಿರ್ಬಂಧವನ್ನು ಅದರಲ್ಲೂ ಮುಖ್ಯವಾಗಿ ಬ್ಯಾಕ್‌ಲಾಗ್ ಹುದ್ದೆಗಳ ಮೇಲಿನ ನಿರ್ಬಂಧವನ್ನು ತೆಗೆದುಹಾಕಿ ಭರ್ತಿಗೆ ಕ್ರಮ ಕೈಗೊಳ್ಳಬೇಕು. ಬೆಲೆ ಹೆಚ್ಚಳ ಸೂಚ್ಯಂಕದೊಂದಿಗೆ ಕೂಲಿ ಹೆಚ್ಚು ಮಾಡುವ ಜೊತೆಗೆ ಎನ್‌ಆರ್‌ಇಜಿ ಯೋಜನೆಯ ಕೂಲಿ ದಿನವನ್ನು ಹೆಚ್ಚಿಸಬೇಕು.

5. ಸಾಮಾಜಿಕ ಹಕ್ಕು ಮತ್ತು ಮಹಿಳೆಯರ ಹಕ್ಕು: ಮಹಿಳೆಯರ ಮೇಲೆ ನೆಡೆಯುತ್ತಿರುವ ದೌರ್ಜನ್ಯ ತಡೆಯಬೇಕು. ವಿಧಾನಸಭಾ, ಸಂಸತ್‌ನಲ್ಲಿ 1/3 ಮೀಸಲಾತಿ ನೀಡಬೇಕು. ದಲಿತರ ಮೇಲಿನ ತಾರತಮ್ಯ ಮತ್ತು ಸಾಮಾಜಿಕ ಆಚರಣೆಗಳನ್ನು ಕಡಿವಾಣ ಹಾಕಬೇಕು. ಆದಿವಾಸಿಗಳ ಹಕ್ಕು ಮತ್ತು ಭೂಮಿ ಹಕ್ಕು ರಕ್ಷಿಸಬೇಕು. ಮುಸ್ಲಿಂ ಸಮುದಾಯಕ್ಕೆ ಸಮಾನ ಶಿಕ್ಷಣ, ಉದ್ಯೋಗದ ಹಕ್ಕು ನೀಡಬೇಕು.

6. ಭ್ರಷ್ಟಾಚಾರ ನಿರ್ಮೂಲನೆ: ತನಿಖೆಯ ಸ್ವತಂತ್ರ ಅಧಿಕಾರ ಕೊಡುವ ಲೋಕ್‌ಪಾಲ್ ಕಾಯ್ದೆ ಜಾರಿಗೆ ತರಬೇಕು. ವಿದೇಶದ ಬ್ಯಾಂಕ್‌ಗಳಲ್ಲಿ ಇಟ್ಟಿರುವ ಕಪ್ಪು ಹಣ ವಾಪಸ್ ತರಬೇಕು. ಕಾರ್ಪೋರೇಟ್ ಜವಾಬ್ದಾರಿಯ ನಷ್ಟವನ್ನು ಅವರಿಂದಲೇ ವಸೂಲಿ ಮಾಡಬೇಕು. ಭ್ರಷ್ಟರನ್ನು ಜೈಲಿಗೆ ತಳಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೆ.ಆರ್.ಪುರಂದಲ್ಲಿ ಸಂಘರ್ಷ ಜಾಥಾ ಕಲರವ

ಆರ್. ಜಯಕುಮಾರ್

ಡಂ. ಡಂ, ಡಮಾರ್, ಬೆಂಗಳೂರಿನ ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಜಿನಪುರದಲ್ಲಿ ಮಾರ್ಚ್ 1 ರಂದು ಸಂಜೆ ಕಿವಿಗಡಚಿಕ್ಕುವ ಮತಾಪುಗಳ ಶಬ್ದ. ಎಲ್ಲೆಂದರಲ್ಲಿ ಕೆಂಬಾವುಟಗಳ ಹಾರಾಟ, ಕೆಂಪು ಸೀರೆ, ಬಿಳಿ ರವಿಕೆ ತೊಟ್ಟ ಕಾರ್ಯ ಕರ್ತೆಯರ ಉತ್ಸಾಹದ ಓಡಾಟ. ಸ್ವಲ್ಪ ದೂರದಲ್ಲಿ ಗಜಗಂಭೀರದಿಂದ ಎದ್ದು ನಿಂತಿದ್ದ ವೇದಿಕೆ. ನೋಡ ನೋಡುತ್ತಿದ್ದಂತೆ ಶೃಂಗರಿಸಿಕೊಂಡು ಕನ್ಯಾಕುಮಾರಿಯಿಂದ ಆಗಮಿಸಿದ ವಾಹನ. ನೆರೆದ ಜನಸಮೂಹದ ನಡುವೆ ವಿದ್ಯುತ್ ಸಂಚಾರದ ಅನುಭವ. ಘೋಷಣೆಯೊಂದಿಗೆ ಸ್ವಾಗತ.

ಹೌದು. ನವಭಾರತ ನಿರ್ಮಾಣಕ್ಕಾಗಿ ರಾಜಧಾನಿ ನವದೆಹಲಿಗೆ ಸಿಪಿಐ (ಎಂ) ಸಂಘಟಿಸಿರುವ "ಸಂಘರ್ಷ ಸಂದೇಶ ಜಾಥಾ" ದೇಶದ ನಾಲ್ಕು ಮೂಲೆಗಳಿಂದ ಹೊರಟಿದೆ. ದಕ್ಷಿಣ ಭಾರತದ ಕನ್ಯಾಕುಮಾರಿಯಿಂದ ಫೆಬ್ರವರಿ 24 ಕ್ಕೆ ಪಕ್ಷದ ಪೊಲಿಟ್ ಬ್ಯುರೋ ಸದಸ್ಯರಾದ ಕಾಂ. ವರದರಾಜನ್ ನೇತೃತ್ವದಲ್ಲಿ ಹೊರಟ ಜಾಥಾವು ಬೆಂಗಳೂರು ಸಮೀಪದ ಅತ್ತಿಬೆಲೆ ಮೂಲಕ ಕರ್ನಾಟಕ ಪ್ರವೇಶಿಸಿತು. ಪಕ್ಷದ ಮುಖಂಡರು, ಕೇರಳದ ಮಾಜಿ ಶಿಕ್ಷಣ ಸಚಿವರೂ ಆದ ಕಾಂ. ಎಂ.ಎ. ಬೇಬಿ ನೇತೃತ್ವದ ಉಪಜಾಥವು ಮಾರ್ಚ್ 1 ರಂದು ಸಂಜೆ ಬೆಂಗಳೂರಿನ ಕೆ.ಆರ್.ಪುರಂ, ವಿಧಾನಸಭಾ ಕ್ಷೇತ್ರದ ವಿಜಿನಪುರಕ್ಕೆ ಆಗಮಿಸಿತು. ಸಿಪಿಐ(ಎಂ) ಬೆಂಗಳೂರು, ಪೂರ್ವವಲಯ ಸಮಿತಿ, ಕಾರ್ಯದರ್ಶಿ ಕಾಂ.ಗೌರಮ್ಮ ನೇತೃತ್ವದಲ್ಲಿ ಕಾರ್ಯಕರ್ತರೆಲ್ಲ ಹಗಲಿರುಳು ದುಡಿದು ಜಾಥ ಸ್ವಾಗತಕ್ಕೆ ಮಾಡಿದ ಶ್ರಮ ಸಾರ್ಥಕಗೊಂಡಿತ್ತು.

'ಆಮ್ ಆದ್ಮಿಕಾ ಪಾರ್ಟಿ' ಎಂದು ಬೊಗಳೆ ಹೊತ್ತ ದೇಶದಲ್ಲಿ ಬಡವರ ಬದುಕನ್ನು ಮೂರಾಬಟ್ಟೆ ಮಾಡಿರುವ ಕಾಂಗ್ರೆಸ್ ಸರಕಾರದ ದಿವಾಳಿಕೋರ, ಜನವಿರೋಧಿ ನೀತಿಯನ್ನು ಬಯಲುಗೊಳಿಸುತ್ತಾ ಸಾಗಿರುವ ಕೆಂಬಾವುಟದ ಈ ಸಂಘರ್ಷ ಯಾತ್ರೆ ಜನರ ಮೊಗದಲ್ಲಿ ಮೂಡಿಸಿದ ಭರವಸೆಯ ಗೆರೆಗಳು [illegible]ನ ದಿಕ್ಸೂಚಿಯಂತೆ ಗೋಚರಗೊಂಡಿತು. ಕಾಂ.ಬೇಬಿಯವರು ಜಾಥ ವಾಹನದಿಂದ ಇಳಿಯುತ್ತಿದ್ದಂತೆ, ಅವರ ಕೊರಳಗೆ ಬಿದ್ದ ಪುಷ್ಪಮಾಲೆ ಲಕ್ಷಾಂತರ ಜನರ ಆಶಯದಂತಿತ್ತು. ವಿಜಿನಪುರದ ಕೊಳಗೇರಿ ವಾಸಿಗಳು, ಮುಸ್ಲಿಂ ಮಹಿಳೆಯರು, ಯುವಕರು, ಪ್ರದೇಶದ ನಾನಾ ಕಾರ್ಖಾನೆಗಳಲ್ಲಿ ಕಾರ್ಯವೆಸಗುವ ನೂರಾರು ಕಾರ್ಮಿಕರು, ಸ್ಥಳೀಯ ನಾಗರೀಕರು, ಯುವಕರು ಸೇರಿದಂತೆ ದೊಡ್ಡ ಜನ ಸಮೂಹವೇ ಜಾಥ ಸ್ವಾಗತಕ್ಕೆ ಅಲ್ಲಿ ನೆರೆದಿತ್ತು.

ಆಹಾರ, ವಾಸಿಸಲು ಮನೆ, ಭೂಮಿ, ಆರೋಗ್ಯ ಅಗ್ಗದ ಔಷಧ, ಉದ್ಯೋಗದ ಹಕ್ಕು, ಶಿಕ್ಷಣ, ಸಾಮಾಜಿಕ ನ್ಯಾಯ, ಭ್ರಷ್ಟಾಚಾರದ ನಿರ್ಮೂಲನೆ, ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕೊನೆ.... ಹೀಗೆ ದೇಶದ ಜನರ ಮನದಾಳದ ಬೇಡಿಕೆಗಳನ್ನು ಮುಂದಿರಿಸಿ ರಾಷ್ಟ್ರದ ರಾಜಧಾನಿಯೆಡೆಗೆ ಸಾಗಿರುವ ಜಾಥಕ್ಕೆ ಕರ್ನಾಟಕದಲ್ಲಿ ದೊರೆತ ಜನಬೆಂಬಲದ ಪ್ರತಿಕವೇ ಕೆ.ಆರ್. ಪುರಂ ಬಹಿರಂಗ ಸಭೆ. ಸಂಜೆ 5–00 ರಿಂದ ಸರಿಸುಮಾರು ರಾತ್ರಿ 10–00 ರವರೆಗೂ ನೆರೆದ ಜನ ವೇದಿಕೆಯಿಂದ ಮೊಳಗಿದ ಮುಖಂಡರ ಆಗ್ರಹ ಪೂರ್ವ ಮಾತುಗಳಿಗೆ ಸಹಮತ ವ್ಯಕ್ತಪಡಿಸಿ ಬೆಂಬಲಿಸಿದರು.

"ಕಾಂ.ಗೌರಮ್ಮ ರಂಥ ಮಹಿಳಾ ಮುಂಡರೊಬ್ಬರು ಪ್ರದೇಶದಲ್ಲಿ ಪಕ್ಷಕ್ಕೆ ನ್ಯಾಯಕತ್ವ ನೀಡಿರುವುದು ಸಂತಸದ ವಿಚಾರ. ಮಹಿಳೆಯರು ನಾನಾ ದೌರ್ಜನ್ಯಗಳಿಂದ ನೊಂದಿರುವ ಈ ಕಾಲಘಟ್ಟದಲ್ಲಿ ಮಹಿಳೆ ಯೊಬ್ಬರು ಜನನಾಯಕರಾಗಿ ಕಾರ್ಯವೆಸಗಿರುವುದು ಸ್ಫೂರ್ತಿಯ ವಿಚಾರ". ಹೀಗೆ ತಮ್ಮ ಭಾಷಣವನ್ನು ಆರಂಭಿಸಿದ ಕಾಂ.ಬೇಬಿಯವರು ಸರಿ ಸುಮಾರು 1 ಗಂಟೆಗಳ ಕಾಲ ದೇಶದ ಜನರ ಬದುಕು, ರಾಜಕೀಯ ದುರಾಡಳಿತ, ಪರ್ಯಾಯ ವ್ಯವಸ್ಥೆಯ ನಿರ್ಮಾಣದ ಅಗತ್ಯದ ಬಗ್ಗೆ ವಿವರಿಸಿದರು. ಕಾಂಗ್ರೆಸ್, ಬಿಜೆಪಿ ಪಕ್ಷಗಳು ಅನುಸರಿಸಿದ ಜನವಿರೋಧಿ ಧೋರಣೆಗಳೇ ದೇಶದ ಇಂದಿನ ಸ್ಥಿತಿಗೆ ಕಾರಣ. ರೈತ, ಕಾರ್ಮಿಕ, ದಲಿತ, ಅಲ್ಪಸಂಖ್ಯಾತರು ಸೇರಿದಂತೆ ದೇಶದ ಬಹುಪಾಲು ಜನರಿಗೆ ಪರ್ಯಾಯ ಬದುಕು, ನಾಯಕತ್ವ ನೀಡಲೆಂದೇ ಸಿಪಿಎಂ ಈ 10 ಸಾವಿರ ಕಿ.ಮೀ ದೀರ್ಘ ಪ್ರಯಾಣದ ಸಂಘರ್ಷ ಸಂದೇಶ ಜಾಥ ಸಂಘಟಿಸಿದೆ ಎಂದು ವಿವರಿಸಿದರು. ಕಿವಿ ಇಲ್ಲದ ಸರಕಾರಕ್ಕೆ ಜನರ ಸಂಕಟದ ಬಗ್ಗೆ ಮನವರಿಕೆ ಮಾಡಲು ಹಾಗು ಜನರ ಮನದಾಳದ ಇಂಗಿತ ಅರಿಯಲು ಸಾಗಿರುವ ಜಾಥಾದ ಹಾದಿ ಉದ್ದಕ್ಕೂ ಸಿಪಿಐ(ಎಂ) ಪಕ್ಷದ ನೀತಿ ನಿರೂಪಣೆ ಹಾಗೂ ಜನರ ಅಭಿಪ್ರಾಯ ಸಂಗ್ರಹಿಸಲಾಗುವುದು. ಕೇಂದ್ರ ಸರಕಾರದ ಜನವಿರೋಧಿ ನೀತಿ ವಿರುದ್ಧ ಇತ್ತೀಚೆಗೆ ನಡೆದ 48 ಗಂಟೆಗಳ ಮುಷ್ಕರ ಹಾಗೂ ತ್ರಿಪುರದಲ್ಲಿ ನಡೆದ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷವು ಸತತವಾಗಿ 5ನೇ ಬಾರಿಗೆ ಅಧಿಕಾರಕ್ಕೆ ಏರಿರುವುದು ದೇಶದಲ್ಲಿ ಬದಲಾವಣೆ



ಗಾಳಿ ಬೀಸಲಾರಂಭಿಸಿರುವುದರ ದಿಕ್ಸೂಚಿ ಯಾಗಿದೆ. ಬಡತನದಿಂದ ಜನ ಸಾಯುತ್ತಿರುವ ವೇಳೆ ಆಹಾರ ನಿಗಮದ ಗೋಡೌನ್‌ಗಳಲ್ಲಿ ಕೋಟ್ಯಾಂತರ ಟನ್ ಆಹಾರ ಪದಾರ್ಥಗಳು ಕೊಳೆಯುತ್ತಿವೆ. ಇದನ್ನು ಉಚಿತವಾಗಿ ಬಡವರಿಗೆ ಹಂಚಲು ಸಾಧ್ಯವಿಲ್ಲವೇ ಎಂದು ಸುಪ್ರೀಂ ಕೋರ್ಟ್ ಸರಕಾರವನ್ನು ಪ್ರಶ್ನಿಸಿತು. 'ಅದು ಸಾಧ್ಯವಿಲ್ಲವೆಂದು' ಸಾರಿರುವ ಸರಕಾರ ಇಲಿ–ಹೆಗ್ಗಣಗಳಿಗೆ ಮಾತ್ರ ನಿತ್ಯವೂ ಲಕ್ಷಾಂತರ ಟನ್ ಆಹಾರ ಪದಾರ್ಥಗಳನ್ನು ಉಚಿತವಾಗಿ ತಿನ್ನಲು ಬಿಟ್ಟಿದೆ. ಇದು ಕೇಂದ್ರ ಸರಕಾರದ ನೀತಿ ಎಂದು ಕಾಂ.ಬೇಬಿ ವಿವರಿಸಿದಾಗ ಇಡೀ ಸಭಾಂಗಣವೇ ದಿಗ್ಭ್ರಮೆಗೊಂಡಿತು. ದೇಶದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿದೆ. ಮಹಿಳೆಯರಿಗೆ ರಕ್ಷಣೆ ಬೇಡುವ ವಿಚಾರವಲ್ಲ, ಅದು ಸರಕಾರದ ಕರ್ತವ್ಯ. ಮದುವೆಯಾದ ಹೆಣ್ಣುಮಗಳು ಗಂಡನ ಹೆಸರನ್ನ ತನ್ನ ಹೆಸರಿಗೆ ಜೋಡಿಸಿಕೊಳ್ಳುವುದು, ಮಕ್ಕಳ ಹೆಸರು ಮುಂದೆ ತಂದೆ ಸರ್‌ನೇಮ್ ಬರೆಸುವ ಬದಲು ಹೆಂಡತಿ ಹೆಸರನ್ನೇ ಗಂಡ ಮಕ್ಕಳು ಬಳಸುವಂತಹ ಮನೋಭಾವ ಬಂದರೆ, ಅದೇ ಬದಲಾವಣೆಗೆ ನಾಂದಿಯಾಗಬಹುದು ಎಂದು ಸ್ತ್ರೀ ಸಬಲೀಕರಣದ ಮಹತ್ವದ ಬಗ್ಗೆ ವಿವರಿಸಿದರು.

ಹಿಂದೆ ಬಿಜೆಪಿ ಮುಖಂಡ ಲಾಲ್ ಕೃಷ್ಣಾ ಅಡ್ವಾನಿ ಜನರ ಮನಸ್ಸು ಒಡೆಯುವ ಕೋಮುವಾದಿ ರಥಯಾತ್ರೆ ನಡೆಸಿದರೆ, ಸಿಪಿಐ(ಎಂ) ಸಂಘಟಿಸಿರುವ ಈ ಜಾಥಾ ಜನರ ಮನಸ್ಸು ಬೆರೆಸಿ, ಬದುಕು ಹಸನಾಗಿಸುವ ಪ್ರಯತ್ನ ಎಂದು ಜಾಥದಲ್ಲಿ ಪಾಲ್ಗೊಂಡು ಮಾತನಾಡಿದ ಕಿಸಾನ್ ಸಭಾ ಮುಖಂಡರಾದ ಕಾಂ. ವಿಜು ಕೃಷ್ಣನ್ ವಿವರಿಸಿದರು. ಸಿಪಿಐ(ಎಂ) ಚರಿತ್ರೆಯಲ್ಲೇ ಇದು ಬೃಹತ್ ಜನಪರ ಜಾಥಾ. ಭಾರತದಲ್ಲಿ ಪ್ರತಿದಿನ 220 ಮಕ್ಕಳು ಆಹಾರದ ಕೊರತೆಯಿಂದ ಸಾಯುತ್ತಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ಮಿತಿ ಮೀರಿತು. ದೂರದ ಮೊರಕ್ಕೊ ದೇಶದಲ್ಲಿ ಕರ್ನಾಟಕ ಎಂದರೆ 'ರೆಡ್ಡಿ ಬ್ರದರ್ಸ್' ಎಂಬ ಸ್ಥಿತಿ ನಿರ್ಮಾಣವಾಗಿದೆ ಎಂದ ವಿಜು ಕೃಷ್ಣನ್ ಕಾಂಗ್ರೆಸ್–ಬಿಜೆಪಿ ತರ ನಾವು ಕಲಿಯುಗದಲ್ಲಿ ನಂಬಿಕೆ ಇರಿಸಿದವರಲ್ಲ. ಹೊಸ ಪರ್ಯಾಯ ಕಟ್ಟಲು ಸಿಪಿಐ(ಎಂ) ಬೆಂಬಲಿಸಿ ಎಂದು ಮನವಿ ಮಾಡಿದರು.

ಪರ್ಯಾಯ ರಾಜಕೀಯ :

ಜನವಿರೋಧಿ, ಭ್ರಷ್ಟ ಕಾಂಗ್ರೆಸ್, ಬಿಜೆಪಿ ಪಕ್ಷಗಳಲ್ಲಿ ಮೂಲಭೂತ ವ್ಯತ್ಯಾಸವೇನು ಇಲ್ಲ. ಬೋರ್ಡುಗಳು ಮಾತ್ರ ಭಿನ್ನ. ಭ್ರಷ್ಟಾಚಾರದಲ್ಲಿ ಇವರಿಬ್ಬರೂ ಪ್ರತಿಸ್ಪರ್ಧಿಗಳು. ಶಾಸನ ಸಭೆಗಳಲ್ಲಿ ಈ ಎರಡೂ ಪಕ್ಷಗಳದ್ದು 'ಮ್ಯಾಚ್ ಫಿಕ್ಸಿಂಗ್' ಆಟ. ಪರಸ್ಪರ ಇಬ್ಬರು ತಮ್ಮ ಜನವಿರೋಧಿ ಆರ್ಥಿಕ ನೀತಿಗಳ ಬಗ್ಗೆ ಚರ್ಚಿಸುವುದೇ ಇಲ್ಲ. ಪಾರ್ಲಿಮೆಂಟಿನಲ್ಲಿ ಕಲ್ಲಿದ್ದಲು ಹಗರಣದಂತಹ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ಬಿಜೆಪಿ ಚರ್ಚೆಗೆ ಮುಂದಾಗಲಿಲ್ಲ. ಹಾಗೆ ಗಣಿ ಹಗರಣದ ಬಗ್ಗೆ ಕಾಂಗ್ರೆಸ್ ಬಾಯಿ ಬಿಡುವುದಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕೃತ ವಿರೋಧ ಪಕ್ಷ. ಚರಿತ್ರೆಯಲ್ಲಿ ಕಂಡರಿಯದಂತಹ ಭ್ರಷ್ಟಾಚಾರ ನಡೆದಾಗಲೂ ಅದು ಮೌನವಾಗಿದೆ. ವಿಧಾನಸಭೆಯ 224 ಸದಸ್ಯರಲ್ಲಿ 80 ಮಂದಿ ಭೂಮಾಫಿಯ ಗ್ಯಾಂಗ್ ಲೀಡರ್ಸ್, 37 ಮಂದಿ ಲಿಕ್ಕರ್ ಮಾಫಿಯಾ, 28 ಜನರು ಗಣಿ ಮಾಫಿಯಾ ಮಂದಿ. ಬೆಂಗಳೂರು ನಗರದಲ್ಲಿ 34 ಸಾವಿರ ಎಕರೆ ಸರಕಾರಿ ಭೂಮಿ ನುಂಗಿ ನೀರು ಕುಡಿಯಲಾಗಿದೆ. ಇದರಲ್ಲಿ 12 ಬಿಜೆಪಿ ಶಾಸಕರ ಪಾಲಿದೆ. ನಗರದಲ್ಲಿ 12 ಲಕ್ಷ ಜನ ಸ್ಲಂನಲ್ಲಿ ವಾಸಿಸುತ್ತಾರೆ. ಇವರ ಬದುಕಿನ ಬಗ್ಗೆ ಮಾತನಾಡಲು ಶಾಸನ ಸಭೆಯಲ್ಲಿ ಯಾರಿದ್ದಾರೆ? ಮುಖ್ಯಮಂತ್ರಿ, ಸಚಿವರು,

ಪುಟ 12 ಕ್ಕೆ







ಹಾಸ್ಟೆಲ್ ವಿದ್ಯಾರ್ಥಿಗಳ ಯಶಸ್ವಿ ರಾಜ್ಯ ಸಮಾವೇಶ

ಹಾಸ್ಟೆಲ್‌ಗಳಲ್ಲಿ ಶೋಷಣೆ–ವಿದ್ಯಾರ್ಥಿಗಳಿಗೆ ನರಕ ಯಾತನೆ – ಪಿಚ್ಚಳ್ಳಿ

ಹಾಸ್ಟೆಲ್ ವಿದ್ಯಾರ್ಥಿಗಳ ರಾಜ್ಯ ಸಮಾವೇಶ ಕೋಲಾರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಫೆಬ್ರವರಿ 26–27, 2013 ರಂದು ಎರಡು ದಿನಗಳ ಕಾಲ ನಡೆಯಿತು. ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ಜನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ 'ಹಾಸ್ಟೆಲ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ದಲಿತ–ಹಿಂದುಳಿದ–ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಊಟ ಮತ್ತು ಅಧ್ಯಯನಕ್ಕೆ ಬೇಕಾದ ಮೂಲಸೌಲಭ್ಯಗಳನ್ನು ನೀಡದೆ ಸರಕಾರಗಳು ವಿದ್ಯಾರ್ಥಿಗಳನ್ನು ಶೋಷಣೆ ಮಾಡುತ್ತಿವೆ. ಇದರಿಂದಾಗಿ ವಿದ್ಯಾರ್ಥಿಗಳು ನಿತ್ಯ ನರಕಯಾತನೆಯಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು. 80ರ ದಶಕದಲ್ಲಿ ಹಾಸ್ಟೆಲ್‌ಗಳಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಡೆಯುತ್ತಿತ್ತು. ಆದರೆ ಇಂದು ಆಳುವ ಸರಕಾರಗಳು ಕಂದಾಚಾರವನ್ನು ಪ್ರತಿಪಾದಿಸುವ ಶ್ಲೋಕಗಳನ್ನು ಹಾಸ್ಟೆಲ್‌ನಲ್ಲಿ ಹೇಳಿಸುವ ಮೂಲಕ ವಿದ್ಯಾರ್ಥಿಗಳನ್ನು ಮೌಢ್ಯತೆಗೆ ತಳ್ಳಿದ್ದಾರೆ. ಜಾತ್ಯತೀತತೆಯನ್ನು ಅಭಿವ್ಯಕ್ತಿಗೊಳಿಸುವ ಜನಪದ ಸಂಸ್ಕೃತಿಯನ್ನು ನಾಶ ಮಾಡಿ ತಾರತಮ್ಯ, ಅಸಮಾನತೆಯನ್ನು ಪೋಷಿಸುವ ಮನುಸಂಸ್ಕೃತಿಯನ್ನು ಬಿತ್ತುವ ಹುನ್ನಾರ ನಡೆಸಲಾಗುತ್ತಿದೆ. ಉತ್ತಮ ಸಮಾಜ ನಿರ್ಮಾಣ ಕೇಂದ್ರಗಳಾಗಬೇಕಿದ್ದ ಹಾಸ್ಟೆಲ್‌ಗಳು ಸರಕಾರದ ನಿರ್ಲಕ್ಷ್ಯದಿಂದಾಗಿ ಅನಾರೋಗ್ಯ ಪೀಡಿತವಾಗುತ್ತಿವೆ. ಶೋಷಿತ ವರ್ಗಗಳ ಏಳ್ಗೆಗಾಗಿ ನಡೆಯುತ್ತಿರುವ ಹೋರಾಟಗಳನ್ನು ಹತ್ತಿಕ್ಕುವ ಮೂಲಕ ಇನ್ನಷ್ಟು ದೌರ್ಜನ್ಯಗಳನ್ನು ನಡೆಸಲಾಗುತ್ತಿದೆ. ಬಜೆಟ್‌ನಲ್ಲಿ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಮೀಸಲಿಡದೆ, ಹಿಂದುಳಿದ ಸಮುದಾಯವನ್ನು ಶಿಕ್ಷಣ ವಂಚಿತರನ್ನಾಗಿ ಮಾಡಿದೆ. ಜೈಲಿನಲ್ಲಿರುವ ಖೈದಿಗಳಿಗೆ ಮಾಸಿಕವಾಗಿ ಊಟಕ್ಕಾಗಿ 3740 ರೂ ಹಣ ಖರ್ಚು ಮಾಡುವ ಸರಕಾರ ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳಿಗೆ ಮಾಸಿಕವಾಗಿ ಊಟಕ್ಕೆಂದು ಕೇವಲ 850 ರೂ ನೀಡುತ್ತಿದೆ. ಈ ಸಮಾವೇಶದ ಮೂಲಕ ಸರಕಾರ ಎಚ್ಚೆತ್ತುಕೊಂಡು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಗುಣಮಟ್ಟದ ಊಟ ಮತ್ತು ಮೂಲ ಸೌಲಭ್ಯ ಗಳನ್ನು ನೀಡಿ ಅಧ್ಯಯನಕ್ಕೆ ಬೇಕಾದ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದರು.



ಸಮಾವೇಶದ ಸ್ವಾಗತ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ ಆದ ಜೆ.ಜಿ. ನಾಗರಾಜ್ ಅವರು ಮಾತನಾಡಿ 'ಸಮಾವೇಶದ ತಯಾರಿ ಸಂದರ್ಭದಲ್ಲಿ ನಾನು ಅನೇಕ ಹಾಸ್ಟೆಲ್‌ಗಳಿಗೆ ಭೇಟಿ ನೀಡಿದೆ. ಈಗಿರುವ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳು ವಾಸಿಸಲು ಯೋಗ್ಯವಲ್ಲದ ಕಟ್ಟಡಗಳಲ್ಲಿ ವಾಸ ಮಾಡುತ್ತಿದ್ದಾರೆ. ಹಾಸ್ಟೆಲ್‌ಗಳನ್ನು ಅಧ್ಯಯನ ಕೇಂದ್ರಗಳಾನ್ನಾಗಿ ನಿರ್ಮಾಣ ಮಾಡುವ ಬದಲಾಗಿ ವಿದ್ಯಾರ್ಥಿಗಳನ್ನು ಹಾಸ್ಟೆಲ್‌ನಿಂದ ಓಡಿಸುವ ಕೆಲಸ ಮಾಡುತ್ತಿದೆ ಎಂದರು. ಜನವಾದಿ ಮಹಿಳಾ ಸಂಘಟನೆ ಮುಖಂಡರಾದ ವಿ.ಗೀತಾ ಮಾತನಾಡಿ ಪಟ್ಟಭದ್ರ ಶಕ್ತಿಗಳಿಂದಾಗಿ ಇಂದು ಹಾಸ್ಟೆಲ್ ವಿದ್ಯಾರ್ಥಿಗಳು ತಿನ್ನುವ ಅನ್ನಕ್ಕೆ ಕನ್ನ ಹಾಕುವ ಕೆಲಸ ನಡೆಯುತ್ತಿದೆ. ವ್ಯವಸ್ಥೆಯನ್ನು ದಾರಿ ತಪ್ಪಿಸುವ ಕೆಲಸ ಬಂಡವಾಳಿಗರಿಂದ ನಡೆಯುತ್ತಿದೆ. ಒಂದೆಡೆ ಸರಕಾರ ಮತ್ತೆ ಪಟ್ಟಭದ್ರರು ಶೂದ್ರರ ಮೇಲೆ ದಾಳಿ ಮಾಡುತ್ತಿದ್ದಾರೆ. ಈ ದಾಳಿಯನ್ನು ಹೋರಾಟದಿಂದಲೆ ಎದುರಿಸಬೇಕೆಂದರು.



ಸಭೆಯ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅನಂತ್ ನಾಯ್ಕ್ ವಹಿಸಿದ್ದರು. ವೇದಿಕೆಯ ಮೇಲೆ ಡಿವೈಎಫ್‌ಐ ಜಿಲ್ಲಾಧ್ಯಕ್ಷರಾದ ಸಂಪಂಗಿ, ಎಸ್‌ಎಫ್‌ಐ ರಾಜ್ಯಕಾರ್ಯದರ್ಶಿ ಹುಳ್ಳಿ ಉಮೇಶ್, ರೇಣುಕಾ ಕಹಾರ, ಉಪಸ್ಥಿತರಿದ್ದರು. ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಅಂಬರೀಶ್ ನಿರೂಪಿಸಿದರು. ಜಿಲ್ಲಾ ಕಾರ್ಯದರ್ಶಿ ವಾಸುದೇವರೆಡ್ಡಿ ಸ್ವಾಗತಿಸಿದರು. ಉದ್ಘಾಟನಾ ಸಮಾರಂಭಕ್ಕೂ ಮುನ್ನ ಎಸ್‌ಎಫ್‌ಐನ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು.

ಸಾಮಾಜಿಕ ಅಸಮಾನತೆ ವಿರುದ್ಧ ಸಿಡಿದೇಳಿ– ಗೋಷ್ಠಿಗಳಲ್ಲಿ ಪ್ರತಿಧ್ವನಿ

ಮೊದಲ ಗೋಷ್ಠಿಯಲ್ಲಿ 'ಧರ್ಮಶಾಸ್ತ್ರಗಳ ಶೂದ್ರ ವಿರೋಧಿ ಧೋರಣೆ' ಕುರಿತು ಪ್ರಗತಿಪರ ಚಿಂತಕರಾದ ಪ್ರೊ ಗಂಗಾಧರ ಮೂರ್ತಿ, ಸಮಾಜ ವಿಜ್ಞಾನಿಗಳಾದ ಜಿ.ಎನ್. ನಾಗರಾಜ್ ರವರು ಮಾತನಾಡಿ ಧರ್ಮ ಶಾಸ್ತ್ರಗಳು ಮನುಷ್ಯರನ್ನು ಭಾಗಗಳಾಗಿ ಛಿದ್ರಗೊಳಿಸಿ ಶೋಷಣೆ ಮಾಡಿವೆ ಎಂದರಲ್ಲದೆ ಶೂದ್ರರು ಅನುಭವಿಸುತ್ತಿರುವ ಕಷ್ಟಗಳ ಕುರಿತು ಎಳೆ ಎಳೆಯಾಗಿ ವಿವರಿಸಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ವಿ. ಗೀತಾ ವಹಿಸಿದ್ದರು.

ಎರಡನೆ ಗೋಷ್ಠಿಯು 'ಶಿಕ್ಷಣ–ಉದ್ಯೋಗದಲ್ಲಿ ಮೀಸಲಾತಿ ಮತ್ತು ಖಾಸಗೀಕರಣದ ರಾಜಕಾರಣ' ವಿಷಯವಾಗಿ ನಡೆಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ದೊರೈರಾಜು, ಎಸ್‌ಎಫ್‌ಐ ಸಂಸ್ಥಾಪಕ ಮುಖಂಡರುಗಳಲ್ಲಿ ಒಬ್ಬರಾದ ಜಿ.ವಿ. ಶ್ರೀರಾಮರೆಡ್ಡಿ, ಕೋಲಾರ ಸ್ನಾತಕೋತ್ತರ ಕೇಂದ್ರದ ಸಹ ಪ್ರಾಧ್ಯಾಪಕರಾದ ಡಾ. ಡೊಮಿನಿಕ್ ಮಾತನಾಡಿ 'ಶಿಕ್ಷಣ–ಉದ್ಯೋಗದಲ್ಲಿ ಮೀಸಲಾತಿಯನ್ನು ಸರಿಯಾಗಿ ಜಾರಿ ಮಾಡದೆ ಕಾಂಗ್ರೆಸ್, ಬಿಜೆಪಿ ಪಕ್ಷಗಳು ಶಿಕ್ಷಣವನ್ನು ಮಾರಾಟಮಾಡುತ್ತಿವೆ. ಖಾಸಗಿ ರಂಗದಲ್ಲಿಯೂ ಮೀಸಲಾತಿ ದೊರೆಯುವಂತಾಗಬೇಕು, ಆಗ ಶೂದ್ರರು ಶೈಕ್ಷಣಿಕವಾಗಿ ಮುಂದೆ ಬರಲು ಸಾಧ್ಯ ಎಂದರು. ಅಸಮಾನತೆ, ತಾರತಮ್ಯವನ್ನು ಪ್ರತಿನಿಧಿಸುವ ಕಾಂಗ್ರೆಸ್, ಬಿಜೆಪಿ ಪಕ್ಷಗಳ ನೀತಿಗಳನ್ನು ತಿರಸ್ಕರಿಸಿ ಎಂದು ಕರೆನೀಡಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಪತ್ರಕರ್ತರಾದ ವಿಶ್ವ ಕುಂದಾಪುರ ವಹಿಸಿದ್ದರು.

ಮೂರನೆಯ ಗೋಷ್ಠಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹಾಸ್ಟೆಲ್‌ಗಳ ಸ್ಥಿತಿ–ಗತಿ ಕುರಿತು ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅನಂತ್ ನಾಯ್ಕ ಮಾತನಾಡಿದರು. ಅಧ್ಯಕ್ಷತೆಯನ್ನು ರಾಜ್ಯ ಉಪಾಧ್ಯಕ್ಷ ಗುರುರಾಜ್ ದೇಸಾಯಿ ವಹಿಸಿದ್ದರು. ವರದಿಯ ಮೇಲೆ ಜಿಲ್ಲಾವಾರು ಚರ್ಚೆ ನಡೆಸಲಾಯಿತು. ನಂತರ ಹಾಸ್ಟೆಲ್ ವಿದ್ಯಾರ್ಥಿಗಳ ರಾಜ್ಯ ಮಟ್ಟದ 17 ಜನರ ಉಪ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ವಿ. ಅಂಬರೀಶ್ ಆಯ್ಕೆಯಾದರು.

ನೆಲದ ಋಣವ ತೀರಿಸಬೇಕಿದೆ
– ಜಿ.ಸಿ ಬಯ್ಯಾರೆಡ್ಡಿ

ಎಸ್‌ಎಫ್‌ಐ ಮಾಜಿ ರಾಜ್ಯ ಅಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಸಮಾರೋಪದಲ್ಲಿ ಮಾತನಾಡಿ 'ಈ ನೆಲದ ಋಣವನ್ನು ತೀರಿಸಲು ನಾವೆಲ್ಲ ಚಳುವಳಿ ಕಟ್ಟಬೇಕಿದೆ. ಹಾಸ್ಟೆಲ್‌ನಲ್ಲಿ ನಿತ್ಯ ಎದ್ದು ಬರುವ ಸಮಸ್ಯೆಗಳ ಸರಕಾರದ ನೀತಿಗಳ ವಿರುದ್ಧ ನಿರಂತರ ಪ್ರತಿಭಟನೆಗಳನ್ನು ನಡೆಸಬೇಕು. ಭಗತ್‌ಸಿಂಗ್‌ರ ಆದರ್ಶಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು. ಅಧ್ಯಯನದ ಜೊತೆಯಲ್ಲಿ ನಮ್ಮ ಹಕ್ಕುಗಳಿಗಾಗಿ ಹೋರಾಡಬೇಕು ಎಂದರು. ಸಾಮಾಜಿಕ ಜನಾಂದೋಲನ ಸಂಘಟನೆಯ ರಾಜ್ಯ ಮುಖಂಡರಾದ ಐಕ್ಯ ನಾರಾಯಣ ಸ್ವಾಮಿ ಮಾತನಾಡಿ ದಲಿತ–ಹಿಂದುಳಿದ–ಅಲ್ಪಸಂಖ್ಯಾಂತರ ಏಳ್ಗೆಗಾಗಿ ಚಳುವಳಿ ನಡೆಯಬೇಕಿದೆ. ಆ ಚಳುವಳಿಯಲ್ಲಿ ವಿದ್ಯಾರ್ಥಿಗಳು ಮುಂಚೂಣಿಯಲ್ಲಿರಬೇಕು. ಸಮಾಜವನ್ನು ಜಾಗೃತಿಗೊಳಿಸುವ ಕೆಲಸಗಳು ವಿದ್ಯಾರ್ಥಿಗಳಿಂದ ನಡೆಯಬೇಕು ಎಂದರು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 200 ಕ್ಕೂ ಹೆಚ್ಚು ಹಾಸ್ಟೆಲ್ ವಿದ್ಯಾರ್ಥಿಗಳು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು.

ವರದಿ : ಗುರುರಾಜ್ ದೇಸಾಯಿ

ದಿಕ್ಕಾರ ಹೇಳಿ

ಭ್ರಷ್ಟರೊಳ ಭ್ರಷ್ಟನೂ ಹೊಸ ಪಕ್ಷ ಕಟ್ಟಿ
ಮೆರೆಯುತಿಹ ಕಂಡಿರಾ ನ್ಯಾಯವನು ಮೆಟ್ಟಿ
ಇಂತವನ ಬೆಂಬಲಿಸಿ ಪಾಪದೊಳ ಕೇಳಿ
ಪಾಲನ್ನು ಪಡೆಯದಿರಿ ದಿಕ್ಕಾರ ಹೇಳಿ.

– ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಾರ್ಚ್ 8, ನೂರಾ ಮೂರು ವರ್ಷಗಳ ನೆನಪು

ಮಸುಕಾಗಬಾರದು ಸಮಾಜವಾದಿ ಹೋರಾಟದ ಸ್ಫೂರ್ತಿ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ವ್ಯಾಪಕಗೊಳ್ಳುತ್ತಾ ನಡೆದಿದ್ದರೂ ಸಹ ಅದರ ಐತಿಹಾಸಿಕ ಹಿನ್ನೆಲೆಯನ್ನು ಮಸುಕು ಮಾಡುವ ಪ್ರವೃತ್ತಿಗಳು ಬೆಳೆಯುತ್ತಿವೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಎಂದರೆ ಬಂಡವಾಳಶಾಹಿ ಶೋಷಣೆಯ ವಿರುದ್ಧ ಮಹಿಳಾ ವಿಮೋಚನೆಗಾಗಿ ನಡೆದ ಸಮಾಜವಾದಿ ಹೋರಾಟದ ಪರಂಪರೆ ಎನ್ನುವುದನ್ನು ಮರೆಯುವಂತಿಲ್ಲ.

ಬೃಂದಾ ಕಾರಟ್ ಕನ್ನಡಕ್ಕೆ : ಮುರಳಿ ಕೃಷ್ಣ

ನೂರಾ ಮೂರು ವರ್ಷಗಳ ಹಿಂದೆ 1910ರ ಆಗಸ್ಟ್ 27ರಂದು ಕ್ರಾಂತಿಕಾರಿ ನಾಯಕರಾದ ಕ್ಲಾರಾ ಜೆಟ್‌ಕಿನ್ ಅವರ ಸಂಗಾತಿಗಳಾದ ಅಲೆಕ್ಸಾಂಡ್ರಿಯಾ ಕೊಲಾಂಥೈ ಮತ್ತು ಇತರರೊಂದಿಗೆ ಕೊಪನ್‌ಹೇಗನ್‌ನಲ್ಲಿ ಸಂಘಟಿಸಿದ್ದ ಅಂತಾರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮ್ಮೇಳನದಲ್ಲಿ 'ಅಂತಾರಾಷ್ಟ್ರೀಯ ಮಹಿಳಾ ದಿನ' ಆಚರಿಸುವ ಕುರಿತ ನಿರ್ಣಯ ಮಂಡಿಸಿದರು.

ಐತಿಹಾಸಿಕ ನಿರ್ಣಯ: "ಆಯಾ ದೇಶಗಳ ಶ್ರಮಿಕ ವರ್ಗದ ವರ್ಗಪ್ರಜ್ಞೆ, ರಾಜಕೀಯ ಮತ್ತು ಕಾರ್ಮಿಕ ಸಂಘಟನೆಗಳ ಸಹಮತದೊಂದಿಗೆ ಎಲ್ಲ ದೇಶಗಳ ಸಮಾಜವಾದಿ ಮಹಿಳೆಯರು ಪ್ರತಿ ವರ್ಷ ಒಂದು ನಿಗದಿತ ದಿನ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾರೆ. ಇದರ ಒಂದು ಪ್ರಮುಖ ಗುರಿ ಮಹಿಳೆಯರಿಗೆ ಮತದಾನದ ಹಕ್ಕು ಪಡೆಯಲು ಸಹಾಯ ಮಾಡುವುದು. ಈ ಬೇಡಿಕೆಯನ್ನು ಮಹಿಳೆಯರ ಸಮಗ್ರ ಪ್ರಶ್ನೆಗಳೊಂದಿಗೆ ಸಮಾಜವಾದಿ ನೋಟದಲ್ಲಿ ಒತ್ತಾಯ ಮಾಡುವುದು. ಈ ಮಹಿಳಾ ದಿನಾಚರಣೆ ಎಂಬುದು ಅಂತಾರಾಷ್ಟ್ರೀಯ ಗುಣಸ್ವರೂಪ ಹೊಂದಿರಬೇಕು ಮತ್ತು ಇದನ್ನು ಬಹಳ ಎಚ್ಚರಿಕೆಯಿಂದ ರೂಪಿಸಬೇಕು". ಮಹಿಳೆಯರಿಗೆ ಮತದಾನದ ಹಕ್ಕು ಎಂಬ ಬೇಡಿಕೆಯು ಸಮಾಜವಾದಿ ಚಳವಳಿಗೆ ಇನ್ನಷ್ಟು ಬಲವನ್ನು ಒಗ್ಗೂಡಿಸಲಿದೆ, ಬಲಿಷ್ಠಗೊಳಿಸಲಿದೆ ಎಂಬುದು ಅವರ ಘೋಷಣೆಯಾಗಿತ್ತು. ಆದರೆ ಆ ಸಂದರ್ಭದಲ್ಲಿ ವರ್ಷದಲ್ಲಿ ಯಾವ ದಿನವನ್ನು ಮಹಿಳಾ ದಿನವನ್ನಾಗಿ ಆಚರಿಸಬೇಕೆಂಬುದರ ಕುರಿತು ನಿರ್ದಿಷ್ಟವಾಗಿ ನಿರ್ಧರಿಸಲಿಲ್ಲ.



ಮೊದಲ ಆಚರಣೆ :

ಫಿನ್‌ಲೆಂಡ್ ಸಂಸತ್ತಿಗೆ ಆಯ್ಕೆಯಾಗಿದ್ದ ಮೂವರು ಮಹಿಳೆಯರು ಸೇರಿದಂತೆ 17 ದೇಶಗಳ ಕಾರ್ಮಿಕ ಸಂಘಟನೆಗಳು, ಸಮಾಜವಾದಿ ಪಕ್ಷಗಳು, ದುಡಿಯುವ ಮಹಿಳೆಯರು ಸಂಘ ಸಂಸ್ಥೆಗಳು ಮತ್ತು ನೂರು ಪ್ರತಿನಿಧಿಗಳು ಅವಿರೋಧವಾಗಿ ಈ ನಿರ್ಣಯಕ್ಕೆ ಅಂಗೀಕಾರ ನೀಡಿದರು. ನಂತರದ ವರ್ಷ ಅಂದರೆ 1911ರಲ್ಲಿ ಕೊಪನ್‌ಹೇಗನ್‌ನಲ್ಲಿ ಕೈಗೊಂಡ ನಿರ್ಣಯದ ಅಂಗವಾಗಿ 10 ಲಕ್ಷದಷ್ಟು ಪುರುಷರು ಮತ್ತು ಮಹಿಳೆಯರು ಜರ್ಮನಿ, ಆಸ್ಟ್ರಿಯಾ, ಡೆನ್ಮಾರ್ಕ್, ಸ್ವಿಜರ್‌ಲ್ಯಾಂಡ್ ಮತ್ತು ಯೂರೋಪ್‌ನ ಇತರ ಕೆಲವು ದೇಶಗಳಲ್ಲಿ ರ್‍ಯಾಲಿಗಳನ್ನು ನಡೆಸಿದರು. ಪ್ರಷ್ಯದ ರಾಜನ ವಿರುದ್ಧದ 1848ರ ಸಶಸ್ತ್ರ ಹೋರಾಟದ ನೆನಪಿನಲ್ಲಿ ಮಾರ್ಚ್ 19 ದಿನವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಬೊಲ್ಷೆವಿಕ್ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದ ಮೊದಲ ಮಹಿಳೆಯಾದ ಅಲೆಕ್ಸಾಂಡ್ರಿಯಾ ಕೊಲಾಂಥೈ "ಮತ ಪ್ರದರ್ಶನಗಳು ನಿರೀಕ್ಷೆಯನ್ನು ಮೀರಿ ಬೃಹತ್ ಆಗಿದ್ದವು.... ಜರ್ಮನಿ ಮತ್ತು ಆಸ್ಟ್ರಿಯಾಗಳಲ್ಲಿ ಮಹಿಳೆಯರು ಸಾಗರೋಪಾದಿಯಲ್ಲಿ ಆಗಮಿಸಿದ್ದರು. ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳು ಸೇರಿದಂತೆ ಎಲ್ಲ ಕಡೆಗಳಲ್ಲೂ ಸಭೆಗಳನ್ನು ನಡೆಸಲಾಯಿತು. ಎಲ್ಲ ಸಭಾಂಗಣಗಳೂ ತುಂಬಿ ತುಳುಕಿದ್ದವು. ಮಹಿಳೆಯರಿಗೆ ಸ್ಥಳ ಬಿಟ್ಟುಕೊಡುವಂತೆ ಪುರುಷ ಕಾರ್ಮಿಕರನ್ನು ಕೇಳಬೇಕಾಗಿ ಬಂತು. ಇಂತಹ ಅತಿ ದೊಡ್ಡ ಪ್ರದರ್ಶನವೊಂದರಲ್ಲಿ 30 ಸಾವಿರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದರು. ಮಹಿಳಾ ಪ್ರತಿಭಟನಾಕಾರರ ಬ್ಯಾನರ್‌ಗಳನ್ನು ಕಿತ್ತು ಹಾಕಲು ಪೊಲೀಸರು ನಿರ್ಧರಿಸಿದರು. ಆದರೆ ಮಹಿಳೆಯರು ಗಟ್ಟಿಯಾಗಿ ನಿಂತರು. ನಂತರ ಭಾರಿ ಕಾದಾಟ ನಡೆಯಿತು. ಸಮಾಜವಾದಿ ಪಕ್ಷಗಳ ಮುಖಂಡರ ನೆರವಿನಿಂದ ಆಗಬಹುದಾಗಿದ್ದ ರಕ್ತಪಾತವನ್ನು ತಡೆಯಲು ಸಾಧ್ಯವಾಯಿತು"



ಎಂದು ಬರೆದಿದ್ದಾರೆ. ತ್ಸಾರ್ ಆಡಳಿತ ಇದ್ದ ರಷ್ಯಾದಲ್ಲಿ ಫೆಬ್ರವರಿ ಕೊನೆ ಭಾನುವಾರದಂದು ಮಹಿಳಾ ದಿನವನ್ನು ಆಚರಿಸಲಾಯಿತು (ರಷ್ಯಾದಲ್ಲಿ ಆಚರಿಸಿದ ದಿನ ಜ್ಯೂಲಿಯನ್ ಕ್ಯಾಲೆಂಡರ್ ಭಾನುವಾರವಾಗಿದ್ದರೆ, ಜಗತ್ತಿನ ಇತರೆಲ್ಲ ಕಡೆ ಬಳಕೆ ಮಾಡುವ ಜಾರ್ಜಿಯನ್ ಕ್ಯಾಲೆಂಡರ್ ಪ್ರಕಾರ ಆ ದಿನ ಮಾರ್ಚ್ 8 ಆಗಿದೆ). ಅಮೆರಿಕದಲ್ಲಿ ಸಮಾಜವಾದಿ ಮಹಿಳೆಯರು ಅದಾಗಲೆ 1908ರಲ್ಲಿ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿದ್ದು ಈ ನಿಟ್ಟಿನಲ್ಲಿ ಇದು ಮೊದಲನೆಯದಾಗಿದೆ. ಅಲ್ಲಿ ನಡೆಸಿದ ರ್‍ಯಾಲಿಯಲ್ಲಿ ಮಹಿಳೆಯರು ತಮಗೆ ಮತದಾನದ ಹಕ್ಕು ನೀಡಬೇಕೆಂದು ಒತ್ತಾಯಿಸಿದರು. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿನ ಮಹಿಳಾ ಕಾರ್ಮಿಕರು ತೀವ್ರ ಹೋರಾಟಗಳನ್ನು ನಡೆಸಿದರು. ಪೊಲೀಸ್ ದೌರ್ಜನ್ಯಕ್ಕೆ ಒಳಗಾದರು. ಮಹಿಳಾ ದಿನದ ಆಚರಣೆಯ ಭಾಗವಾಗೇ ಅವರ ಸಮಸ್ಯೆಗಳನ್ನು ಪ್ರತಿಬಿಂಬಿಸಲಾಯಿತು. ಯುದ್ಧ ನಡೆಸಲು ಸಾಮ್ರಾಜ್ಯಶಾಹಿಗಳು ನಡೆಸಿದ ತಯಾರಿಗಳು ಅಂತಾರಾಷ್ಟ್ರೀಯ ದಿನಾಚರಣೆಗೆ ಹೊಸ ಆಯಾಮ ನೀಡಿದ್ದು ರಾಷ್ಟ್ರಗಳ ಗಡಿಗಳನ್ನೇ ಅಳಿಸಿ ಹಾಕಿತು. ಜಗತ್ತಿನಾದ್ಯಂತ ಎಲ್ಲ ದೇಶಗಳ ಮಹಿಳೆಯರು ಯುದ್ಧಕ್ಕೆ ವಿರುದ್ಧವಾಗಿ ಶಾಂತಿಗಾಗಿ ಒತ್ತಾಯಿಸಿದರು. ಮುಂದುವರೆದಂತೆ 1913ರಿಂದ ಮಾರ್ಚ್ 8 ಅಂತಾರಾಷ್ಟ್ರೀಯ ದಿನಾಚರಣೆ ಆಚರಿಸುವ ದಿನವಾಗಿ ಆಚರಣೆಗೆ ಬಂತು. ಆದರೆ ನಂತರದ ವರ್ಷವೇ ವಿಶ್ವ ಯುದ್ಧ ಆರಂಭವಾಯಿತು. ಆದರೂ 1915 ಮತ್ತು 1916ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲು ಪ್ರಯತ್ನಗಳನ್ನು ನಡೆಸಲಾಯಿತು. ಆದರೆ ಶಾಂತಿಗೆ ಕರೆ ನೀಡಲು ಮುಂದೆ ಬಂದವರನ್ನು ಯುದ್ಧೋನ್ಮತ್ತರು ಬೇಟೆಯಾಡಲು ಆರಂಭಿಸಿದರು. ಶಾಂತಿಗಾಗಿ ನಡೆಸುವ ಪ್ರತಿಭಟನೆಗಳು, ಸಭೆಗಳನ್ನು ನಿಷೇಧಿಸಲಾಯಿತು. ಆ ಸಂದರ್ಭದಲ್ಲಿ ನಾರ್ವೆಯಲ್ಲಿ ಮಾತ್ರ ಸಾರ್ವಜನಿಕವಾಗಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಕೆಲವು ಮಹಿಳಾ ಪ್ರತಿನಿಧಿಗಳು ಒಂದೆಡೆ ಸೇರಿ ಶಾಂತಿಗಾಗಿ ದಿಟ್ಟತನದಿಂದ ನಿರ್ಣಯವನ್ನು ಕೈಗೊಂಡರು" ಎಂದು ಕೊಲಾಂಥೈ ವಿವರಿಸಿದ್ದಾರೆ.

1917ರಲ್ಲಿ ಮಹಿಳಾ ದಿನಾಚರಣೆ: ಆಗ 1917 ಬಂತು. ರಷ್ಯಾದಲ್ಲಿ ತ್ಸಾರ್ ಆಡಳಿತದ ವಿರುದ್ಧ ಪೆಟ್ರೋಗಾರ್ಡ್‌ನಲ್ಲಿ ಕಾರ್ಮಿಕರ ಭಾರಿ ಪ್ರತಿಭಟನೆಗಳು ಎದ್ದುಬಂದವು. ಕಾರ್ಮಿಕರು ಮಾರ್ಚ್ 8ರ ಆಚರಣೆ ಸಂಘಟಿಸುವ ಕಾರ್ಯಕ್ಕೆ ಮಹಿಳಾ ಕಾರ್ಮಿಕರು ಮುಂದಾದರು. ಮಹಿಳಾ ಕಾರ್ಮಿಕರು, ಸೈನಿಕರ ಪತ್ನಿಯರು, ಕಾರ್ಮಿಕರ ಮನೆಗಳಲ್ಲಿನ ಮಹಿಳೆಯರು, ಹಸಿವಿನಿಂದ ಬಳಲುತ್ತಿದ್ದ ಮಹಿಳೆಯರು ಮತ್ತು ಯುದ್ಧ ವಿಚಾರಣಾಧೀನರು ಪೆಟ್ರೋಗಾರ್ಡ್‌ನ ರಸ್ತೆಗಳಿಗೆ ಧುಮ್ಮಿಕ್ಕಿ ಹರಿದು ಬಂದರು. ಅವರು ಯುದ್ಧವನ್ನು ಬಹಿರಂಗವಾಗಿ ಖಂಡಿಸಿದರು. ಶೋಷಣೆಯನ್ನು ಕೊನೆಗೊಳಿಸಲು ಆಗ್ರಹಿಸಿದರು. ಶಾಂತಿ ಮತ್ತು ಆಹಾರಕ್ಕಾಗಿ ಒತ್ತಾಯಿಸಿದರು. ಅವರ ಹೋರಾಟಕ್ಕೆ ಇನ್ನಷ್ಟು ಶಕ್ತಿ ತುಂಬುವಂತೆ ಕಾರ್ಮಿಕರು ಮತ್ತು ಸೈನಿಕರು ಜೊತೆಗೂಡಿದರು. ಮಹಿಳೆಯರ ಈ ಹೋರಾಟ ಚಾರಿತ್ರಿಕವಾದ ಜನತೆಯ ಬೃಹತ್ ಕ್ರಾಂತಿಕಾರಿ ಚಳವಳಿಗೆ ನಾಂದಿಯಾಯಿತು. ಇದರ ಪರಿಣಾಮವಾಗಿ ಜಗತ್ತಿನಲ್ಲಿ ಸಮಾಜವಾದಿ ದೇಶವೊಂದು ಉಗಮವಾಯಿತು. ಪೆಟ್ರೋಗ್ರಾಡ್‌ನಲ್ಲಿ ಮಹಿಳೆಯರು ನಡೆಸಿದ ಈ ಹೋರಾಟ, ತ್ಸಾರ್ ಆಡಳಿತದ ರಷ್ಯಾದ ಎಲ್ಲ ಭಾಗಗಳಲ್ಲಿ ನಡೆದ ಸಂಘರ್ಷಗಳು 1868ರ ಡಿಸೆಂಬರ್ 2ರಂದು ಲೂಡ್ವಿಗ್ ಕುಡೆಲ್‌ಮನ್ ಅವರಿಗೆ ಬರೆದಿದ್ದ ಪತ್ರದಲ್ಲಿ ಕಾರ್ಲ್‌ಮಾರ್ಕ್ಸ್ ಅವರು ಹೇಳಿದ್ದನ್ನು ನಿಜವಾಗಿಸಿತು. 'ಮಹಿಳೆಯರ ಹೋರಾಟಗಳಿಲ್ಲದೆ ಮಹಾ ಸಾಮಾಜಿಕ ಕ್ರಾಂತಿಗಳು ಅಸಾಧ್ಯ ಎಂಬುದು ಚರಿತ್ರೆ ಕುರಿತು ಸ್ವಲ್ಪ ಮಟ್ಟಿಗೆ ತಿಳಿದ ಎಲ್ಲರಿಗೂ ಗೊತ್ತಿರುತ್ತದೆ' ಎಂದು ಮಾರ್ಕ್ಸ್ ಪತ್ರದಲ್ಲಿ ಬರೆದಿದ್ದರು.


ಪುಟ 10ಕ್ಕೆ

ತ್ರಿಪುರಾ: ಎಡರಂಗದ ಅಭೂತಪೂರ್ವ ಗೆಲುವು

ಎಸ್.ವೈ.ಗುರುಶಾಂತ್

ತ್ರಿಪುರಾದಲ್ಲಿ ಎಡರಂಗ ಭರ್ಜ- ರಿಯಾಗಿ ಜಯಭೇರಿ ಬಾರಿಸಿದೆ. ಮಾಣಿಕ್ ಸರ್ಕಾರ್ ರವರ ನೇತೃತ್ವದಲ್ಲಿ ಹೊಸ ಸರಕಾರ ರಚಿಸಿದೆ. ಎಡರಂಗ ಸತತವಾಗಿ ಅಧಿಕಾರಕ್ಕೇರುತ್ತಿರುವುದು ಐದನೆಯ ಬಾರಿ. ಅಲ್ಲಿ ಸರಕಾರ ರಚಿಸಿದ್ದು ಏಳುಬಾರಿ. 'ಇನ್ನೇನು ತ್ರಿಪುರಾದಲ್ಲಿ ಎಡರಂಗದ ಸೋಲಿನೊಂದಿಗೆ ದೇಶದಲ್ಲಿ ಮಾರ್ಕ್ಸ್‌ವಾದಿಗಳ ಪತನ ಪೂರ್ಣವಾಗಲಿದೆ' ಎಂದೆಲ್ಲಾ ಬೊಬ್ಬೆ ಹೊಡೆಯಲು ಬಾಯಿ ತೆಗೆದಿಟ್ಟುಕೊಂಡವರ ಬಾಯಿಗೆ ಬಡಿದ ವಿಜಯವಿದು. ಜನತೆಗಾಗಿ ತನ್ನನ್ನು ಪೂರ್ಣವಾಗಿ ಸಮರ್ಪಸಿಕೊಂಡ , ಜನತೆಯ ಪ್ರಗತಿ, ಅಭ್ಯುದಯಕ್ಕಾಗಿ ಅಹೋರತವಾಗಿ ಶ್ರಮಿಸಿದ,ಸ್ವಚ್ಛ, ದಕ್ಷ, ಸರಳ, ಸಮರ್ಥ, ಪಾರದರ್ಶಕ ಆಡಳಿತ ನೀಡಿದ ನಿಜ ಮಾದರಿ ಸರಕಾರ ಈ ಎಡರಂಗದ ಸರ್ಕಾರವೆಂದು ಯಾರೂ ಗುರುತಿಸಬಲ್ಲ ಸಾಧನೆ ಈ ಸರ್ಕಾರದ್ದು. ಹೀಗಾಗಿ ಇದು ಅಭೂತ ಪೂರ್ವ, ಐತಿಹಾಸಿಕ ವಿಜಯ ಆದ್ದರಿಂದಲೇ ತ್ರೀಪುರಾದಲ್ಲಿ, ದೇಶದೆಲ್ಲೆಡೆ ಗಳಲ್ಲಿಯೂ ಈ ವಿಜಯದ ಹೊನಲಿನ ರಿಂಗಣ.

1988–93ರಲ್ಲಿನ ಕೇಂದ್ರದ ಹಾಗೂ ರಾಜ್ಯದ ಕಾಂಗ್ರೆಸ್ನ ಅರೆ ಫ್ಯಾಶಿಸ್ಟ್ ಭಯೋತ್ಪಾದನೆಯ ಧಾಳಿಗಳ (ಮೋಸದ ಚುನಾವಣೆಯೂ ಸಹ) ಈ ಅವಧಿಯನ್ನು ಬಿಟ್ಟರೆ ಎಡರಂಗವು 1978 ರಿಂದ ಇಲ್ಲಿಯವರೆಗೆ ಸತತವಾಗಿ ಜನತೆಯಿಂದ ಅಧಿಕಾರ ಪಡೆದು ಆಡಳಿತ ನಡೆಸುತ್ತಾ ಬಂದಿದೆ. 1993 ರಿಂದ ಬಿಟ್ಟೂ ಬಿಡದೇ ಜನತೆ ಎಡರಂಗವನ್ನೇ ಆರಿಸುತ್ತಾ ಬಂದಿದ್ದಾರೆ.



ಪರಿಶ್ರಮದ ವಿಜಯ

'ಇದು ಶಾಂತಿ, ಸುಭದ್ರತೆ, ಅಭಿವೃದ್ಧಿ ಹಾಗೂ ಪಾರದರ್ಶಕತೆಯ ಉತ್ತಮ ಆಡಳಿತಕ್ಕೆ, ಸೆಕ್ಯುಲರ್ ರಕ್ಷಣೆಗೆ ಜನತೆಯು ಎಡರಂಗಕ್ಕೆ ಮತನೀಡಿದ್ದಾರೆ' ಎಂದು ಈ ಫಲಿತಾಂಶದ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ಕೇಳಿದಾಗ ಜನಪ್ರಿಯ ಮುಖ್ಯಮಂತ್ರಿ, ಸಿಪಿಐ(ಎಂ) ನ ಪೋಲೀಟ್ ಬ್ಯೂ- ರೋ ಸದಸ್ಯರಾದ ಸಂಗಾತಿ ಮಾಣಿಕ್ ಸರ್ಕಾರ್ ಹೇಳಿದರು. 'ಜನತೆಯ ಸಂಕಷ್ಟಗಳ ಪರಿಹಾರಕ್ಕಾಗಿ ಅವರ ಅನುದಿನದ ನಿರೀಕ್ಷೆಗಳನ್ನು ಈಡೇರಿಸುವಲ್ಲಿ, ಪಕ್ಷ ಹಾಗೂ ಜನತೆಯ ಸಾಮೂಹಿಕ ಸಂಘಟನೆಗಳು, ಮತ್ತೊಂದೆಡೆ ಸರಕಾರ ಪೂರ್ಣವಾಗಿ ಶ್ರಮಿಸಿದ, ಸಮರ್ಪಿಸಿಕೊಂಡ ಪರಿಶ್ರಮದ ಫಲ ಈ ವಿಜಯ' ಎಂದು ವಿಶ್ಲೇಷಿಸಿದರು ತ್ರಿಪುರಾ ರಾಜ್ಯ ಸಮಿತಿಯ ಕಾರ್ಯದರ್ಶಿ ಕೇಂದ್ರ ಸಮಿತಿಯ ಸದಸ್ಯ ಸಂಗಾತಿ ಬಿಜೇಂದರ್ ರವರು.(ಇಬ್ಬರ ವಿವರ ಸಂದರ್ಶನ ಮುಂದಿನ ಸಂಚಿಕೆಯಲ್ಲಿ)





ಪುಟ 12 ಕ್ಕೆ

ಹೊಸತನ ಮತ್ತು ವಿಭಿನ್ನ ಫಲಿತಾಂಶ

ಈ ಚುನಾವಣೆಯಲ್ಲಿ ಎಡರಂಗ ಒಟ್ಟು 50 ಸ್ಥಾನಗಳನ್ನು ಗಳಿಸಿದೆ (ಸಿಪಿಐ(ಎಂ) 49, ಸಿಪಿಐ 1). ಈ ಬಾರಿ ಸಿಪಿಐ(ಎಂ)– 55, ಆರ್‌ಎಸ್‌ಪಿ–2, ಪಾರ್ವಡ್ ಬ್ಲಾಕ್–1, ಸಿಪಿಐ–2 ರಲ್ಲಿ ಸ್ಪರ್ದಿಸಿದ್ದವು. 2008 ರ ಚುಣಾವಣೆಯಲ್ಲಿ ಎಡರಂಗ ಗೆದ್ದಿದ್ದು 49. (ಸಿಪಿಐ(ಎಂ)–46, ಸಿಪಿಐ–2, ಆರ್ ಎಸ್ ಪಿ–1). 2008 ರಲ್ಲಿ ಕಾಂಗ್ರೆಸ್ ಮೈತ್ರಿ ಕೂಟ ಪಡೆದದ್ದು 11 (ಕಾಂಗ್ರೆಸ್–10, ಎನ್ ಪಿ ಟಿ–1). ಈಗ ಅದರ ಬಲ 10ಕ್ಕೆ ಕುಸಿದಿದೆ. (ಇವು ಕಾಂಗ್ರೆಸ್‌ನವು ಮಾತ್ರ). ಅದರ ಮೈತ್ರಿಕೂಟದಲ್ಲಿದ್ದ ಐ ಎನ್ ಪಿ ಟಿ ಹಾಗೂ ಎನ್‌ಸಿಟಿ ಗಳು ಯಾವುದೇ ಸ್ಥಾನ ಪಡೆಯದೇ ಸೋತಿರುವುದು ಗಮನಾರ್ಹ. ಕಳೆದ ಬಾರಿ 22 ಅಭ್ಯರ್ಥಿಗಳನ್ನು ಹಾಕಿದ್ದ ತೃಣಮೂಲ ಕಾಂಗ್ರೆಸ್ ಈ ಬಾರಿ ಎಡರಂಗ ವಿರೋಧಿ ಮತಗಳು ಒಡೆಯಬಾರದೆಂಬ ಚುನಾವಣಾ ತಂತ್ರದಿಂದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿಲ್ಲ. ಈ ಸಲ ಬಿಜೆಪಿ 60 ರಲ್ಲಿ ಸ್ಪರ್ಧಿಸಿತ್ತು, ಆದರೆ 59 ರಲ್ಲಿ ಅದರ ಠೇವಣಿ ಜಪ್ತಾಗಿದೆ.

ಈ ಬಾರಿ ಚುನಾವಣೆಯಲ್ಲಿ ಚಲಾಯಿಸಲಾದ ಅರ್ಹ ಮತಗಳು 22 ಲಕ್ಷದ 5 ಸಾವಿರದ 65. ಮತದಾನ ಶೇ.93.57. ಇದರಲ್ಲಿ ಎಡರಂಗ ಗಳಿಸಿರುವುದು 11ಲಕ್ಷ, 52 ಸಾವಿರದ 210 ಅಂದರೆ ಶೇ. 52,30. 2008 ರ ಚುನಾವಣೆಗೆ ಹೋಲಿಸಿದರೆ ಎಡರಂಗವು 1ಲಕ್ಷದ 89ಸಾವಿರದ 593 ಹೊಸ ಮತಗಳನ್ನು ಗಳಿಸಿದೆ. ಅಂದರೆ ಶೇ 1.12 ಹೆಚ್ಚಳ. ಎಡರಂಗ ಗೆದ್ದ 50ಸ್ಥಾನಗಳಲ್ಲಿ, 45 ಸ್ಥಾನಗಳಲ್ಲಿ ಶೇ 50 ಕ್ಕಿಂತ ಹೆಚ್ಚಿನ ಮತ ಪಡೆಯಲಾಗಿದೆ. 2008 ರಲ್ಲಿ ಇದು 36 ಸ್ಥಾನಗಳಲ್ಲಿತ್ತು. ಈ ಬಾರಿ ಶೇ 60 ಕ್ಕಿಂತ ಹೆಚ್ಚಿನ ಮತಗಳನ್ನು 4 ಸ್ಥಾನಗಳಲ್ಲಿ, ಶೇ 55 ಕ್ಕಿಂತ ಹೆಚ್ಚಿನಲ್ಲಿ 14 ಸ್ಥಾನಗಳಲ್ಲಿ ಪಡೆಯಲಾಗಿದೆ).

ಭಾರೀ ಅಂತರಗಳ ಗೆಲುವು

ಧನ್‌ಪುರ ಕ್ಷೇತ್ರದಲ್ಲಿ ಸ್ಪರ್ದಿಸಿದ್ದ 1998 ರಿಂದಲೂ ಎಡರಂಗ ನೇತ್ರತ್ವ ವಹಿಸಿರುವ ಮುಖ್ಯಮಂತ್ರಿ ಕಾಂ ಮಾಣಿಕ್ ಸರ್ಕಾರ್ (ವಯಸ್ಸು 64) ಈ ಬಾರಿ ಶೇ 57,10 ಮತಗಳನ್ನು ಪಡೆದಿದ್ದಾರೆ ಅವರ ಸಮೀಪದ ಪ್ರತಿಸ್ಪರ್ದಿ (ಕಾಂಗ್ರೆಸ್) ಗಿಂತ ಶೇ 16,14 ಹೆಚ್ಚಳ . ಈ ಸಂಪುಟದಲ್ಲಿ ಹಣಕಾಸುನ ಸಚಿವರಾಗಿರುವ ಹಿರಿಯ ನಾಯಕ ಕಾಂ. ಬಾದಲ್ ಚೌಧುರಿ 12,450 ಮತಗಳ ಅಂತರದಿಂದ ಗೆದ್ದ ಪ್ರಥಮ ಅಭ್ಯರ್ಥಿ. ಹಾಗೇ ಸಚಿವರಾದ ಜಿತೇಂದ್ರ ಚಾಧುರಿ, ತಪನ್ ಚಕ್ರವರ್ತಿ, ಅಘೋರಿ ದೇಬ್‌ಬರ್ಮ, ಸ್ಪೀಕರ್‌ರಾಗಿದ್ದ ರಮೇಶ್‌ನಾಥ್ ಚಂದ್ರ ದೇಬ್‌ನಾಥ್, 75 ರಹರೆಯದ ಖ್ಯಾತ ಕವಿ , ಬರಹಗಾರ ಅನಿಲ್ ಸರ್ಕಾರ್ ಅತ್ಯಧಿಕ ಮತಗಳ ಅಂತರದಿಂದ ಗೆದ್ದ ಪ್ರಮುಖರು.

ಎಡರಂಗವು ಈ ಚುನಾವಣೆಯಲ್ಲಿ 25 ವರುಷಗಳ ನಂತರ ಅಗರ್ತಲಾದ ರಾಮನಗರವನ್ನು ಈ ಬಾರಿ ಗೆದ್ದಿರುವುದು (ಸಿಪಿಐಎಂ) ಮಾತೊಂದು ಗಮನಾರ್ಹ ಅಂಶವಾಗಿದೆ

ಇನ್ನೊಂದು ವಿಶೇಷವೆಂದರೆ ಬುಡಕಟ್ಟು ಮೀಸಲು (ಎಸ್ ಟಿ) ಸ್ಪರ್ದಿಸಿದ್ದ ಎಲ್ಲಾ 5 ಮಹಿಳಾ ಅಭ್ಯರ್ಥಿಗಳು ಗೆದ್ದಿದ್ದಾರೆ (ಕಳೆದ ಚುನಾವಣೆಯಲ್ಲಿ 3 ನ್ನ ಮಾತ್ರ ಗೆಲ್ಲಲಾಗಿತ್ತು)

ಇನ್ನೂ 10 ಸ್ಥಾನ ಗೆದ್ದಿರುವ ಕಾಂಗ್ರೆಸ್ ಮೈತ್ರಿಕೂಟ ಒಟ್ಟು 9,82,132 ಮತಗಳನ್ನು (ಶೇ 44,60) ಪಡೆದಿದೆ. ಗೆದ್ದ ಸ್ಥಾನಗಳು ಬಹುತೇಕ ನಗರ ಪ್ರದೇಶವಾಗಿವೆ. ಬಿಜೆಪಿ 33,537 (ಶೇ 1,52) ಮತಗಳನ್ನು ಪಡೆದಿದೆ. ಕಾಂಗ್ರೆಸ್ ಶೇ 36,54, ಐಎನ್‌ಪಿಟಿ ಶೇ. 8,11, ಈ ಬಾರಿ 4 ಹೊಸ ಪ್ರದೇಶದಲ್ಲಿ ಸಿಪಿಐ(ಎಂ) ಪಕ್ಷವು ಕಾಂಗ್ರೆಸ್ ನಿಂದ . ಕಾಂಗ್ರೆಸ್ ಪಕ್ಷವು ಎಡರಂಗದಿಂದ 3 ನ್ನು ಕಿತ್ತೊಕೊಂಡಿವೆ.

ತ್ರಿಪುರಾ ನ್ಯಾಷನಲ್ ವಾಲೆಂಟಿಯರ್ಸ್ ನ ನಾಯಕ ಬಿಜೆಯ್ ಹ್ಯಂಗವಾಲ್ (ಐ ಎನ್ ಪಿ ಟಿ ಯಿಂದ) ಸೋತಿರುವುದು ಸಹ ಗಮನಾರ್ಹವಾಗಿದೆ. ಈಗ ಪ್ರಾಥಮಿಕವಾಗಿ ದೊರೆತ ಮಾಹಿತಿಗಳು ಇವು. ಇನ್ನು ಪೂರ್ಣ ಮಾಹಿತಿಗಳು ದೊರೆತ ಮೇಲೆ ವಿವರವಾಗಿ ವಿಶ್ಲೇಷಿಸಬೇಕಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ


ಲಾಲ್ ಸಲಾಂ ಚವೇಝ್ ! ಲಾಲ್ ಸಲಾಂ !!

"ಚವೇಝ್ ಚಿರಾಯು. ಹೋರಾಟ ಮುಂದುವರೆಯುತ್ತದೆ"! ಮೊಳಗಿದ ಘೋಷಣೆ

ವೆನೆಜುವೆಲಾದ ಅಧ್ಯಕ್ಷ ಹ್ಯೂಗೊ ಚವೇಜ್ ಫ್ರಿಯಾಸ್ ನಿಧನ ಹೊಂದಿದ್ದಾರೆ. ಲ್ಯಾಟಿನ್ ಅಮೆರಿಕದಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಸ್ವತಂತ್ರ ರಾಷ್ಟ್ರೀಯತಾವಾದಿ ಸರ್ಕಾರಗಳನ್ನು ಕಳೆದ ದಶಕದಿಂದ ಅಧಿಕಾರಕ್ಕೆ ತಂದ 'ಎಳೆಗೆಂಪು ಅಲೆ'ಯ ಹಿಂದೆ ದೊಡ್ಡ ಶಕ್ತಿ ಆಗಿದ್ದ 58 ವರ್ಷದ ಜನಪ್ರಿಯ ಅಧ್ಯಕ್ಷ ಚವೇಜ್ ನಿಧನ ಇಡೀ ಲ್ಯಾಟಿನ್ ಅಮೆರಿಕದ ಮತ್ತು ಜಗತ್ತಿನ ಎಡ-ಪ್ರಗತಿಪರ ಶಕ್ತಿಗಳು ಮತ್ತು ಜನತೆಯನ್ನು ದುಃಖದ ಕಡಲಲ್ಲಿ ಮುಳುಗಿಸಿದೆ. ಎರಡು ವರ್ಷಗಳ ಕಾಲ ಕ್ಯಾನ್ಸರಿನ ವಿರುದ್ಧ ಹೋರಾಟದ ನಂತರ ಅವರು ಸಾವನ್ನಪ್ಪಿದ್ದಾರೆ. ನಾಲ್ಕು ಬಾರಿ ಭಾರೀ ಬಹುಮತದಿಂದ ಅಧ್ಯಕ್ಷರಾಗಿ ಚುನಾಯಿತರಾಗಿ ಚವೇಜ್ 15 ವರ್ಷಗಳ ಕಾಲ ವೆನೆಜುವೆಲಾ ಮಾತ್ರವಲ್ಲ ಇಡೀ ಲ್ಯಾಟಿನ್ ಅಮೆರಿಕದ ಸಮಾಜವಾದಿ ಚಳುವಳಿಗೆ ಹೊಸ ಉತ್ಸಾಹ ತುಂಬಿದ್ದರು. ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಲ್ಯಾಟಿನ್ ಅಮೆರಿಕದ ದೇಶಗಳ ಹಲವು ಆರ್ಥಿಕ-ರಾಜಕೀಯ ಕೂಟಗಳನ್ನು ಕಟ್ಟಿ, ಅದರ ಆಕ್ರಮಣಗಳಿಗೆ ತೀವ್ರ ಪ್ರತಿರೋಧ ಒಡ್ಡಿದ್ದರು. ಐ.ಎಂ.ಎಫ್. ಮುಂತಾದ ಸಾಮ್ರಾಜ್ಯಶಾಹಿ ಅಧಿಪತ್ಯದ ಅಂತರ್ರಾಷ್ಟ್ರೀಯ ಸಂಘಟನೆಗಳಲ್ಲಿ ಮೂರನೇ ಜಗತ್ತಿನ ದೇಶಗಳನ್ನು ಅಣಿ ನೆರೆಸುವ ಮೂಲಕ ಸಾಮ್ರಾಜ್ಯಶಾಹಿ-ವಿರೋಧದ ಪ್ರತೀಕ ಆಗಿದ್ದರು. 21ನೇ ಶತಮಾನದಲ್ಲೂ ಸಮಾಜವಾದ ಕಟ್ಟುವ ಕನಸು ಕಾಣುವುದು ಸಾಧ್ಯ ಎಂಬುದನ್ನು ತೋರಿಸಿ ಕೊಟ್ಟರು.

ಅವರ ನಿಧನದಿಂದ ದುಃಖತಪ್ತರಾದ ಲಕ್ಷಾಂತರ ಜನತೆ ಅವರ ಶವ ಇಟ್ಟಿರುವ ಮಿಲಿಟರಿ ಅಕಾಡೆಮಿಯಲ್ಲಿ ಕೊನೆಯ ದರ್ಶನಕ್ಕೆ ಕ್ಯೂ ನಿಂತ ವರದಿಗಳು ಬಂದಿವೆ. ಅವರ ಶವಸಂಸ್ಕಾರ ಮಾರ್ಚ್ 8 ರಂದು ನಡೆಯಲಿದೆ. ಉಪಾಧ್ಯಕ್ಷ ನಿಕೊಲಸ್ ಮದುರೊ ತಾತ್ಕಾಲಿಕವಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ವೆನೆಜುವೆಲಾದಲ್ಲಿ ಏಳು ದಿನಗಳ ಶೋಕಾಚರಣೆ ಘೋಷಿಸಲಾಗಿದೆ. ಹೆಚ್ಚಿನ ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ 1 ರಿಂದ 7 ದಿನಗಳ ಶೋಕಾಚರಣೆ ಘೋಷಿಸಲಾಗಿದೆ. ಕಳೆದ ಕೆಲವು ತಿಂಗಳುಗಳ ಕಾಲ ಅನಾರೋಗ್ಯದಿಂದ ಓಡಾಡುವ ಸ್ಥಿತಿಯಲ್ಲಿ ಇಲ್ಲದ ಚವೇಝ್ ಅವರಿಗೆ ಔಪಚಾರಿಕವಾಗಿ ಅಧ್ಯಕ್ಷ ಪದಗ್ರಹಣ ಮಾಡಲು ಸಾಧ್ಯವಿರಲಿಲ್ಲ. ಆಳುವ ಸೋಶಲಿಸ್ಟ್ ಮತ್ತು ವಿರೋಧ ಪಕ್ಷಗಳು ಈ ಸಂದಿಗ್ಧ ಸ್ಥಿತಿಯಲ್ಲಿ ಶಾಂತಿ ಮತ್ತು ರಾಷ್ಟ್ರೀಯ ಐಕ್ಯತೆ ಕಾಪಾಡಿಕೊಳ್ಳಲು ಕರೆ ಕೊಟ್ಟಿವೆ. 30 ದಿನಗಳೊಳಗೆ ಅಧ್ಯಕ್ಷೀಯ ಮರು-ಚುನಾವಣೆ ನಡೆಯಲಿದೆ. ಆಳುವ ಪಕ್ಷದ ಪರವಾಗಿ ಮದುರೊ ಮತ್ತು ವಿರೋಧ ಪಕ್ಷಗಳ ಪರವಾಗಿ ಕಳೆದ ಅಕ್ಟೋಬರಿನಲ್ಲಿ ಸ್ಪರ್ಧಿಸಿದ ಕೆಪ್ರಿಲೆಸ್ ಪುನಃ ಸ್ಪರ್ಧಿಸುವ ನಿರೀಕ್ಷೆ ಇದೆ.





ಸ್ಕೂಲ್ ಟೀಚರ್ ಪಾಲಕರ ಮಗನಾಗಿ ಹುಟ್ಟಿದ್ದ ಚವೇಝ್ 1980ರ ದಶಕದ ಆರಂಭದಲ್ಲಿ ಮಿಲಿಟರಿ ಅಕಾಡೆಮಿಯಲ್ಲಿ ಪ್ಯಾರಾಟ್ರೂಪರ್ ತರಬೇತಿ ಪಡೆದು ತಮ್ಮ ಮಿಲಿಟರಿ ಜೀವನ ಆರಂಭಿಸಿದರು. ಆಗ ಇದ್ದ ಸರ್ವಾಧಿಕಾರದ ವಿರುದ್ಧ ಮಿಲಿಟರಿಯ ಒಳಗೆ ಕ್ರಾಂತಿಕಾರಿ ಬೊಲಿವಾರಿಯನ್ ಚಳುವಳಿಯ ರಾಜಕೀಯ ಚಟುವಟಿಕೆ ಸಹ ಆರಂಭಿಸಿದರು. ಅವರು ಲ್ಯಾಟಿನ್ ಅಮೆರಿಕನ್ ನಾಯಕ ಸೈಮನ್ ಬೊಲಿವರ್ ಅವರ ರಾಜಕೀಯ ವಿಚಾರಗಳಿಂದ ಸ್ಫೂರ್ತಿ ಪಡೆದಿದ್ದರು. ಕ್ಯೂಬನ್ ಕ್ರಾಂತಿಯಿಂದಲೂ ಪ್ರಭಾವಿತರಾಗಿದ್ದರು. 1982ರಲ್ಲಿ ಮೊದಲ ಬಾರಿಗೆ ಸರ್ವಾಧಿಕಾರದ ವಿರುದ್ಧ ಅವರ ಸಂಘಟನೆ ಮಿಲಿಟರಿ ಕ್ಷಿಪ್ರಕ್ರಾಂತಿಗೆ ಪ್ರಯತ್ನಿಸಿದಾಗ ಅದು ವಿಫಲವಾಗಿ ಅವರು ಎರಡು ವರ್ಷ ಜೈಲುವಾಸ ಅನುಭವಿಸಬೇಕಾಯಿತು. ಆಮೇಲೆ ಅವರಿಗೆ ಕ್ಷಮಾದಾನ ನೀಡಿ ಬಿಡುಗಡೆ ಮಾಡಲಾಯಿತು. ಮಿತವ್ಯಯದ ಆರ್ಥಿಕ ನೀತಿಗಳಿಂದ ತತ್ತರಿಸುತ್ತಿದ್ದ ಜನತೆಯ ಪರವಾಗಿ ಇನ್ನೊಮ್ಮೆ ಅವರು ಸಹ ಅಧಿಕಾರಿಗಳ ಜತೆಗೆ 1992ರಲ್ಲಿ ಕ್ಷಿಪ್ರಕ್ರಾಂತಿಗೆ ಪ್ರಯತ್ನಿಸಿದರು. ಅದೂ ವಿಫಲವಾಯಿತು. ಆಮೇಲೆ ಅವರು ಸ್ಥಾಪಿಸಿದ ಮತ್ತು ಇತರ ಹಲವು ಚಳುವಳಿಗಳ ರಾಜಕೀಯ ಕೂಟದಿಂದ 1998ರಲ್ಲಿ ಚುನಾವಣೆಗೆ ಸ್ಪರ್ಧಿಸಿ ಗೆದ್ದರು. ತಮ್ಮ ಐಷಾರಾಮಿ ಬದುಕಿಗಾಗಿ ವಿದೇಶೀ ಕಂಪನಿಗಳಿಗೆ ಅಡವಿಟ್ಟಿದ್ದ ದೇಶದ ತೈಲ ಸಂಪತ್ತನ್ನು ದೇಶದ ಮತ್ತು ಜನತೆಯ ಅಭಿವೃದ್ಧಿಗಾಗಿ ಬಳಸುವ ಪ್ರಣಾಳಿಕೆಯ ಆಧಾರದಲ್ಲಿ ಅವರು ಚುನಾವಣೆ ಗೆದ್ದರು. ಮುಂದೆ ಅವರು ಈ ಚಳುವಳಿಗಳ ಕೂಟವನ್ನು ಸೋಶಲಿಸ್ಟ್ ಪಕ್ಷವಾಗಿ ಕಟ್ಟಿದರು.

ವೆನೆಜುವೆಲಾದ ಬಡತನ, ಅಸಮಾನತೆಯ ಮೂಲ ಅದರ ಮೇಲೆ ಹೊರಿಸಲಾಗಿದ್ದ ನವ-ಉದಾರವಾದಿ ಮತ್ತು ಶ್ರೀಮಂತ-ಪರ ನೀತಿಗಳು ಎಂದು ಅವರು ಅರಿತಿದ್ದರು. ಇದನ್ನು ಆಮೂಲಾಗ್ರವಾಗಿ ಬದಲಾಯಿಸ ಬೇಕಾದರೆ ಸಂವಿಧಾನದ ಬದಲಾವಣೆ ಸಹ ಅಗತ್ಯ ಎಂದು ಮನಗಂಡಿದ್ದರು. ಅದಕ್ಕಾಗಿ ಮೊದಲ ಬಾರಿ ಅಧಿಕಾರಕ್ಕೆ ಬರುತ್ತಲೇ, ಅವರು ಸಂವಿಧಾನ ಸಭೆಯ ಚುನಾವಣೆಗೆ ಏರ್ಪಾಡು ಮಾಡಿ ಬೊಲಿವಾರಿಯನ್ ಸಂವಿಧಾನ ರಚಿಸಲು ಕ್ರಮ ಕೈಗೊಂಡರು. ಪ್ರಮುಖ ತೈಲ ಮತ್ತು ಗ್ಯಾಸ್ ಕಂಪನಿಯ ರಾಷ್ಟ್ರೀಕರಣ ಮಾಡಿದರು. ಹೊಸ ಕಾನೂನು ಮಾಡಿ ತೈಲ ಮಾರಾಟದ ಬೆಲೆಯ ವಿದೇಶೀ ಕಂಪನಿಗಳ ಪಾಲನ್ನು ಶೇ. 84ರಿಂದ ಶೇ.70ಕ್ಕೆ ಕಡಿತ ಮಾಡಿದರು. ಎಕ್ಸೊನ್ ಮತ್ತು ಕೊಕೊನೊ ಎಂಬ ಕಂಪನಿಗಳು ಈ ಷರತ್ತಿಗೆ ಒಪ್ಪಲಿಲ್ಲ. ಅವುಗಳನ್ನು ದೇಶದಿಂದ ಹೊರಗೆ ಹಾಕಲಾಯಿತು. ಚೆವ್ರೊನ್ ಎಂಬ ಕಂಪನಿ ಈ ಷರತ್ತಿಗೆ ಒಪ್ಪಿತು. ಇದು ದೇಶದ ಸಾಮಾಜಿಕ ಕಾರ್ಯಕ್ರಮಗಳಿಗೆ ಅಪಾರ ಹಣ ಒದಗಿಸಿತು.

2000 ಮತ್ತು 2010ರ ಮಧ್ಯದ ಅವಧಿಯಲ್ಲಿ ಸಾಮಾಜಿಕ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾದ ಹಣ ಶೇ.61ರಷ್ಟು ಏರಿತು. 19 'ಮಿಶನ್' ಎಂದು ಕರೆಯಲಾದ ಕಾರ್ಯಕ್ರಮಗಳನ್ನು ಜಾರಿ ಮಾಡಲಾಯಿತು. ಇದರಿಂದ ಬಡತನದ ಪ್ರಮಾಣ ಶೇ.71 ರಿಂದ ಶೇ.21ಕ್ಕೆ ಇಳಿಯಿತು. ಕಡು ಬಡತನ ಶೇ.40ರಿಂದ ಶೇ.7.3ಕ್ಕೆ ಇಳಿಯಿತು. ಸಾಮಾಜಿಕ ಕಾರ್ಯಕ್ರಮಗಳು 2 ಕೋಟಿ ಜನರನ್ನು ತಲುಪಿದವು. ಇದು ಹಿಂದಿದ್ದ ಫಲಾನುಭವಿಗಳ 7 ಪಟ್ಟು. ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು (ಕ್ಯೂಬನ್ ಡಾಕ್ಟರುಗಳ ನೆರವಿನಿಂದ) ವ್ಯಾಪಕಗೊಳಿಸುವುದಲ್ಲದೆ ಉಚಿತವಾಗಿ ಕೊಡಲಾಯಿತು. 2006ರ ಹೊತ್ತಿಗೆ ದೇಶ ಪೂರ್ಣ ಸಾಕ್ಷರ ದೇಶವಾಯಿತು. ಕ್ಯೂಬಾದ ನಂತರ ಲ್ಯಾಟಿನ್ ಅಮೆರಿಕದಲ್ಲಿ ಈ ಹೆಗ್ಗಳಿಕೆ ವೆನೆಜುವೆಲಾದ್ದು ಆಯಿತು. ವಿಶ್ವವಿದ್ಯಾಯಲಯದ ಮಟ್ಟದವರೆಗೆ ಶಿಕ್ಷಣ ಉಚಿತವಾಯಿತು. ದೇಶದ ಮೂವರಲ್ಲಿ ಒಬ್ಬರು (ವಿಶ್ವವಿದ್ಯಾಯಲಯದ ಮಟ್ಟದವರೆಗೆ) ಒಂದಲ್ಲ ಒಂದು ರೂಪದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಶೇ.96 ಜನರಿಗೆ ಈಗ ಶುದ್ಧ ನೀರು ಸಿಗುತ್ತದೆ. ಆಹಾರ ಆಮದಿನ (ಒಟ್ಟು ಬಳಕೆಯ) ಪ್ರಮಾಣ ಶೇ.90ರಿಂದ ಶೇ.30ಕ್ಕೆ ಇಳಿಸಲಾಯಿತು. ಮಕ್ಕಳ ಅಪೌಷ್ಟಿಕತೆ ಶೇ.7.5ರಿಂದ ಶೇ.5ಕ್ಕೆ ಇಳಿಯಿತು. ಶಿಶು ಮರಣದ ಪ್ರಮಾಣ ಸಾವಿರದಲ್ಲಿ 25ರಿಂದ 13ಕ್ಕೆ ಇಳಿಯಿತು. ಡಾಕ್ಟರುಗಳ ಪ್ರಮಾಣ - ಹತ್ತು ಸಾವಿರ



ಪುಟ 12 ಕ್ಕೆ

ಸಮಾಜವಾದಿ ಹೋರಾಟದ ಸ್ಫೂರ್ತಿ...

ಪುಟ 7 ರಿಂದ

ಪೂರಕ ಬೆಳವಣಿಗೆಗಳು.../ ಭಾರತದಲ್ಲಿ ಆಚರಣೆ

1922ರಲ್ಲಿ ರಷ್ಯಾದ ಕಾರ್ಮಿಕ ವರ್ಗದ ನೇತೃತ್ವದ ಸರ್ಕಾರ ಮೊದಲಿಗೆ ಮಾರ್ಚ್ 8ರಂದು ಮಹಿಳಾ ದಿನಾಚರಣೆ ಆಚರಿಸಲು ಸಾರ್ವತ್ರಿಕ ರಜೆ ಘೋಷಿಸಿತು. ಚೀನಾದಲ್ಲಿ ಮೊದಲ ಬಾರಿಗೆ ಇದೇ ವರ್ಷದಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಆಚರಣೆ ವರ್ಷದಿಂದ ವರ್ಷಕ್ಕೆ ಜಗತ್ತಿನಾದ್ಯಂತ ವಿಸ್ತರಿಸುತ್ತಾ ಸಾಗಿತು. ಭಾರತದಲ್ಲಿ ಮೊದಲ ಬಾರಿಗೆ 1931ರಲ್ಲಿ ಲಾಹೋರ್‌ನಲ್ಲಿ ಸಂಘಟಿಸಿದ್ದ 'ಸಮಾನತೆಗಾಗಿ ಏಷ್ಯಾದ ಮಹಿಳಾ' ಸಮಾವೇಶ ದಲ್ಲಿ ಈ ದಿನಾಚರಣೆ ಆಚರಿಸಲಾಯಿತು. ಮಹಿಳೆಯರಿಗೆ ಸಮಾನತೆ ನೀಡಬೇಕೆಂಬುದರ ಜೊತೆ-ಗೆ ಮಹಿಳೆಯರ ಸಮಾನತೆಯನ್ನು ದೇಶಗಳ ಸ್ವಾತಂತ್ರ್ಯಗಳೊಂದಿಗೂ ಜೊತೆಗೂಡಿಸಲಾಯಿತು.

ಎಡಪಂಥೀಯ ಮಹಿಳಾ ಸಂಘಟನೆಗಳು ಮತ್ತು ಸಮಾಜವಾದಿ ದೇಶಗಳು ಈ ಆಚರಣೆಯನ್ನು ಮುಂದುವರೆಸಿ ದವು. 60ರ ದಶಕದಲ್ಲಿ ಮಹಿಳಾ ಚಳವಳಿಯ ಅಲೆ ಅಮೆರಿಕವನ್ನು ತಟ್ಟಿತು ಮತ್ತು ಬಹುತೇಕ ಯೂರೋಪ್ ದೇಶಗಳಲ್ಲಿ ವ್ಯಾಪಿಸಿತು. ಈ ಎಲ್ಲದರ ಪರಿಣಾಮವಾಗಿ ವುಮೆನ್ಸ್ ಇಂಟರ್‌ನ್ಯಾಷನಲ್ ಡೆಮಾಕ್ರಟಿಕ್ ಫೆಡರೇಷನ್ (ಡಬ್ಲ್ಯುಐಡಿಎಫ್) ಅಧ್ಯಕ್ಷರ ಸಲಹೆ ಮೇಲೆ ವಿಶ್ವಸಂಸ್ಥೆ 1975ರಲ್ಲಿ ಮಾರ್ಚ್ 8ನ್ನು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಘೋಷಿಸಿತು.

ಸಮಾಜವಾದಿ ಸ್ಫೂರ್ತಿ : ಮರೆಯಲಾಗದ್ದು

ಇಂದು ಜಗತ್ತಿನಾದ್ಯಂತ ಎಲ್ಲ ದೇಶಗಳು ಮಾರ್ಚ್ 8ನ್ನು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಸುತ್ತಿವೆ. ಇದು ಸ್ವಾಗತಾರ್ಹ ಬೆಳವಣಿಗೆ. ಆದರೆ ಇದು ಮಾರ್ಚ್ 8ರ ಆಚರಣೆಯ ಹಿಂದಿರುವ ಶೋಷಕ ಬಂಡವಾಳಶಾಹಿ ವ್ಯವಸ್ಥೆಗೆ ಸವಾಲೆಸೆಯುವ ಮತ್ತು ಸಮಾನತೆಗಾಗಿ ಹುಟ್ಟಿ ಬಂದ ಮಹಿಳೆಯರ, ಅದರಲ್ಲೂ ದುಡಿಯುವ ಮಹಿಳೆಯರ ಸಮಾಜವಾದಿ ಚಳವಳಿಯ ಸಿದ್ಧಾಂತಗಳ ಸ್ಫೂರ್ತಿಯನ್ನು ದುರ್ಬಲಗೊಳಿಸಲು ಹಾದಿ ಮಾಡಿಕೊಟ್ಟಿತು. ಮಾರ್ಚ್ 8ರ ಹಿಂದಿರುವ ಸಮಾಜವಾದಿ ಸಂಘರ್ಷಗಳನ್ನು ಸ್ಮರಿಸುವುದು ತುಂಬಾ ಮುಖ್ಯವಾಗಿರುವುದರೊಂದಿಗೆ ಮಾರುಕಟ್ಟೆ ತಂತ್ರಗಳನ್ನು ಹೊಂದಿರುವ ಕ್ಷುಲ್ಲಕ ಆಚರಣೆಗಳನ್ನು ತಡೆಯಬೇಕಾಗಿದೆ.

ಎರಡು ಆಯಾಮಗಳು:

ಮಾರ್ಚ್ 8ರ ಆಚರಣೆಯ ಹಿಂದೆ ಎರಡು ಇತಿಹಾಸ ಇದ್ದು ಇವರೆಡೂ ನಮಗೆ ತುಂಬಾ ಪ್ರಸ್ತುತವಾಗಿವೆ. ಮೊದಲನೆಯದು ಮತ್ತು ಅತಿ ಮುಖ್ಯವಾದ ಅಂಶವೆಂದರೆ ಮುಖ್ಯವಾಗಿ ಮಹಿಳೆಯರನ್ನು ಸಂಘಟಿಸುವುದು ಮತ್ತು ಅದರಲ್ಲೂ ದುಡಿಯುತ್ತಿರುವ ಮಹಿಳೆಯರನ್ನು ಸಂಘಟಿಸಿ ಬಂಡವಾಳಶಾಹಿ ಶೋಷಣೆಯಿಂದ ವಿಮೋಚನೆಗಾಗಿ, ಸಮಾಜವಾದಿ ಪರ್ಯಾಯಕ್ಕಾಗಿ ಅಣಿ ನೆರೆಸುವ ಅಗತ್ಯ. ಯೂರೋಪ್, ರಷ್ಯಾ ಮತ್ತು ಅಮೆರಿಕಗಳಲ್ಲಿ ಮಹಿಳೆಯರ ವಿಮೋಚನೆಗಾಗಿ ಶ್ರಮಿಕ ಮಹಿಳಾ ಸಮುದಾಯ ಕೈಗೊಂಡ ಕ್ರಾಂತಿಕಾರಿ ಚಳವಳಿಗಳ ಮೂಲಕ ನಿರ್ವಹಿಸಿದ ಅತಿ ಮುಖ್ಯವಾದ ಪಾತ್ರದ ಪರಿಗಣಿಸುವಿಕೆಗೆ ಆಧಾರ. ಉದ್ಯಮಿಗಳು ಭಾರಿ ಲಾಭಗಳನ್ನು ಗಳಿಸಲು ಮಹಿಳೆಯರು ಮತ್ತು ಬಾಲಕಾರ್ಮಿಕರನ್ನು ಅಪಾರ ಪ್ರಮಾಣದಲ್ಲಿ ಕೈಗಾರಿಕಾರಂಗದಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಗೆ



ತಳ್ಳಿ ಅವರ ಶ್ರಮವನ್ನು ಬಳಕೆ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಇದರಿಂದಾಗಿಯೇ ಮಾರ್ಕ್ಸ್ ಅವರು ಕ್ಯಾಪಿಟಲ್ ಪುಸ್ತಕದ ಮೊದಲ ಆವೃತ್ತಿಯಲ್ಲಿ 'ಯಂತ್ರಗಳನ್ನು ಬಳಕೆ ಮಾಡುವ ಬಂಡವಾಳಶಾಹಿಗಳು ಮೊದಲು ಶೋಷಣೆ ಮಾಡಲು ಬಳಕೆ ಮಾಡಿಕೊಳ್ಳುವುದು ಮಹಿಳೆಯರು ಮತ್ತು ಮಕ್ಕಳ ಶ್ರಮವನ್ನು. ಪ್ರತಿಯೊಬ್ಬ ಕಾರ್ಮಿಕನ ಕುಟುಂಬದ ಸದಸ್ಯರನ್ನು –ಮಹಿಳೆ ಅಥವಾ ಮಕ್ಕಳೆನ್ನದೆ– ಬಂಡವಾಳವನ್ನು ರೂಪಾಂತರಿಸುವ ಕಾರ್ಯತಂತ್ರದಡಿಯಲ್ಲಿ ನೇರವಾಗಿ ನೇಮಕ ಮಾಡಿಕೊಳ್ಳುತ್ತಾ ಶ್ರಮ ಮತ್ತು ಶ್ರಮಿಕರನ್ನು ಕೂಲಿಯಾಳು (ವೇಜ್ ಲೇಬರರ್)ಗಳನ್ನಾಗಿ ಪರಿವರ್ತಿಸಲಾಯಿತು ಎಂದು ಬರೆದಿದ್ದಾರೆ. ಈ ಶೋಷಣೆಯ ವಿರುದ್ಧ ಸಮಾಜವಾದಿ ಮಹಿಳಾ ಕಾರ್ಯಕರ್ತರು ದುಡಿಯುವ ಮಹಿಳೆಯರನ್ನು ನಿರಂತರವಾಗಿ ಸಂಘಟಿಸುವ ಪ್ರಯತ್ನಗಳನ್ನು ನಡೆಸಿದರು.

ಮೊದಲ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್ ನಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರುಗಳು ಮಹಿಳೆಯರು ಸೇರಿದಂತೆ ಎಲ್ಲ ಕಾರ್ಮಿಕರನ್ನು ಸಂಘಟಿಸಲು ಕಾರ್ಮಿಕ ಸಂಘಟನೆಗಳಿಗೆ ನಿರ್ದಿಷ್ಟವಾದ ನಿರ್ದೇಶನಗಳನ್ನು ನೀಡಿದರು. ಅವರ ಬೇಡಿಕೆಗಳ ಪಟ್ಟಿಯನ್ನು ರೂಪಿಸಲು ಅಗತ್ಯ ಮಾಹಿತಿಯನ್ನು ಸಂಗ್ರಹಿಸಲು ಪ್ರಶ್ನಾವಳಿಯನ್ನು ಸಿದ್ಧಪಡಿಸಿದರು. ಮಕ್ಕಳು ಮತ್ತು ಮಹಿಳೆಯರು ಜೀತದಾಳುಗಳಂತೆ ದುಡಿಯುತ್ತಿದ್ದು ಪ್ರತಿದಿನ ಎಂಟು ಗಂಟೆ ಕೆಲಸದ ಕಾನೂನನ್ನು ಅನುಷ್ಠಾನ ಮಾಡುವುದೂ ಇದರಲ್ಲಿ ಸೇರಿತ್ತು. ಪೂರ್ವ ಲಂಡನ್‌ನಲ್ಲಿನ ಕಾರ್ಖಾನೆಗಳಲ್ಲಿ ಮಹಿಳೆಯರನ್ನು ಸಂಘಟಿಸುವಲ್ಲಿ ಮಾರ್ಕ್ಸ್ ಅವರ ಪುತ್ರಿ ಎಲೆನಾರ್ ಪ್ರಮುಖ ಪಾತ್ರ ನಿರ್ವಹಿಸಿದರು. 1888ರಲ್ಲಿ ಲಂಡನ್‌ನಲ್ಲಿನ ಬೆಂಕಿ ಪೆಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಇಡೀ ಮಹಿಳಾ ಕಾರ್ಮಿಕರು ತರುಣಿಯರಿಂದ ಹಿಡಿದು ಮುದುಕಿಯರವರೆಗೆ ಕೆಲಸ ಸ್ಥಗಿತಗೊಳಿಸಿದರು. ಕಾರ್ಮಿಕ ಸಂಘಟನೆಗಳು ಅವರಿಗೆ ಬೆಂಬಲ ವ್ಯಕ್ತಪಡಿಸಿದವು ಮತ್ತು ಅವರು ಹಲವಾರು ಬೇಡಿಕೆಗಳನ್ನು ಈಡೇರಿಸಿಕೊಂಡರು. ಇದು ಮಹಿಳಾ ಕಾರ್ಮಿಕ ಚಳವಳಿಗೆ ಭಾರಿ ಉತ್ತೇಜನ ನೀಡಿತು. ಅಮೆರಿಕದಲ್ಲಿನ ಜವಳಿ ಕಾರ್ಮಿಕರು ಸಹ ಸಮಾಜವಾದಿ ಮಹಿಳಾ ಸಂಘಟನೆಗಳ ಬೆಂಬಲದೊಂದಿಗೆ ಇದೇ ರೀತಿ ಸಂಘಟಿತರಾಗಿ ಹಲವಾರು ಬೇಡಿಕೆಗಳನ್ನು ಈಡೇರಿಸಿ ಕೊಂಡರು. 21ನೇ ಶತಮಾನದ ಆರಂಭದಲ್ಲಿ ಈ ಹೋರಾಟಗಳು ತೀವ್ರ ಸ್ವರೂಪ ಪಡೆದುಕೊಂಡು ಮಾರ್ಚ್ 8ರ ಆಚರಣೆಗೆ ಅರ್ಥಪೂರ್ಣ ಹಿನ್ನೆಲೆ ಒದಗಿಸಿತು. ಮಾರ್ಚ್ 8ನ್ನು ಆಚರಿಸುವುದರ ಹಿಂದಿನ ಪ್ರಮುಖ ತಿರುಳೆಂದರೆ ಬಂಡವಾಳಶಾಹಿ ವಿರುದ್ಧ ಹೋರಾಟ ನಡೆಸುವುದು ಮತ್ತು ಆ ಹೋರಾಟದಲ್ಲಿ ದುಡಿಯುವ ಮಹಿಳೆಯರ ಪ್ರಮುಖ ಪಾತ್ರವನ್ನು ನಿರ್ವಹಿಸುವುದಾಗಿದೆ.

ಒಗ್ಗಟ್ಟು ಒಡೆಯುವುದೇ?

ಹಲವು ಬಾರಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯುತ್ತದೆ ಎಂದು ಭಾವಿಸಲಾಗುತ್ತಿದ್ದ ಮಹಿಳಾ ದಿನಾಚರಣೆಗಳು ಮತ್ತು ಅವರ ಬೇಡಿಕೆಗಳನ್ನು ಪ್ರತ್ಯೇಕವಾಗಿ ನೋಡಬೇಕೆಂದು ಪುರುಷ ಸಂಗಾತಿಗಳಿಗೆ ಮನವರಿಕೆ ಮಾಡಿಕೊಡಲು ಆ ಸಂದರ್ಭದಲ್ಲಿ ಮಹಿಳಾ ಸಮಾಜವಾದಿ ಮಹಿಳಾ ಲೇಖಕರು ಮಾಡಿದ ಪ್ರಯತ್ನಗಳು ಭಾರಿ ಪರಿಶ್ರಮದಾಯಕವಾಗಿದ್ದವು ಮತ್ತು ಅದರಲ್ಲಿ ಅವರು ಯಶಸ್ವಿಯಾದರು. ಸಮಾಜವಾದಿ ಚಳವಳಿಗಳಲ್ಲಿ ದುಡಿಯುವ ವರ್ಗದ ನಡುವೆ ಮಹಿಳೆಯನ್ನು ಮಹಿಳೆಯಾಗಿ ಕಾಣಬೇಕೆಂಬುದರ ಮಹತ್ವದ ಕುರಿತು ಲೆನಿನ್ ಅವರು 1920ರಲ್ಲಿ ಜೆಟ್‌ಕಿನ್ ಅವರೊಂದಿಗೆ ನಡೆಸಿದ ಸಂಭಾಷಣೆಯಲ್ಲಿ ಕಾರ್ಮಿಕ ಚಳುವಳಿಯೊಳಗೆ ಮಹಿಳೆಯನ್ನು ಮಹಿಳೆಯಾಗಿ ಪರಿಗಣಿಸದ ಸಮಾಜವಾದಿ ಸಂಘಟನೆ ಯೊಳಗಿನ ಹಾಗೂ ಕಾರ್ಮಿಕ ಚಳುವಳಿಯ ಸಂಗಾತಿಗಳನ್ನು ಕಟುವಾಗಿ ಟೀಕಿಸಿದರು. ಅವರ ಆಗಿನ ಪ್ರತಿಪಾದನೆಗಳು ಈಗಲೂ ಅಷ್ಟೇ ಮುಖ್ಯವಾಗಿವೆ.

ಈಗಿನ ಹೊಸ ಉದಾರೀಕರಣ ಯುಗದಲ್ಲಿ ದುಡಿಯುವ ವರ್ಗದ ಮಹಿಳೆ ಮತ್ತು ಬಡ ಮಹಿಳೆಯರು –ಗ್ರಾಮೀಣ ಪ್ರದೇಶ ಸೇರಿದಂತೆ– ಅತಿ ಹೆಚ್ಚಿನ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬಂಡವಾಳಶಾಹಿ ಸಿದ್ಧಾಂತವನ್ನು ಹೊಂದಿರುವ ಸರ್ಕಾರಗಳು ಮತ್ತು ಮಾರುಕಟ್ಟೆ ಆಧಾರಿತ ಆರ್ಥಿಕತೆ ಮೇಲೆ ಅವಲಂಬಿತವಾಗಿರುವುದು ಅತಿ ಹೆಚ್ಚಿನ ಹಣದುಬ್ಬರ, ನಿರುದ್ಯೋಗ, ಕೆಲಸದಿಂದ ತೆಗೆದುಹಾಕುವುದು ಮತ್ತು ಕಡಿಮೆ ವೇತನಕ್ಕೆ ದುಡಿಸಿಕೊಳ್ಳುವುದನ್ನು ಹೆಚ್ಚಿಸಿವೆ. ಇವೆಲ್ಲವು ಮಹಿಳೆಯರನ್ನು ಭಾರಿ ಸಂಕಷ್ಟಕ್ಕೆ ಈಡು ಮಾಡಿದೆ. ಮಹಿಳೆಯರು ಮತ್ತು ಹೆಣ್ಣು ಮಕ್ಕಳಲ್ಲಿ ಪೌಷ್ಠಿಕಾಂಶದ ಕೊರತೆಯಲ್ಲಿ ಇದು ಎದ್ದು ಕಾಣುತ್ತಿದೆ. ಮಹಿಳೆಯರು ಸಂಘಟಿತರಾದ ಕಡೆಗಳಲ್ಲಿ ಪ್ರತಿರೋಧ ಬೆಳೆಯುತ್ತಿದೆ. ಹೆಚ್ಚಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಡಜನ ಅವರ ಹಕ್ಕುಗಳಿಗಾಗಿ ಸಂಘಟಿತರಾಗುತ್ತಿದ್ದಾರೆ, ವಿವಿಧ ರೀತಿಯ ಪ್ರತಿಭಟನೆಗಳೂ ಎದುರಾಗುತ್ತಿವೆ. ಇತ್ತ ವಿಶೇಷ ಗಮನ ಹರಿಸಬೇಕು ಮತ್ತು ಈ ನಿಟ್ಟಿನಲ್ಲಿ ಅ[illegible] ಪ್ರಯತ್ನಗಳನ್ನು ಮಾಡಬೇಕು.


ಅದೇ ಸಂದರ್ಭದಲ್ಲಿ ಮತ್ತೊಂದು ಪ್ರಮುಖ ಬೆಳವಣಿಗೆಯೊಂದು ಕಾಣಿಸಿಕೊಂಡಿತು. ಉದಾರವಾದಿ ಬೂರ್ಷ್ವಾ (ಬಂಡವಾಳಶಾಹಿ) ಮಹಿಳಾ ಸಂಘಟನೆಗಳು ಮತ್ತು ಮಹಿಳೆಯರಿಗೆ ರಾಜಕೀಯ ಮತದಾನದ ಹಕ್ಕಿನ ತೀವ್ರಗಾಮಿ ಮಹಿಳಾ ಚಳವಳಿಗಳು ಬ್ರಿಟನ್, ಅಮೆರಿಕ ಮತ್ತು ಯೂರೋಪ್‌ನ ಕೆಲವು ದೇಶಗಳಲ್ಲಿ ಭಾರಿ ವೇಗವಾಗಿ ನಡೆದವು. ಸಫ್ರಾಜೆಟ್, ಅಂದರೆ ಮಹಿಳೆಗೆ ಮತ ಚಲಾಯಿಸುವ ಅಧಿಕಾರ ಪ್ರತಿಪಾದಿಸುವ ಈ ಚಳವಳಿಯಲ್ಲಿ ಬೂರ್ಷ್ವಾ ಹಿನ್ನೆಲೆಯ ಸುಶಿಕ್ಷಿತ ಮಹಿಳೆಯರು ಮತದ ಹಕ್ಕಿಗಾಗಿ ಬೀದಿಗಿಳಿದರು. ಈ ಚಳವಳಿಗೆ ಸಂಬಂಧಿಸಿದಂತೆ ಸಮಾಜವಾದಿ ಮಹಿಳೆಯರ ಪ್ರತಿಕ್ರಿಯೆ ಏನಾಗಿರಬೇಕ್ಕು[illegible] ನೂರು ವರ್ಷಗಳ ನಂತರ ಈ ಉತ್ತರ ತುಂಬಾ ಸ್ಪಷ್ಟವಾಗಿದೆ. ಆದರೆ ಅಂದಿನ ಸಂದರ್ಭ[illegible] ಸಮಾಜವಾದಿ ಚಳವಳಿಗಳ ನಡುವೆ[illegible] ಪುರುಷರಿಗೆ ಸಮಾನವಾಗಿ ಮಹಿಳೆಯರಿಗೂ ಓಟಿನ ಹಕ್ಕು ನೀಡಬೇಕೆಂಬ ನಿರ್ಣಯಕ್ಕೆ ಸಂಬಂಧಿಸಿದಂತೆ ಬೆಂಬಲ ಪಡೆಯಲು ಕ್ಲಾರಾ ಜೆಟ್‌ಕಿನ್ ಭಾರಿ ಹೋರಾಟಗಳನ್ನೇ ನಡೆಸಬೇಕಾಯಿತು. ಎರಡನೇ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್ ನಲ್ಲೂ ಸಹ ಇದಕ್ಕೆ ಭಾರಿ ವಿರೋಧಗಳು ವ್ಯಕ್ತವಾದವು. ಈ ಬೇಡಿಕೆಗೆ ಚರ್ಚ್‌ಗಳ ವಿರೋಧ ವ್ಯಕ್ತವಾಗಬಹುದು ಮತ್ತು ಈಗಾಗಲೇ ಮತದಾನದ ಹಕ್ಕಿಗಾಗಿ ನಡೆಸುತ್ತಿರುವ ಹೋರಾಟಗಳಿಂದ ಹಲವು ದೇಶಗಳಲ್ಲಿ ಶ್ರೀಮಂತ ವರ್ಗದ ಮಹಿಳೆಯರಿಗೆ ಈಗಾಗಲೇ ನೀಡಿರುವ ಮತದಾನದ ಹಕ್ಕಿಗೆ ಅನಗತ್ಯವಾಗಿ ಧಕ್ಕೆಯುಂಟು ಮಾಡಬಹುದು ಎಂಬುದು ಅವರ ವಿರೋಧಕ್ಕೆ ಕಾರಣವಾಗಿತ್ತು. ಇನ್ನು ಕೆಲವರ ವಿರೋಧಕ್ಕೆ ಬೇರೆಯೇ ಕಾರಣ[illegible]

ಈ ಬೇಡಿಕೆಯು ನ್ಯಾಯಬದ್ಧತೆಯನ್ನು ಅರ್ಥ ಮಾಡಿಕೊಳ್ಳಲು ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ ಈಗಿನ ಸಂದರ್ಭದಲ್ಲಿ ಈ ಬೇಡಿಕೆ ಮುಂದಿಡುವುದು ಕಾರ್ಮಿಕ ವರ್ಗದ ನಡುವೆಯೇ ವಿಭಜನೆ ಉಂಟು ಮಾಡಲಿದೆ ಎಂಬ ನೆಪವನ್ನು ಮುಂದಿಟ್ಟಿದ್ದರು. ಈ ಬೇಡಿಕೆ ಇತರ ಹೋರಾಟಗಳನ್ನು ದಿಕ್ಕು ತಪ್ಪಿಸಲಿದ್ದು, ವರ್ಗ ಹೋರಾಟದಿಂದ ಚಳವಳಿಗಳನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಿರುವ ಆಳುವ ವರ್ಗಗಳಿಗೆ ಅಸ್ತ್ರವಾಗಲಿದೆ ಎಂದು ಈಗಲೂ ಕೆಲವರು ಭಾವಿಸಿದ್ದಾರೆ. ಈ ಎಲ್ಲ ಭಿನ್ನ ಅಭಿಪ್ರಾಯಗಳನ್ನು 1907ರಲ್ಲಿ ಮೊದಲ ಬಾರಿಗೆ ಸ್ಟಟ್‌ಗರ್ಟ್ ಸಮಾವೇಶದಲ್ಲಿ ಮತ್ತು 1910ರ ಮಾರ್ಚ್ 8ರಂದು ಕೊಪನ್‌ಹೇಗನ್‌ನಲ್ಲಿ ಸಮಾವೇಶದಲ್ಲಿ ಮುಕ್ತವಾಗಿ ಚರ್ಚೆಗೆ ಬಂದವು. 1910ರ ಮಾರ್ಚ್ 8 ರಂದೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿರ್ಣಯವನ್ನು ಅಂಗೀಕರಿಸಲಾಯಿತು. 1907ರ ಸ್ಟಟ್‌ಗರ್ಟ್ ಸಭೆಯಲ್ಲಿ 58 ಮಹಿಳೆಯರು ಪಾಲ್ಗೊಂಡಿದ್ದರು. ಸ್ಟಟ್‌ಗರ್ಟ್‌ನಲ್ಲೇ ನಿರ್ಣಯ ಅಂಗೀಕರಿಸಲು ಮುಂದಾಗಲಾಯಿತು. ಆದರೆ ನಂತರದಲ್ಲೇ ನಡೆಯಲಿದ್ದ 900ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದ ಎರಡನೇ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನಲ್ಲಿ ವಿಸ್ತೃತ ಚರ್ಚೆಗೆ ಮುಂದಿಡಲು ನಿರ್ಧರಿಸಲಾಯಿತು. ಕ್ಲಾರಾ ಜೆಟ್‌ಕಿನ್‌ನಂತಹ ಮಹಿಳಾ ನಾಯಕಿಯರು ವರ್ಗ ಹೋರಾಟದ ನಡುವಿನ ಸಂಬಂಧಗಳು, ಮತದಾನದ ಹಕ್ಕಿನ ಹೋರಾಟವನ್ನು ಮುಂದಕ್ಕೊಯ್ಯುವುದು ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಮಹಿಳೆಯರು ನೇರವಾಗಿ ತೊಡಗಿಸಿಕೊಳ್ಳಬೇಕಾದ ಮಹತ್ವದ ಕುರಿತು ಸ್ಪಷ್ಟವಾಗಿ ತಮ್ಮ ವಾದ ಮಂಡಿಸಿದರು.

ಮೇಲ್ವರ್ಗದ ಕುಲೀನ ಮಹಿಳೆಯರು ಮತದಾನದ ಹಕ್ಕಿನ ಬೇಡಿಕೆಯನ್ನು ಎತ್ತಿದ ಅಷ್ಟೇ ಕಾರಣಕ್ಕೆ ದುಡಿಯುವ ವರ್ಗಕ್ಕೆ ಈ ಬೇಡಿಕೆ ಅಪ್ರಸ್ತುತವಾಗುವುದಿಲ್ಲ. ಇದಕ್ಕೆ ವಿರುದ್ಧವಾಗಿ ಸಾಮಾಜವಾದಿ ನೋಟವನ್ನು ಹೊಂದಿರುವ ಮಹಿಳೆಯರು ಚಳವಳಿಗಳಲ್ಲಿ ನೇರವಾಗಿ ಮಧ್ಯ ಪ್ರವೇಶ ಮಾಡಬೇಕು. ಮತದಾನವನ್ನು ಪ್ರಜಾಸತ್ತಾತ್ಮಕ ಹಕ್ಕಾಗಿ ಮಾಡುವ ಬೇಡಿಕೆಯನ್ನು ಆಳುವ ವರ್ಗಗಳ ವಿರುದ್ಧದ ಅಸ್ತ್ರವನ್ನಾಗಿ ಬಳಕೆ ಮಾಡಬೇಕೆಂದು ಆಗ್ರಹಿಸಿದರು. ಈ ವಾದಕ್ಕೆ ಬಹುಮತದ ಬೆಂಬಲ ದೊರೆಯಿತು. ಮತ ಚಲಾವಣೆಯನ್ನು ಸಾರ್ವತ್ರಿಕ ಹಕ್ಕನ್ನಾಗಿ ಮಾಡುವ ನಿರ್ಣಯ-ಕ್ಕೆ ಸಮಾಜವಾದಿ ಚಳವಳಿಗಳು ಬೆಂಬಲ ಸೂಚಿಸಬೇಕೆಂಬ ನಿರ್ಣಯವನ್ನು ಪರವಾಗಿ 47 ಮತ್ತು ವಿರುದ್ಧವಾಗಿ 11 ಮತಗಳೊಂದಿಗೆ ಅಂಗೀಕರಿಸಲಾಯಿತು. ಮುಖ್ಯ ಸಮ್ಮೇಳನವೂ ಈ ನಿರ್ಣಯವನ್ನು ಅಂಗೀಕರಿಸಿತು. ಅಂದಿನಿಂದಲೂ ಎಲ್ಲ ಸಮಾಜವಾದಿ ಚಳವಳಿಗಳೂ ಮಹಿಳೆಯರ ಮತದಾನದ ಹಕ್ಕಿನ ಬೇಡಿಕೆಗೆ ಸಂಪೂರ್ಣ ಬೆಂಬಲ ಸೂಚಿಸುತ್ತಾ ಬಂದವು. ಈ ಹಿನ್ನಲೆಯಲ್ಲಿ ನಾವು 1910 ಮಾರ್ಚ್ 8ರ ಅಂತಾರಾಷ್ಟ್ರೀಯ ದಿನಾಚರಣೆ ನಿರ್ಣಯದ ಮಹತ್ವವನ್ನು ಅರಿತುಕೊಳ್ಳಬೇಕು. ಮಹಿಳೆಯರಿಗೆ ಮತದಾನದ ಹಕ್ಕು ಎಂಬ ಘೋಷಣೆ ಸಮಾಜವಾದಿ ವಿಶ್ವ ನಿರ್ಮಾಣದ ಹೋರಾಟದಲ್ಲಿನ ಮಹಿಳೆಯರ ಒಗ್ಗಟ್ಟನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತದೆ.

ಮೊದಲ ಮತದಾನದ ಹಕ್ಕು ಜಾರಿ

ಕೇವಲ ಹತ್ತು ವರ್ಷಗಳ ನಂತರ ರಷ್ಯಾದಲ್ಲಿ ಜಾರ್ ದೊರೆಯ ಆಡಳಿತವನ್ನು ಕೆಳಕ್ಕಿಳಿಸಿ ಅಧಿಕಾರ ವಹಿಸಿಕೊಂಡ ಕಮ್ಯೂನಿಸ್ಟ್ ಪಕ್ಷವು ಮಹಿಳೆಯರಿಗೆ ಬೇಷರತ್ತಾಗಿ ಮತದಾನದ ಹಕ್ಕನ್ನು ನೀಡುವ ಮೂಲಕ ಇಡೀ ಜಗತ್ತಿನಲ್ಲೇ ಮೊದಲ ರಾಷ್ಟ್ರವಾಯಿತು. ಪ್ರಸಕ್ತ ಸಂದರ್ಭದಲ್ಲಿ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಕಲ್ಪಿಸುವ ಮಹಿಳಾ ಮಸೂದೆ ಕುರಿತಂತೆ ಭಾರಿ ಚರ್ಚೆಗಳು ನಡೆಯುತ್ತಿವೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಶೇಕಡ 33 ರಿಂದ 50ಕ್ಕೆ ಹೆಚ್ಚಿಸುವ ಕುರಿತು ಮಾತುಕತೆಗಳು ಮುಂದುವರೆದಿವೆ. ಇಂತಹ ಸಂದರ್ಭವನ್ನು



ಯಶಸ್ವಿಯಾಗಿ ಬಳಕೆ ಮಾಡಿಕೊಂಡು ಬಂಡವಾಳಶಾಹಿ ವ್ಯವಸ್ಥೆಯ ದಿವಾಳಿಕೋರ ನೀತಿಗಳನ್ನು ಬಯಲುಗೊಳಿಸುವ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಈ ಎರಡೂ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಮಾರ್ಚ್ 8ರ ಆಚರಣೆ ತುಂಬಾ ಮುಖ್ಯವಾಗಿದೆ. ಆರ್ಥಿಕ ಮತ್ತು ರಾಜಕೀಯ ಅಂಶಗಳನ್ನು ಒಂದರೊಳಗೊಂದು ಅಂತರ್ಗತಗೊಳಿಸಿ ಮಹಿಳೆಯರ ಹೋರಾಟಕ್ಕೆ ಬಲಿಷ್ಠ ವೇದಿಕೆಯನ್ನು ರೂಪಿಸಬೇಕಾಗಿದೆ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಬೇಕೆಂಬ ಕರೆ ನೂರು ವರ್ಷಗಳ ನಂತರವೂ ಇಡೀ ಜಗತ್ತಿನಲ್ಲಿ ಪ್ರತಿಧ್ವನಿಸಲಿದೆ ಎಂದು ಕೊಪನ್‌ಹೇಗನ್‌ನಲ್ಲಿ ಭಾಗವಹಿಸಿದ್ದ 100 ಮಹಿಳೆಯರು ಊಹಿಸಿರಲಾರರು. ಈ ಕರೆಯು ಅಂದು ಎಷ್ಟು ಪ್ರಮುಖವಾಗಿತ್ತೊ ಇಂದೂ ಅಷ್ಟೇ ಪ್ರಮುಖವಾಗಿದೆ.

ಪ್ರಸ್ತುತ ಸಂದರ್ಭದಲ್ಲಿನ ಅಗತ್ಯತೆ:

ಬಂಡವಾಳಶಾಹಿಯ ವಿರುದ್ಧದ ಹೋರಾಟ ಮತ್ತು ಹೊಸ ಉದಾರೀಕರಣ ನೀತಿಗಳ ಅಡಿಯಲ್ಲಿ ಭಾರಿ ಪ್ರಮಾಣದಲ್ಲಿ ಲಾಭ ಮಾಡುತ್ತಿರುವುದರ ವಿರುದ್ಧ ಹೋರಾಟ ನಡೆಸುವುದು ಹಿಂದೆಂದಿಗಿಂತಲೂ ಹೆಚ್ಚು ತುರ್ತಾಗಿದೆ. ಮಿಲಿಟರೀಕರಣ ಮಾಡುತ್ತಿರುವುದು, ಯುದ್ಧದ ಹಿಂಸಾಕೃತ್ಯಗಳು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಆಕ್ರಮಣಗಳು ಮೊದಲ ಮಹಾ ಯುದ್ಧದ ಸಂದರ್ಭದಲ್ಲಿ ಮಹಿಳೆಯರು ಗಡಿಗಳನ್ನು ಮೀರಿ ಸಮರಧೀರ ಐಕ್ಯತೆ ತೋರಿಸಿದ್ದನ್ನು ನೆನಪಿಸುತ್ತದೆ. ದುರದೃಷ್ಟ ಮತ್ತು ವಿಷಾದಕರ ವಿಷಯ ಎಂದರೆ ಕೆಲವು ದೇಶಗಳಲ್ಲಿನ ಕೆಲವು ಮಹಿಳಾ 'ಫೆಮಿನಿಸ್ಟ್' (ಸ್ತ್ರೀವಾದಿ) ಗುಂಪುಗಳು ಮುನ್ನಡೆಸುವ ಸಮಕಾಲೀನ ಮಹಿಳಾ ಚಳವಳಿಗಳು ಬಂಡವಾಳಶಾಹಿ ನೀತಿ ಮತ್ತು ಸಂಸ್ಕೃತಿಗಳನ್ನು ಮುಂಚೂಣಿಗೆ ತರುತ್ತಿದ್ದು ಸಂಘಟಿತ ಮಹಿಳಾ ಪ್ರತಿರೋಧಗಳನ್ನು ದಾರಿ ತಪ್ಪಿಸುತ್ತಿವೆ. ಮಹಿಳೆಯರ ಸಂಘಟಿತ ಹೋರಾಟಗಳು ಅಪ್ರಸ್ತುತ ಮತ್ತು ಅನಗತ್ಯ ಎಂದು ತೋರಿಸುತ್ತಿವೆ.

ಆರಂಭದಲ್ಲಿ ಕೆನಡಾದ ಕೆಲವು ಮಹಿಳೆಯರು ಪ್ರಯತ್ನಗಳನ್ನು ನಡೆಸಿ ಹಲವಾರು ದೇಶಗಳಲ್ಲಿ 100ಕ್ಕೂ ಹೆಚ್ಚು ಮಹಿಳಾ ಸಂಘಟನೆಗಳನ್ನು ಒಗ್ಗೂಡಿಸಿ ಸಾಮ್ರಾಜ್ಯಶಾಹಿ ಮತ್ತು ಹೊಸ ಜಾಗತೀಕರಣ ನೀತಿಗಳಿಂದ ಮಹಿಳೆಯರ ಬದುಕಿನ ಮೇಲೆ ಆಗುವ ಪರಿಣಾಮಗಳನ್ನು ಕೇಂದ್ರೀಕರಿಸಿ 'ವರ್ಲ್ಡ್ ಮಾರ್ಚ್'ಗೆ ಕರೆ ನೀಡಿದರು. ಆದರೆ ಈ ಚಳವಳಿ ಮಹಿಳಾ ಲೈಂಗಿಕತೆ ಅದರಲ್ಲೂ ಮುಖ್ಯವಾಗಿ ಸಲಿಂಗಕಾಮದಂತಹ ವಿಷಯಗಳತ್ತ ಗಮನ ವರ್ಗಾಯಿಸಿದ್ದರಿಂದ ದುರ್ಬಲವಾಯಿತು. ಮಹಿಳೆಗೆ ತನ್ನ ದೇಹದ ಮೇಲಿನ ಹಕ್ಕು ಮತ್ತು ಆಕೆಯ ಲೈಂಗಿಕ ಆದ್ಯತೆಯನ್ನು ಅಭಿವ್ಯಕ್ತಿ ಗೊಳಿಸುವುದು ಪ್ರಮುಖ ವಿಷಯವಾಗಿ ಪರಿಣಮಿಸಿ ಭಾರತ ಸೇರಿದಂತೆ ಗಣನೀಯ ಪ್ರಮಾಣದ ಮಹಿಳಾ ವಿಭಾಗಗಳು ತಪ್ಪಾಗಿ ವ್ಯಾಖ್ಯಾನಗೊಳಿಸಿದವು. ಇದು ಸಾಮಾಜಿಕ ಸಮಸ್ಯೆಯ ಭಾಗವಾಗಿದೆ ಎಂಬ ವಿಶಾಲ ದೃಷ್ಟಿಕೋನದಿಂದ ಕಾಣಲೇ ಇಲ್ಲ. ಮಹಿಳೆಯರ ಎಲ್ಲ ಸಮಸ್ಯೆಗಳನ್ನು ಅವರ ಲೈಂಗಿಕ ವಿಷಯದೊಂದಿಗೆ ಸಂಬಂಧ ಕಲ್ಪಿಸಲಾಗುತ್ತಿತ್ತು. ವರ್ಗ ಶಕ್ತಿಗಳು ಮಹಿಳೆಯರನ್ನು ಹೊಸ ರೀತಿಯಲ್ಲಿ ಅಧೀನಗೊಳಿಸುತ್ತಿವೆ ಎಂಬುದನ್ನು ಒಪ್ಪಲು ಅವರು ನಿರಾಕರಿಸಿದರು. ನವ ಸಾಮ್ರಾಜ್ಯಶಾಹಿ ಜಾಗತೀಕರಣದ ಅಡಿಯಲ್ಲಿ ಮಹಿಳೆಯರನ್ನು ಹೊಸ ರೀತಿಯಲ್ಲಿ ಅಧೀನರನ್ನಾಗಿಸುವುದು ಮತ್ತು ಲೈಂಗಿಕ ಕಿರುಕುಳಕ್ಕೆ ಗುರಿಪಡಿಸುವುದನ್ನು ನಾವು ಕಾಣುತ್ತಿದ್ದೇವೆ. ಮಹಿಳೆಯರ ಅಕ್ರಮ ಸಾಗಾಣಿಕೆ ಹೆಚ್ಚುತ್ತಿರುವುದು, ಹೆಣ್ಣು ಮಕ್ಕಳ ಮಾರಾಟ, ಯುದ್ಧದಿಂದಾಗಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ವೇಶ್ಯಾವಾಟಿಗೆ ದೂಡಲ್ಪಡುವಂತಹ ಒತ್ತಡಗಳು ಹೆಚ್ಚಾಗುತ್ತಿರುವುದು, ಸ್ಥಳಾಂತರ ಮತ್ತು ಬಡತನದ ಸಮಸ್ಯೆಗಳು ಹೆಚ್ಚುತ್ತಿವೆ. ಇದಕ್ಕೆ ಸಾಮ್ರಾಜ್ಯಶಾಹಿಗಳ ವಿರುದ್ಧ ನಿರಂತರವಾದ ಮತ್ತು ಸಂಘಟಿತ ಹೋರಾಟದ ಅಗತ್ಯವಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜಕಾರಣದ ಆಶ್ರಯದಲ್ಲಿ ನಡೆಯುವ ಮಾದಕ ವಸ್ತುಗಳ ದಂಧೆ ವಿರುದ್ಧ ಹೋರಾಟಗಳನ್ನು ಕೈಗೊಳ್ಳಬೇಕಾಗಿದೆ.

ಭಾರತದಲ್ಲಿ ಮಧ್ಯಯುಗದಲ್ಲಿ ನಡೆ-ಯುತ್ತಿದ್ದ 'ಗೌರವ ಕೊಲೆ'ಗಳು ಜಾತಿ ವ್ಯವಸ್ಥೆ ಮುಂದುವರೆದಿರುವುದರಿಂದ ಈಗಲೂ ನಡೆಯುತ್ತಿವೆ. ಭಾರತದ ಮಹಿಳಾ ಚಳವಳಿಗಳು ಮಹಿಳೆಯರ ಉನ್ನತೀಕರಣಕ್ಕಾಗಿ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಬೇಕಾಗಿದೆ. ಮತ್ತೊಂದು ರೀತಿಯಲ್ಲಿ ಎಂದರೆ ವೈಯಕ್ತಿಕ ಸಂಬಂಧಗಳ ಕುರಿತಂತೆ ಜಾತಿ ವ್ಯವಸ್ಥೆ ವಿರುದ್ಧ ದಿಟ್ಟತನ ತೋರಿದ ಮಹಿಳೆಯರ ವಿರುದ್ಧ ಆಯಾ ಜಾತಿಗಳ ಒಳಗೆ ನಡೆಯುವ ಜಾತಿ ಪಂಚಾಯತಿಗಳಲ್ಲಿ ಫತ್ವಾಗಳನ್ನು ಹೊರಡಿಸುವುದನ್ನು ಜಾತಿ ವ್ಯವಸ್ಥೆಯಲ್ಲಿ ಅಡಗಿರುವ ಸಾಮಾಜಿಕ-ಆರ್ಥಿಕ ಹಿನ್ನೆಲೆಯಲ್ಲೇ ಕಾಣಬೇಕು. ದುರದೃಷ್ಟ ಎಂದರೆ ಮಹಿಳಾ ಸ್ವಾಯತ್ತತೆ ಬಗ್ಗೆ ಗಟ್ಟಿಯಾಗಿ ಮಾತನಾಡುವವರು ಈ ಸಾಮಾಜಿಕ-ಆರ್ಥಿಕ ಸಂಬಂಧಗಳ ನಡುವೆ ಬೆಸೆದುಕೊಂಡಿರುವ ಸಂಬಂಧಗಳನ್ನು ನೋಡುವುದಿಲ್ಲ. ಎಡಪಂಥೀಯ ಸಂಘಟನೆಗಳ ಅಡಿಯಲ್ಲಿ ಮಹಿಳೆಯರು ಒಗ್ಗೂಡುವುದಕ್ಕೂ ಅವರು ಪ್ರತಿರೋಧ ವ್ಯಕ್ತಪಡಿಸುತ್ತಾರೆ.

ಕೊನೆಯದಾಗಿ:


ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಬಂಡವಾಳಶಾಹಿ, ಪುರುಷ ಪ್ರಧಾನ ಸಮಾಜದ ಸಂಕೋಲೆಗಳ ವಿರುದ್ಧ ಮತ್ತು ಮಹಿಳಾ ಉನ್ನತೀಕರಣದ ಸಂಕೇತವಾಗಿದೆ. ಭಾರತದಲ್ಲಿ ಪ್ರಜಾಸತ್ತಾತ್ಮಕ ಬೇಡಿಕೆಗಳು ಮತ್ತು ಹೋರಾಟಗಳ ಪ್ರಸ್ತುತ ಸನ್ನಿವೇಶದಲ್ಲಿ ಅಪಾರ ಸಂಖ್ಯೆಯ ಮಹಿಳೆಯರನ್ನು ಸಮಾನತೆಯ ವೇದಿಕೆ ಅಡಿಯಲ್ಲಿ ಒಗ್ಗೂಡಿಸುವ ಅಗತ್ಯವಿದೆ. ಇದನ್ನು ಯಶಸ್ವಿಗೊಳಿಸಬೇಕಾದರೆ ದುಡಿಯುವ ಮಹಿಳೆ, ದಲಿತ ಮಹಿಳೆ, ಬುಡಕಟ್ಟಿನ ಮಹಿಳೆಯರು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ ಸಮಸ್ಯೆಗಳನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಳ್ಳಬೇಕು. ಅಸಮಾನತೆಯಿಂದ ಕೂಡಿರುವ ಪ್ರಸಕ್ತ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾಯಿಸಬೇಕಾದರೆ ಅವರೆಲ್ಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಾರ್ಚ್ 8ರ ಶತಮಾನೋತ್ಸವವನ್ನು ಆಚರಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಈ ಹೋರಾಟವನ್ನು ಮುನ್ನಡೆಸುವ ಪ್ರತಿಜ್ಞೆ ಮಾಡಬೇಕು.

ಲಾಲ್ ಸಲಾಂ ಚವೇಝ್ ! ಲಾಲ್ ಸಲಾಂ

ಪುಟ 9 ರಿಂದ

ಜನರಿಗೆ 18ರಿಂದ 58ಕ್ಕೆ ಅಂದರೆ ಮೂರು ಪಟ್ಟಗಿಂತಲೂ ಹೆಚ್ಚಾಯಿತು. ನಿರುದ್ಯೋಗದ ಪ್ರಮಾಣ ಶೇ.15ರಿಂದ ಶೇ.7.5ಕ್ಕೆ ಇಳಿಯಿತು. ಹಲವು ಉದ್ಯಮಗಳನ್ನು ರಾಷ್ಟ್ರೀಕರಿಸಲಾಗಿದೆ. ಕಾರ್ಮಿಕರು ತಮ್ಮ ಕಾರ್ಖಾನೆಯ ನಿರ್ವಹಣೆ ವಹಿಸಿಕೊಳ್ಳುವ ಕಾನೂನುಬದ್ಧ ಹಕ್ಕು ಹೊಂದಿವ್ದಾರೆ.

ಭೂಸುಧಾರಣೆ ಕಾನೂನು ಜಾರಿಗೆ ತಂದು ದೊಡ್ಡ ಎಸ್ಟೇಟುಗಳ ಬಲ ಮುರಿಯಲಾಯಿತು. ಈ ಹಲವು ಸುಧಾರಣಾ ಕ್ರಮಗಳಿಂದ ಆಳುವ ವರ್ಗದ ಗೋಣು ಮುರಿದಂತಾಯಿತು. ಅವರು ಚವೇಝ್ ವಿರುದ್ಧ ಕತ್ತಿ ಮಸೆಯತೊಡಗಿದರು. ಇತ್ತ ವಿದೇಶೀ ತೈಲ ಕಂಪನಿಗಳ ಮೇಲೆ ಹೊಸ ಷರತ್ತುಗಳಿಂದ ಅಮೆರಿಕ ಮತ್ತು ಯುರೋಪಿಯನ್ ಸರ್ಕಾರಗಳು ಸಹ ಚವೇಝ್ ಸರ್ಕಾರವನ್ನು ಉರುಳಿಸಲು ಪ್ರಯತ್ನ ನಡೆಸಿದವು. ವಿರೋಧ ಪಕ್ಷಗಳಿಗೂ ಚವೇಝ್–ವಿರೋಧಿ ಚಳುವಳಿಗಳಿಗೂ ಅಪಾರ ಹಣ ಸುರಿದವು. ಪ್ರತೀ ಚುನಾವಣೆಯಲ್ಲೂ ಚವೇಝ್ ವಿರುದ್ಧ ಅಪ್ರಚಾರ ಕೈಗೊಂಡವು. 2002ರಲ್ಲಿ ನಡೆದ ಕ್ಷಿಪ್ರಕ್ರಾಂತಿಗೂ ಬೆಂಬಲ ಕೊಟ್ಟವು. ಆದರೆ ದುಡಿಯುವ ಜನ ಮತ್ತು ಬಡವರು ಸರ್ಕಾರದ ಬೆಂಬಲಕ್ಕೆ ನಿಂತು ಈ ಕ್ಷಿಪ್ರಕ್ರಾಂತಿಯನ್ನು ಸೋಲಿಸಿದರು.



ಚವೇಝ್ ಅವರ ಮರಣ ಉಂಟು ಮಾಡಿದ ಪ್ರಭಾವೀ ನಾಯಕತ್ವದ ಕೊರತೆಯನ್ನು ತುಂಬುವುದು ಕಷ್ಟಸಾಧ್ಯವೇ. ಆದರೆ ಚವೇಝ್ ಮರಣದೊಂದಿಗೆ ವೆನೆಜುವೆಲಾ ಮತ್ತು ಲ್ಯಾಟಿನ್ ಅಮೆರಿಕಾದ ಕ್ರಾಂತಿಕಾರಿ 'ಎಳೆಗೆಂಪು ಅಲೆ' ಹಿಮ್ಮೆಟ್ಟುತ್ತದೆ, ಸೋಲುತ್ತದೆ ಎಂಬಂತಹ ಭಾವನೆಯನ್ನು ಸಾಮ್ರಾಜ್ಯಶಾಹಿ ಮಾಧ್ಯಮಗಳು ಬಿಂಬಿಸಲು ಪ್ರಯತ್ನಿಸುತ್ತಿವೆ. ಆದರೆ ವೆನೆಜುವೆಲಾದ ರಾಜಧಾನಿ ಕ್ಯಾರಕಾಸಿನಲ್ಲಿ ಚವೇಝ್ ಮೃತದೇಹದ ಸುತ್ತ ನೆರೆದ ಜನರ ಘೋಷಣೆಗಳು ಅದನ್ನು ಹುಸಿ ಎಂದು ತೋರಿಸುತ್ತಿವೆ. 'ಚವೇಝ್ ಚಿರಾಯು. ಹೋರಾಟ ಮುಂದುವರೆಯುತ್ತದೆ' 'ಒಗ್ಗಟ್ಟಾದ ಜನತೆಯನ್ನು ಸೋಲಿಸುವುದು ಸಾಧ್ಯವಿಲ್ಲ.' ಎಂಬ ಘೋಷಣೆಗಳು ಗಟ್ಟಿದನಿಯಲ್ಲಿ ಕೇಳಿ ಬಂದವು. 'ಒಂದೇ ಒಂದು ಕಾರ್ಯಕ್ರಮವನ್ನೂ ಹಿಂತೆಗೆದುಕೊಳ್ಳುವುದಿಲ್ಲ. ನಮ್ಮ ದೇಶವನ್ನು ಮನಃ ಬೂರ್ಜ್ವಾ ವರ್ಗ ಕೊಳ್ಳೆ ಹೊಡೆಯಲು ಬಿಡುವುದಿಲ್ಲ. ಜನಕ್ಕೆ ಮತ್ತು ಚವೇಝ್ ಅವರಿಗೆ ವಿಶ್ವಾಸಘಾತಕ ಮಾಡುವುದಕ್ಕಿಂತ ಸಾಯುವುದು ಒಳ್ಳೆಯದು" ಎಂದು ಹಂಗಾಮಿ ಅಧ್ಯಕ್ಷ ಮದುರೊ ಘೋಷಿಸಿದರು.

ಚವೇಝ್ ನಿಧನಕ್ಕೆ ಕಂಬನಿ

ಚವೇಝ್ ನಿಧನಕ್ಕೆ ಸಂತಾಪ ಸೂಚಿಸಿ ಹಲವು ಜಾಗತಿಕ ನಾಯಕರು, ದೇಶಗಳ ಮುಖ್ಯಸ್ಥರು ಸಂದೇಶಗಳನ್ನು ಕಳಿಸಿದ್ದಾರೆ. ಲ್ಯಾಟಿನ್ ಅಮೆರಿಕದ ಸರ್ಕಾರಿ ಮುಖ್ಯಸ್ಥರುಗಳಲ್ಲದೆ ಅಮೆರಿಕ, ರಶ್ಯಾ, ಚೀನಾ, ಇರಾನ್‌ಗಳ ಅಧ್ಯಕ್ಷರು ಸಂತಾಪ ಸಂದೇಶಗಳನ್ನು ಕಳಿಸಿದ್ದಾರೆ. ಭಾರತ ಮತ್ತು ಜಗತ್ತಿನಾದ್ಯಂತ ಎಡ ಮತ್ತು ಪಗ್ರತಿಪರ ಪಕ್ಷಗಳು ಸಂಘಟನೆಗಳೂ ಸಂತಾಪ ಸೂಚಿಸುವುದಲ್ಲದೆ, ವೆನೆಜುವೆಲಾ ಜನತೆ ಮತ್ತು ಕ್ರಾಂತಿಕಾರಿ ಸಾಧನೆಗಳ ರಕ್ಷಣೆಯ ಹೋರಾಟದಲ್ಲಿ ಸೌಹಾರ್ದ ಬೆಂಬಲ ವ್ಯಕ್ತಪಡಿಸಿವೆ.

"ಚವೇಝ್ ಅವರ ದೇಶವನ್ನು ಸಮಾಜವಾದದತ್ತ ಒಯ್ಯುವ ಹೋರಾಟದಲ್ಲಿ ತೊಡಗಿದ್ದರು. ಇದಕ್ಕೆ ಅವರು ಸತತವಾಗಿ ಚುನಾವಣೆಗಳನ್ನು ಗೆಲ್ಲುವ ಮೂಲಕ ಜನಾದೇಶ ಪಡೆದಿದ್ದರು. ಅವರ ಮರಣ ಲ್ಯಾಟಿನ್ ಅಮೆರಿಕದ ಮತ್ತು ಜಗತ್ತಿನ ಪ್ರಗತಿಪರ ಶಕ್ತಿಗಳಿಗೆ ದೊಡ್ಡ ಹೊಡೆತ. ಆದರೆ ಅವರ ವಿಚಾರಗಳು ಮತ್ತು ಅವರು ಹಾಕಿಕೊಟ್ಟ ಹಾದಿ ಉಳಿದು ಬೆಳೆಯುತ್ತದೆ..." ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸಂತಾಪ ಸಂದೇಶದಲ್ಲಿ ಹೇಳಿದೆ. ಚವೇಝ್ ಅವರ ಶವಸಂಸ್ಕಾರ ನಡೆಯುವ ಮಾರ್ಚ 8ರಂದು ಪಕ್ಷದ ಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಬೇಕೆಂದೂ ಸಿಪಿಐ(ಎಂ) ನಿರ್ಧರಿಸಿದೆ.

"ಚವೇಝ್ ಇನ್ನಿಲ್ಲ. ಆದರೆ ಅವರ ಸ್ಫೂರ್ತಿ ಮತ್ತು ಬೊಲಿವಾರಿಯನ್ ಕ್ರಾಂತಿ ಮುಂದುವರೆಯುತ್ತದೆ. ಅದನ್ನು ಅವರ ಉತ್ತರಾಧಿಕಾರಿಗಳು, ಬೆಂಬಲಿಗರು, ವೆನೆಜುವೆಲಾ ಮತ್ತು ಲ್ಯಾಟಿನ್ ಅಮೆರಿಕದ ಜನತೆ, ಇಡೀ ಜಗತ್ತಿನ ಸೋಶಲಿಸ್ಟರು ಮುಂದಕ್ಕೆ ಕೊಂಡೊಯ್ಯುತ್ತಾರೆ. ನಾವು ಅವರ ಧ್ಯೇಯೋದ್ದೇಶಗಳಿಗೆ ಸೌಹಾರ್ದ ಬೆಂಬಲ ಸೂಚಿಸುತ್ತೇವೆ" ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ. ತನ್ನ ಸಂತಾಪ ಹೇಳಿಕೆಯಲ್ಲಿ ತಿಳಿಸಿದೆ.

"ಬೊಲಿವಾರಿಯನ್ ಕ್ರಾಂತಿಯ ಭವಿಷ್ಯವನ್ನು, ವೆನೆಜುವೆಲಾದ ಜನತೆ ಮತ್ತು ನೆರೆಯ ದೇಶಗಳ ಸೌಹಾರ್ದತೆ ನಿರ್ಧರಿಸುತ್ತದೆ. ...ಚವೇಝ್ ಅವರ ಪ್ರಾಜೆಕ್ಟ್ ಅರ್ಧಕ್ಕೆ ನಿಂತಿದೆ. ಆದರೆ ಕ್ರಾಂತಿಯನ್ನು ಹಿಮ್ಮೆಟ್ಟಿಸಲು ●

ಕೆ.ಆರ್. ಪುರಂದಲ್ಲಿ ಸಂಘರ್ಷ ಜಾಥಾ...

ಪುಟ 5 ರಿಂದ

ಶಾಸಕರು, ಜೈಲಿಗೆ ಹೋದರೂ ಅಧಿಕಾರ ಬಿಡಲು ಬಿಜೆಪಿ ಮಂದಿ ತಯಾರಿಲ್ಲ.... ಹೀಗೆ ರಾಜ್ಯದ ರಾಜಕೀಯ ಅಧಪತನ, ದುರಾಡಳಿತವನ್ನು ಸಮಗ್ರವಾಗಿ ತೆರೆದಿಟ್ಟ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ.ಜಿ.ವಿ. ಶ್ರೀರಾಂರೆಡ್ಡಿ ಪರ್ಯಾಯ ಜನಪರ ಆಡಳಿತಕ್ಕಾಗಿ ಸಿಪಿಐ(ಎಂ) ಬೆಂಬಲಿಸಲು ಕೋರಿದರು.

1971 ರಲ್ಲಿ ಇಂದಿರಾಗಾಂಧಿ 'ಗರೀಬಿ ಹಟಾವೋ' ಎಂದು ಕೂಗಿದರು. ಆಗ ನಮ್ಮ ಜನ 'ನಮ್ಮಮ್ಮ' ಎಂದು ಮತ ನೀಡಿದರು. ಆದರೆ ಇಂದಿಗೂ ದೇಶದಲ್ಲಿ ಬಡವರ ಸ್ಥಿತಿ ಸುಧಾರಣೆ ಆಗಲಿಲ್ಲ. ಬಡವರ ಹೆಸರೇಳಿ ಶ್ರೀಮಂತರ ರಕ್ಷಣೆ ಮಾಡುವ ಕಾಂಗ್ರೇಸ್‌ನಿಂದ ದೇಶದ ಉದ್ಧಾರ ಸಾಧ್ಯವಿಲ್ಲವೆಂದು ಬಹಿರಂಗ ಸಭೆಯಲ್ಲಿ ವಿವರಿಸಿದ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ವಿ.ಜೆ.ಕೆ. ನಾಯರ್, ಈ ದೇಶದ ಬಡ ಕುಟುಂಬಗಳಿಗೆಲ್ಲಾ 35 ಕೆ.ಜಿ.ಯಂತೆ ಅಕ್ಕಿ ನೀಡಲು 2.70 ಲಕ್ಷ ಕೋಟಿ ಹಣ ಸಾಕು. ಹೀಗೆ ಮಾಡಿದರೆ ಸಹಜವಾಗಿಯೇ ಅಕ್ಕಿ, ಬೆಲೆ ರೂ.70 ರಿಂದ ರೂ. 10 ಕ್ಕೆ ಇಳಿಯುತ್ತದೆ. ಆದರೆ 'ಬಡವರ' ಪಕ್ಷವಾದ ಕಾಂಗ್ರೇಸ್‌ಗೆ ಇದು ಬೇಕಾಗಿಲ್ಲ ಎಂದರು.

ಮುಂಬರುವ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಕೆ.ಆರ್.ಪುರಂ ಕ್ಷೇತ್ರದ ಜನತೆ ಭ್ರಷ್ಟಾಚಾರಿ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್‌ನ ಪಾಪದ ಹಣಕ್ಕೆ ಮಾರು ಹೋಗದೆ ನಿಜಕ್ಕೂ ಸಾಮಾನ್ಯ ಜನರ ಒಳಿತಿಗಾಗಿ ದುಡಿಯುತ್ತಿರುವ ಸಿಪಿಐ(ಎಂ) ಪಕ್ಷವನ್ನು ಬೆಂಬಲಿಸುವಂತೆ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ಪೂರ್ವವಲಯದ ಸಮಿತಿ ಸಿಪಿಐ (ಎಂ) ಕಾರ್ಯದರ್ಶಿ ಕಾಂ. ಗೌರಮ್ಮ ಮನವಿ ಮಾಡಿದರು. ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಮೀನಾಕ್ಷಿ ಸುಂದರಂ, ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎಚ್.ಎನ್. ಗೋಪಾಲಗೌಡ ಸೇರಿದಂತೆ ಹಲವು ಮುಖಂಡರು ಪಾಲ್ಗೊಂಡಿದ್ದರು. ಕನ್ಯಾಕುಮಾರಿಯಿಂದ ದೆಹಲಿಗೆ ಸಾಗಿಹೋದ ಸಿಪಿಐ(ಎಂ) ಜಾಥಾವು ನವಭಾರತ ನಿರ್ಮಾಣದ ಸಂಘರ್ಷ ಸಂದೇಶವನ್ನು ಕರ್ನಾಟಕ ರಾಜ್ಯದ ಜನರಲ್ಲಿ ಬಿತ್ತಿ, ಅವರು ಮುಂಬರುವ ವಿಧಾನಸಭಾ ಚುನಾವಣೆಯ ದಿಕ್ಕುದೆಸೆಗಳ ಬಗ್ಗೆ ಚಿಂತಿಸುವಂತೆ ಮಾಡುವಲ್ಲಿ ಯಶಸ್ವಿಯಾಯಿತು.

ತ್ರಿಪುರಾ: ಎಡರಂಗದ ಗೆಲುವು...

ಪುಟ 8 ರಿಂದ

2013 ರ ಫೆಬ್ರವರಿ 14 ರಂದು ತ್ರಿಪುರಾದ ವಿಧಾನ ಸಭೆಗೆ, ನಾಗಲ್ಯಾಂಡ್ ಮೇಘಾಲಯಗಳ ಜೊತೆಗೆ ಮತದಾನ ನಡೆದಿತ್ತು. ಫೆಬ್ರವರಿ 28 ರಂದು ಮತ ಎಣಿಕೆ . ಅಂದೇ ಕೇಂದ್ರ ಸರಕಾರ 2013–14 ರ ವಾರ್ಷಿಕ ಬಜೆಟ್ ನ್ನು ಮಂಡಿಸಿದ ದಿನ. ಇದು ಜಗತ್ತಿಗೆ ಗೊತ್ತಿರುವ ಸಂಗತಿ. ಆದರೆ ಚುನಾವಣಾ ಆಯೋಗವೂ ಅಂದೇ ಮತ ಎಣಿಕೆಯನ್ನ ನಿಗದಿ ಮಾಡಿದ (ದುರು) ಉದ್ದೇಶ ತೀವ್ರವಾಗಿ ಟೀಕೆಗೊಳಗಾಗಿದೆ. (ಮಾಧ್ಯಮಗಳ ನಿರ್ಲಕ್ಷ್ಯಕ್ಕೆ ಒಂದು ನೆಪ!) ತ್ರಿಪುರಾದಲ್ಲಿ ಎಡರಂಗ ಗೆಲ್ಲುವುದು ನಿಶ್ಚಿತವಾದ್ದರಿಂದಲೇ ಅದರ ಮಹತ್ವವನ್ನು ಗೌಣಗೊಳಿಸಲು, ನಡೆಸಿದ ಒಂದು ಪ್ರಯತ್ನವೆಂದು ಖಂಡಿಸಲಾಗಿದೆ.


(ಮುಂದುವರಿಯುವುದು)

ಕಾಂ ಮಾಣಿಕ್ ಸರ್ಕಾರ್ 4 ನೇ ಬಾರಿ ಮುಖ್ಯಮಂತ್ರಿ
ಒಟ್ಟು 12 ಜನ ಸಂಪುಟ ಪ್ರಮಾಣ ವಚನ.

2013 ಮಾರ್ಚ್ 5 ರಂದು ಕಾಂ ಮಾಣಿಕ್ ಸರ್ಕಾರ್ ರವರನ್ನು ಎಡರಂಗವು ನಾಯಕನನ್ನಾಗಿ ಆರಿಸಿದ್ದನ್ನು ಅನುಸರಿಸಿ ರಾಜ್ಯಪಾಲರು ಸರ್ಕಾರ ರಚನೆಗೆ ಆಹ್ವಾನಿಸಿದರು. ನೂತನ ಮಂತ್ರಿ ಮಂಡಲವು 6 ರಂದು ಸಂಜೆ ರಾಜಭವನದ ಸರಳ, ಸಂಭ್ರಮದ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿತು. ಮೊದಲು ಕಾಂ. ಮಾಣಿಕ್ ಸರ್ಕಾರ್ 4 ಬಾರಿ ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಬಾದಲ್ ಚೌಧುರಿ, ಅಘೋರಿ ದೇವಬರ್ಮನ್, ತಪನ್ ಚಕ್ರವರ್ತಿ, ಜಿತೇಂದ್ರ ಚೌಧುರಿ, ಮಾಣಿಕ್ ಡೇ, ಖಗೇಂದ್ರ ಜಮಾತಿಯಾ, ಮಣೀಂದ್ರ ರಿಯಾಂಗ್, ಶ್ರೀಮತಿ ಬಿಜಿತ ನಾಥ್, ಶಾಹಿದ್ ಚೌಧುರಿ, ಬಾನು ಲಾಲ್ ಸಹಾ, ರತನ್ ಭೌಮಿಕ್ ಹೀಗೆ ಸಚಿವರು ಪ್ರಮಾಣ ವಚನ ಸ್ವೀಕರಿಸಿದರು. 12 ಜನರ ಸಚಿವ ಸಂಪುಟ ಈ ಸಮಾರಂಭದಲ್ಲಿ ಅಸ್ತಿತ್ವಕ್ಕೆ ಬಂದಿತು .ತ್ರಿಪುರಾದ ಎಡರಂಗದ ನಾಯಕರು ಅಲ್ಲದೇ ವಿಶೇಷವಾಗಿ ಸಿಪಿಐಎಂ ಪಾಲೀಟ್ ಬ್ಯೂರೋ ಸದಸ್ಯರಾದ ಕಾಂ ಸೀತರಾಮ್ ಯೆಚೂರಿ, ಪ–ಬಂಗಾಳ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಕಾಂ ಸೂರ್ಯಕಾಂತ ಮಿಶ್ರಾ ಮುಂತಾದವರು ಹಾಜರಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಡರೈತರ ಸಾಲಮನ್ನಾವನ್ನೂ ಬಿಡದ ಹಗರಣದ ಪೆಡಂಭೂತ



ವೇದರಾಜ ಎನ್.ಕೆ.

ಮತ್ತೊಂದು ಹಗರಣವನ್ನು ಮಹಾ ಲೆಕ್ಕ ಪರಿಶೋಧಕರು(ಸಿಎಜಿ) ಬಯಲಿಗೆಳೆದಿದ್ದಾರೆ. ಇದು ಬಡರೈತರ ಬಗ್ಗೆ ತನ್ನ ಅಪಾರ ಕಾಳಜಿಯ ಪ್ರತೀಕ ಎಂದು ಪ್ರಧಾನ ಮಂತ್ರಿಗಳೂ ಸೇರಿದಂತೆ ಎಲ್ಲ ಯುಪಿಎ ಮುಖಂಡರ, ಮುಖ್ಯವಾಗಿ ಕಾಂಗ್ರೆಸ್ ಘಟಾನುಘಟಿಗಳು ಡಂಗುರ ಸಾರುತ್ತಿದ್ದ 2008ರಲ್ಲಿ ತಂದ ರೂ. 52,000 ಕೃಷಿ ಸಾಲಮನ್ನಾ ಸ್ಕೀಮಿನ ಜಾರಿಯಲ್ಲಿ ನಡೆದಿರುವ ಹಗರಣ. ಇದರ ಜಾರಿಯ ಪರಿಶೋಧನೆ ನಡೆಸಿದ ಸಿಎಜಿಯ ವರದಿಯನ್ನು ಮಾರ್ಚ್ 5 ರಂದು ಸಂಸತ್ತಿನಲ್ಲಿ ಮಂಡಿಸಲಾಯಿತು.


ಈ ಸ್ಕೀಮಿನ ಅನುಷ್ಠಾನದಲ್ಲಿ ಬಹಳಷ್ಟು ಮೋಸ ನಡೆದಿದ್ದು, ಇದರ ಪರಿಣಾಮವಾಗಿ ಸಾಲಮನ್ನಾಕ್ಕೆ ಅರ್ಹರಾಗಿದ್ದ 1257 ಮಂದಿ(1.46ಶೇ.)ಯನ್ನು ಸಾಲ ನೀಡಿದ ಸಂಸ್ಥೆಗಳು ಫಲಾನುಭವಿಗಳೆಂದು ಪರಿಗಣಿಸಲೇ ಇಲ್ಲ, ಇನ್ನೊಂದೆಡೆ ಈ ಸ್ಕೀಮಿನ ಪ್ರಯೋಜನ ಪಡೆದ .5ಶೇ. ಮಂದಿ ಸಾಲಮನ್ನಾ ಅಥವ ಪರಿಹಾರಕ್ಕೆ ಅರ್ಹರೇ ಆಗಿರಲಿಲ್ಲ. ಅಲ್ಲದೆ ಮಾರ್ಗದರ್ಶಿ ನಿರ್ದೇಶನಗಳನ್ನು ಉಲ್ಲಂಘಿಸಿ 500 ಕೋಟಿ ರೂ.ಗಳನ್ನು ವಿವಿಧ ಸಹಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಪಾವತಿ ಮಾಡಲಾಗಿದೆ. ಇವುಗಳಲ್ಲಿ ಹಲವು 2008ರಲ್ಲಿ ಅತೀ ಹೆಚ್ಚು ರೈತರ ಆತ್ಮಹತ್ಯೆಗಳನ್ನು ಕಂಡ ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಕೇರಳದಲ್ಲಿರುವಂತವು ಎಂದು ಈ ಸಿಎಜಿ ವರದಿಯನ್ನು ಅಧ್ಯಯನ ಮಾಡಿದ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ(ಎಐಎಡಬ್ಲ್ಯುಯು)ಗಳ ಜಂಟಿ ಹೇಳಿಕೆ ಗಮನಿಸಿದೆ.

ಸಾಲ ನೀಡಿದ ಸಂಸ್ಥೆಗಳು ಯಾವ ರೈತರ ಸಾಲಮನ್ನಾ ಅರ್ಜಿಗಳನ್ನು ಸ್ವೀಕರಿಸಲಾಗಿದೆ, ಯಾವುದನ್ನು ತಿರಸ್ಕರಿಸಲಾಗಿದೆ, ಎಷ್ಟು ಮಂದಿ ರೈತರಿಗೆ ಸಾಲಮನ್ನಾದ ಫಲವಾಗಿ ಹೊಸ ಸಾಲಗಳನ್ನು ಮತ್ತು ಪರಿಹಾರವನ್ನು ನೀಡಲಾಗಿದೆ ಎಂಬುದರ ದಾಖಲೆಗಳನ್ನು ಇಟ್ಟಿಲ್ಲ ಎಂದು ಸಿಎಜಿ ಗಮನಿಸಿದೆ. ದಾಖಲೆಗಳನ್ನು ಕೆಡಿಸಿದ, ತಿದ್ದಿದ, ಬದಲು ಮಾಡಿದ ಆಧಾರಗಳು ಇರುವಂತೆ ಕಾಣುತ್ತದೆ. ಬ್ಯಾಂಕ್ ಶುಲ್ಕಗಳು, ಸಾಲಕ್ಕಿಂತಲೂ ಹೆಚ್ಚು ಬಡ್ಡಿ ವಸೂಲಿ, ಸುಸ್ತಿ ಬಡ್ಡಿ, ಕಾನೂನು ಶುಲ್ಕ, ಇನ್ಸ್‌ಪೆಕ್ಷನ್ ಮತ್ತು ಇತರೇ ಬ್ಯಾಂಕುಗಳೇ ತೆರಬೇಕಾದ ಶುಲ್ಕಗಳನ್ನು ವಸೂಲಿ ಮಾಡಲಾಗಿದೆ. ಖಾಸಗಿ ವಾಣಿಜ್ಯ ಬ್ಯಾಂಕುಗಳು, ಕಿರುಸಾಲ(ಮೈಕ್ರೋ ಫೈನಾನ್ಸ್) ಸಂಸ್ಥೆಗಳು ಇದರಲ್ಲಿ ಭಾಗಿಯಾಗಿದ್ದು, ರಿಝರ್ವ್ ಬ್ಯಾಂಕ್ ಮತ್ತು ನಬಾರ್ಡ್ ಕೂಡ ಸ್ವಂತ ಪರೀಕ್ಷಣೆ ನಡೆಸದೆ ಸಾಲ ನೀಡಿದ ಸಂಸ್ಥೆಗಳು ಕೊಟ್ಟ ಮಾಹಿತಿಯನ್ನೇ ಆಧರಿಸಿವೆ ಎಂದು ಸಿಎಜಿ ಪರಿಶೋಧನೆ ಗಮನಿಸಿದೆ.

ಯುಪಿಎ ಸರಕಾರದ ಮೇಲೆ, ಕೆಲವು ಅನರ್ಹರಿಗೆ ಪ್ರಯೋಜನ ಒದಗಿಸಿ, ದೊಡ್ಡ ಸಂಖ್ಯೆಯಲ್ಲಿ ನಿಜಕ್ಕೂ ಸಾಲಮನ್ನಾದ ಅಗತ್ಯ ಇದ್ದವರನ್ನು ವಂಚಿಸುವ ಇಂತಹ ಅನುಷ್ಠಾನ ಮಾಡಿರುವ ದೋಷಾರೋಪಣೆ ಈ ಸಿಎಜಿ ವರದಿಯಲ್ಲಿದೆ ಎಂಬುದು ತಮ್ಮ ದೃಢ ನಿಲುವು, ಇದರಲ್ಲಿ ನೂರಾರು ಕೋಟಿ ರೂ.ಗಳನ್ನು ನುಂಗಿ ಹಾಕಿರುವ ಒಂದು ಹಗರಣವನ್ನು ಸಿಎಜಿ ಹೊರಗೆಳೆದಿದೆ ಎಂಬ ಬಗ್ಗೆ ಸಂದೇಹವಿಲ್ಲ ಎಂದಿರುವ ಎಐಕೆಎಸ್ ಮತ್ತು ಎಐಎಡಬ್ಲ್ಯುಯು ಈ ಬಗ್ಗೆ ಆದಷ್ಟು ಬೇಗನೇ ಒಂದು ಸ್ವತಂತ್ರ, ಆಮೂಲಾಗ್ರ ತನಿಖೆ ನಡೆಸಬೇಕು, ಬಡ ಮತ್ತು ಅಂಚಿನಲ್ಲಿರುವ ರೈತರಿಗೆಂದಿದ್ದ ... ಗುರುತಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿವೆ.

ಬಜೆಟ್ ಬೆನ್ನಹಿಂದೆಯೇ ಬಂತು ಮತ್ತೆ ಪೆಟ್ರೋಲ್ ಬೆಲೆಯೇರಿಕೆ

ಪೆಟ್ರೋಲಿಯಂ ಸಬ್ಸಿಡಿಯಲ್ಲಿ 30,000 ಕೋಟಿ ರೂ.ಗಳ ಕಡಿತದ ಬಜೆಟ್ ಮಂಡಿಸಿದ ಮರುದಿನವೇ ಪೆಟ್ರೋಲ್ ದರಗಳಲ್ಲಿ ಮತ್ತೊಮ್ಮೆ ಏರಿಕೆಯನ್ನು ಪ್ರಕಟಿಸಲಾಗಿದೆ. 15 ದಿನಗಳ ಹಿಂದೆಯಷ್ಟೇ ಹಿಂದಿನ ಸುತ್ತಿನ ಏರಿಕೆಯಾಗಿತ್ತು. ಇತ್ತೀಚಿನ ವಾರಗಳಲ್ಲೇ ಇದು ಅತಿ ಹೆಚ್ಚಿನ ಏರಿಕೆಯೆನ್ನಲಾಗಿದೆ. ಬಜೆಟ್ ಇನ್ನೂ ಚರ್ಚೆಯಲ್ಲಿರುವುದರಿಂದ ಸಬ್ಸಿಡಿ ಕಡಿತ ಇನ್ನೂ ಜಾರಿಗೆ ಬಂದಿಲ್ಲ. ಅದು ಜಾರಿಗೆ ಬಂದ ಮೇಲೆ ಪರಿಸ್ಥಿತಿ ಹೇಗಿರಬಹುದು



ಎಂಬುದರ ಪೂರ್ವಸೂಚನೆಯನ್ನು ಕೊಡುವುದು ಬಹುಶಃ ಯುಪಿಎ-2 ಸರಕಾರದ ಆಶಯವಾಗಿರಬಹುದು. ಆ ಮೂಲಕ ಜನಸಾಮಾನ್ಯರ ಬಗ್ಗೆ ಹೊಂದಿರುವ 'ಕಾಳಜಿ'ಯನ್ನು ಪ್ರದರ್ಶಿಸಿದೆ ಮತ್ತೊಮ್ಮೆ ಪ್ರದರ್ಶಿಸಿದೆ!

ಇದರಲ್ಲಿ ಆಶ್ಚರ್ಯವೇನಿಲ್ಲ. ಯುಪಿಎ ಸರಕಾರದ ಏಕೈಕ ಕಾಳಜಿಯೆಂದರೆ ಹಣಕಾಸು ಕೊರತೆಯನ್ನು 'ಮಿತಿ'ಯೊಳಗಿಡುವುದು, ಅದೇ ವೇಳೆಗೆ ಶ್ರೀಮಂತ ವಿಭಾಗಗಳಿಗೆ ಸ್ವಲ್ಪವೂ 'ನಿರುತ್ಸಾಹ'ವಾಗದಂತೆ ನೋಡಿಕೊಳ್ಳುವುದು.

ಅದಕ್ಕಾಗಿ ಪೆಟ್ರೋಲಿಯಂ ಸಬ್ಸಿಡಿಯಲ್ಲಿ ಭಾರೀ ಕಡಿತ ತಂದಿರುವುದಷ್ಟೇ ಅಲ್ಲ, ಒಟ್ಟು ಯೋಜನಾ ವೆಚ್ಚದಲ್ಲಿ 18ಶೇ. ಕಡಿತ ಮಾಡಲಾಗಿದೆ, ಸುಮಾರಾಗಿ ಪ್ರತಿಯೊಂದು ಇಲಾಖೆಯ ಯೋಜನಾ ವೆಚ್ಚವನ್ನು ಕಡಿತ ಮಾಡಲಾಗಿದೆ, ಜಲಸಂಪನ್ಮೂಲ ಇಲಾಖೆಯ ವೆಚ್ಚವನ್ನಂತೂ 57ಶೇ.ದಷ್ಟು ಕಡಿತ ಮಾಡಲಾಗಿದೆ. ಕೇವಲ 4 ಇಲಾಖೆಗಳು ಈ ಕಡಿತ ತಪ್ಪಿಸಿಕೊಂಡಿವೆ–ವಿಮಾನಯಾನ, ವಿದೇಶಾಂಗ ವ್ಯವಹಾರಗಳು, ನಗರಾಭಿವೃದ್ಧಿ ಮತ್ತು ನವೀಕರಿಸಬಹುದಾದ ಇಂಧನ. ಇದು ಬೆಳೆ ಸಂಶೋಧನೆಯಿಂದ ಹಿಡಿದು ಸರಕಾರಿ ಶಾಲೆಗಳ ಗುಣಮಟ್ಟ ಮತ್ತು ಹಲವು ಮಂದಿಗೆ ಉದ್ಯೋಗಾವಕಾಶಗಳನ್ನು ನಿರ್ಮಿಸಬಹುದಾಗಿದ್ದ ಮೂಲರಚನೆಗಳನ್ನು ತಟ್ಟಬಹುದು ಎಂದು ಕೆಲವು ಪರಿಣತರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಯುಪಿಎ-2 ಸರಕಾರಕ್ಕೆ ಅವುಗಳ ಚಿಂತೆಯಿಲ್ಲ, ಅಂತರ್ರಾಷ್ಟ್ರೀಯ ರೇಟಿಂಗ್ ಸಂಸ್ಥೆಗಳ ಸರ್ಟಿಫಿಕೇಟ್ ಸಿಕ್ಕಿದ ಅಷ್ಟು ಸಾಕು!

ಯಥಾಪ್ರಕಾರ ಈ ಏರಿಕೆ ತನ್ನ ಕೃತ್ಯವಲ್ಲ, ತೈಲ ಮಾರಾಟ ಕಂಪನಿಗಳು ಮಾಡಿರುವ ಏರಿಕೆಯೆಂಬ ಅದರ ಸಬೂಬು ಇದ್ದೇ ಇದೆ. ಅತ್ತ ತೈಲ ಕಂಪನಿಗಳಿಂದಲೂ 'ಕಡಿಮೆ ವಸೂಲಾತಿ'ಯ ರಾಗಾಲಾಪನೆ; ಅವು ಎರಡು ಕಾರಣಗಳನ್ನು ಕೊಟ್ಟಿವೆ-ಒಂದು, ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ಪೆಟ್ರೋಲಿನ ದರ ಏರಿಕೆ, ಇನ್ನೊಂದು ರೂಪಾಯಿಯ ಬೆಲೆ ಇಳಿದಿರುವುದು. ಇವೂ ಅವು ಸಾಮಾನ್ಯವಾಗಿ ಕೊಡುವ ಕಾರಣಗಳೇ.

ಕಳೆದ ಸಂಚಿಕೆಯಲ್ಲಿ ಗಮನಿಸಿದಂತೆ, ಈ ಹೊಸ ಏರಿಕೆಯ ಮೊದಲೇ ಯುಪಿಎ-2 ಸರಕಾರ ಪೆಟ್ರೋಲ್ ಬೆಲೆಗಳನ್ನು 19 ಬಾರಿ ಹೆಚ್ಚಿಸಿದೆ, ಒಟ್ಟು ಏರಿಕೆ 120ಶೇ., ಡೀಸೆಲ್ ಬೆಲೆಗಳಲ್ಲಿನ ಏರಿಕೆ 67ಶೇ. ಡೀಸೆಲ್ ಬೆಲೆಯೇರಿಕೆಯ ಈ ತಿಂಗಳ ಕಂತು ಇನ್ನು ಬರಬೇಕಷ್ಟೇ.

"ಬಡತನದ ರೇಖೆಯ ಕೆಳಗಿರುವವರು 30ಶೇ. ಮಾತ್ರ!"ಎಂದಿದೆ ಯುಪಿಎ-2

2009-10ರಲ್ಲಿ ತಲಾ ಮಾಸಿಕ ಬಳಕೆ ಖರ್ಚಿನ ಆಧಾರದಲ್ಲಿ 29.8ಶೇ. ಎಂದು ಸಂಸದೀಯ ವ್ಯವಹಾರಗಳು ಮತ್ತು ಯೋಜನಾ ಇಲಾಖೆಯ ರಾಜ್ಯ ಮಂತ್ರಿಗಳು ಸಂಸತ್ತಿಗೆ ತಿಳಿಸಿದ್ದಾರೆ. ಈ ಬಡತನ ರೇಖೆಯ ನಿರೂಪಣೆಯೇನು? ನಗರಗಳಲ್ಲಿ ತಿಂಗಳಿಗೆ 860ರೂ.ಗಿಂತ, ಗ್ರಾಮೀಣ ಪ್ರದೇಶಗಳಲ್ಲಿ 673 ರೂ.ಗಳಿಗಿಂತ ಹೆಚ್ಚು ಖರ್ಚು ಮಾಡಬಲ್ಲ ವ್ಯಕ್ತಿಯನ್ನು ಬಡವ ಎನ್ನುವಂತಿಲ್ಲ. ಅಂದರೆ, ತಮ್ಮೆಲ್ಲ ಬದುಕಿನ ಅಗತ್ಯಗಳಿಗೆ ದಿನಕ್ಕೆ 23ರೂ. ನಂದ 29ರೂ. ಖರ್ಚು ಮಾಡಬಲ್ಲವರು ಬಡವರಲ್ಲ. ಇದು ಕೂಡ ಕೇವಲ ಶೌಚಾಲಯದ ನವೀಕರಣಕ್ಕೆ 37ಲಕ್ಷ ರೂ. ಖರ್ಚು ಮಾಡಿದ್ದನ್ನು ಸಮರ್ಥಿಸಿಕೊಂಡಿರುವ ಯೋಜನಾ ಆಯೋಗದ ಲೆಕ್ಕಾಚಾರವೇ.

ಈ ನಡುವೆ ಯೋಜನಾ ಆಯೋಗದ ಉಪಾಧ್ಯಕ್ಷರ ಮಾದರಿ ದೇಶದ ಒಂದು ನಡೆಸಿದ ಅಧ್ಯಯನ ಆರೋಗ್ಯದ ವಿಷಯದಲ್ಲಿ ಭಾರತ ತನ್ನೆಲ್ಲ ನೆರೆದೇಶಗಳಿಂದ ಹಿಂದಿದೆ ಎಂದು ವರದಿ ಮಾಡಿದೆ. ಭಾರತದಲ್ಲಿ 2010ರಲ್ಲಿ ಸರಾಸರಿ ವಯಸ್ಸು 65.2 ವರ್ಷ, ಪಾಕಿಸ್ತಾನದಲ್ಲಿ 65.7,ಬಾಂಗ್ಲಾ ದೇಶದಲ್ಲಿ 69.0, ನೇಪಾಳದಲ್ಲಿ 69.2, ಭೂತಾನದಲ್ಲಿ 69.4, ಶ್ರೀಲಂಕಾದಲ್ಲಿ 75.5 ಮತ್ತು ಚೀನಾದಲ್ಲಿ 75.7ವರ್ಷ. 20ವರ್ಷಗಳ ಹಿಂದೆ 1990ರಲ್ಲೂ ಭಾರತದ್ದೇ ಕೊನೆಯ ಸ್ಥಾನ, ಆದರೆ ಇತರ ದೇಶಗಳೊಂದಿಗೆ ಹೋಲಿಸಿದರೆ ಬಹಳ ವ್ಯತ್ಯಾಸವಿರಲಿಲ್ಲ-ಶ್ರೀಲಂಕ ಮತ್ತು ಚೀನಾವನ್ನು ಬಿಟ್ಟು-ಭಾರತದಲ್ಲಿ ಆಗ ಸರಾಸರಿ ವಯಸ್ಸು 58.3 ವರ್ಷ ಇದ್ದಿದ್ದರೆ, ನೇಪಾಳ, ಭುತಾನ ಮತ್ತು ಬಾಂಗ್ಲಾ ದೇಶದಲ್ಲಿ ಅನುಕ್ರಮವಾಗಿ 58.8. 58.8 ಮತ್ತು 58.9 ವರ್ಷ; ಪಾಕಿಸ್ತಾನದಲ್ಲಿ 62.3, ಚೀನಾದಲ್ಲಿ 69.3 ಮತ್ತು ಶ್ರೀಲಂಕಾದಲ್ಲಿ 72.3ವರ್ಷ.

ಇದು ವಾಶಿಂಗ್ಟನ್‌ನ ಆರೋಗ್ಯಮಾಪಕಗಳು ಮತ್ತು ಮೌಲ್ಯಮಾಪನ ಸಂಸ್ಥೆ(ಐಹೆಚ್‌ಎಂಇ) ತನ್ನ ಅಧ್ಯಯನದಲ್ಲಿ ಕಂಡು ಬಂದಿರುವ ಸಂಗತಿ ಎಂದಿದೆ. ಅದು 187 ದೇಶಗಳನ್ನು ಕುರಿತಂತೆ ಈ ಅಧ್ಯಯನ ನಡೆಸಿದ್ದು ಭಾರತದ ಸ್ಥಾನ 155ನೇಯದ್ದು.

ಈ ಬಾರಿಯ ಬಜೆಟ್ ಭಾಷಣದಲ್ಲಿ ಚೀನಾ ಮತ್ತು ಇಂಡೋನೇಸ್ಯಾದ ನಂತರ ಭಾರತವೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಎಂದು ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ ತನ್ನ ಜನತೆಗೆ ಉತ್ತಮ ಬದುಕನ್ನು ಕೊಡುವಲ್ಲಿ ಬಹಳ ಅತ್ಯಂತ ನಿಧಾನವಾಗಿ ಸಾಗುತ್ತಿರುವ ದೇಶಗಳಲ್ಲಿ ಅದು ಪ್ರಮುಖ ಸ್ಥಾನ ಪಡೆದಿದೆ.

ಗುಲ್ಬರ್ಗಾ: ಟೀಚರ್ ಮಾಸಪತ್ರಿಕೆಯ ರಾಜ್ಯಮಟ್ಟದ ಶೈಕ್ಷಣಿಕ ಹಬ್ಬ

ಗುಲ್ಬರ್ಗಾದ ಎಸ್.ಎಮ್.ಪಂಡಿತ ರಂಗ ಮಂದಿರದಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯು ಟೀಚರ್ ಮಾಸ ಪತ್ರಿಕೆಯ 11 ನೇ ವಾರ್ಷಿಕೋತ್ಸವ ಹಾಗೂ ರಾಜ್ಯ ಮಟ್ಟದ ಶೈಕ್ಷಣಿಕ ಹಬ್ಬ ಕಾರ್ಯಕ್ರಮವನ್ನು ದಿ: 15.02.2013 ಮತ್ತು 16.02.2013 ರಂದು ಎರಡು ದಿನಗಳ ಕಾಲ ಯಶಸ್ವಿಯಾಗಿ ಆಯೋಜಿಸಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಶಿಕ್ಷಕರು, ವಿದ್ಯಾರ್ಥಿಗಳು, ವಿಜ್ಞಾನ ಚಳುವಳಿಯ ಕಾರ್ಯಕರ್ತರು ಸಡಗರದಿಂದ ಭಾಗವಹಿಸಿದ್ದರು. ಎರಡೂ ದಿನಗಳ ಕಾಲ ವಿಜ್ಞಾನ, ಶಿಕ್ಷಣದ ಹಕ್ಕು, ಹೈದರಾಬಾದ್ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ, ಮಹಿಳೆಯರ ಸ್ಥಿತಿಗತಿ, ಇತ್ಯಾದಿ ಕುರಿತು ಹಲವು ವಿಚಾರಗೋಷ್ಟಿಗಳು ಜರುಗಿದವು. ಉದ್ಘಾಟನಾ ಸಮಾರಂಭದಲ್ಲಿ ಶ್ರೀ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ, ಪಾರ್ವತಿ ಮೆನನ್, ಪ್ರಗತಿಪರ ಸಾಹಿತಿ ಬೊಳುವಾರು ಮಹಮ್ಮದ್ ಕುಂಞ ಮತ್ತು ಇತರರು ಭಾಗವಹಿಸಿದ್ದರು.



ಆಶಯ ಭಾಷಣ ಮಾಡಿದ ಶ್ರೀ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ ಈ ದೇಶದಲ್ಲಿ ಎಲ್ಲವೂ ಅಂಕೆ ಮೀರುತ್ತಿದೆ. ಜನರು ಹೊಸದಕ್ಕಾಗಿ ಹಾತೊರೆಯುತ್ತಿದ್ದಾರೆ. ಆ ಹೊಸದಕ್ಕಾಗಿ ಮುಂದಿನ ದಿನಗಳಲ್ಲಿ ಜನರೇ ಸಾತ್ವಿಕ ದಂಗೆ ಏಳುವಂತಹ ಕಾಲ ಬಂದೇ ಬರುತ್ತದೆ ಎಂದು ಹೇಳಿದರು. ದೆಹಲಿ ಅತ್ಯಾಚಾರ ಪ್ರಕರಣದ ವಿರುದ್ಧ ನಡೆದದ್ದು ಹೋರಾಟವಲ್ಲ ಅದು ಸಾರ್ವಜನಿಕರೊಳಗೆ ಮಡುಗಟ್ಟಿದ್ದ ಆಕ್ರೋಶದ ದಂಗೆ ಅದರಂತೆ ಮುಂದಿನ ದಿನಗಳಲ್ಲಿ ಇನ್ನಷ್ಟು ಸಾತ್ವಿಕ ದಂಗೆಗಳಾಗುತ್ತವೆ. ಅವುಗಳಾದಾಗಲೇ ನಮಗೆ ಹೊಸ ರೀತಿಯ ಬದುಕು ಮತ್ತು ಆಲೋಚನೆ ಹಾಗೂ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಿಕೊಳ್ಳಲು ಸ್ವಲ್ಪ ಸಹಾಯವಾಗುತ್ತದೆ ಎಂದು ಹೇಳಿದರು.

ಇಂದಿನ ನಮ್ಮ ಸಾಮಾಜಿಕ ವ್ಯವಸ್ಥೆ ತುಂಬಾ ಕ್ರೂರವಾಗುತ್ತಿದೆ ಚಳುವಳಿಗಳು ಅರ್ಥ ಕಳೆದು ಕೊಳ್ಳುತ್ತಿವೆ. ಪ್ರಾಮಾಣಿಕತೆ ಮಾಯವಾಗುತ್ತಿದೆ. ಅಪ್ರಾಮಾಣಿಕತೆ ವಿಜೃಂಭಿಸುತ್ತಿದೆ. ರಾಜಕಾರಣಿ, ಅಧಿಕಾರಿ, ಶಿಕ್ಷಕ, ಸಾಹಿತಿ, ಮಠಾಧೀಶ, ವಕೀಲ, ಪೊಲೀಸ್ ಚಿಂತಕರು ಎಲ್ಲರಲ್ಲೂ ಸ್ವಾರ್ಥಕ್ಕೆ ಸಿಲುಕಿ ಭ್ರಷ್ಟರಾಗುತ್ತಿದ್ದಾರೆ. ಅವರ ಎಲ್ಲ ಚಿಂತನೆಗಳಲ್ಲಿ ಭವಿಷ್ಯದ ಭದ್ರ ಚಿಂತನೆಗಳಿಲ್ಲ ಅದರಿಂದಾಗಿ ನಾವು ಕ್ರೂರತೆಗೆ ತಳ್ಳಲ್ಪಡುತ್ತಿದ್ದೇವೆ ಎಂದು ಕಳವಳ ವ್ಯಕ್ತಪಡಿಸಿದರು.

ಮಠಗಳು ಇಂದು ಕೇವಲ ಡಾಂಭಿಕ ಭಕ್ತಿ ಹಂಚುತ್ತಿವೆ. ಮೂಢನಂಬಿಕೆಯಲ್ಲಿ ಜನರನ್ನು ಉಳಿಸಿಕೊಳ್ಳಲಾಗುತ್ತಿದೆ. ಮಠಾಧೀಶರಲ್ಲೂ ಸಂಪತ್ತುಗಳಿಕೆ ಚಿಂತೆ ಶುರುವಾಗಿದೆ ಇದರಿಂದಾಗಿ ಅವರೂ ಓಲೈಕೆಗೆ ಬಿದ್ದಿದ್ದಾರೆ. ನಿಜವಾದ ಸನ್ಯಾಸಿಯಾದವನಿಗೆ ಸತ್ಯ ಮಾತನಾಡಲಿಕ್ಕೆ ಸತ್ಯವಾಗಿ ಬದುಕಲಿಕ್ಕೆ ಭಯವೇಕೆ ಎಂದು ಪ್ರಶ್ನಿಸಿದರು ಅವರು ಇಂದಿನ ಮಠಗಳು ಭಯದ ನೆರಳಿನಲ್ಲಿವೆ. ಅದೊಂದು ದೊಡ್ಡ ವಿಷವರ್ತುಲವಾಗಿ ಬೆಳೆಯುತ್ತಿದೆ. ರಾಜ್ಯದಲ್ಲಿ ಎಲ್ಲ ಜಾತಿಗೊಂದರಂತೆ 1500 ಮಠಗಳಿವೆ. ಇದರಲ್ಲಿ 100 ಮಠಗಳು ಸಮಾನ ಉದ್ದೇಶವನ್ನು ಇಟ್ಟುಕೊಂಡು ಒಟ್ಟಾಗಿ ಹೋರಾಟಕ್ಕೆ ಮುಂದಾದರೆ ಮನುಷ್ಯ ಸಹಜ ಪರಿವರ್ತನೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಒಂದೆಡೆ ಜನಪ್ರತಿನಿಧಿ, ಮತ್ತೊಂದೆಡೆ ಮಠಮಾನ್ಯಗಳು ಸಮಾಜವನ್ನು ಲೂಟಿ ಮಾಡುತ್ತಿವೆ. ಇದು ಹೀಗೆ ಮುಂದುವರಿದರೆ, ಬರುವ ದಿನಗಳಲ್ಲಿ ಭಿಕ್ಷುಕ ಹಾಗೂ ಭಕ್ಷಕ ಎರಡೇ ವರ್ಗಗಳು ಉಳಿಯಲಿವೆ. ಕನ್ನಡದಲ್ಲಿ ಕಲಿತರೆ ಅನ್ನಕ್ಕೇನು ಮಾಡಬೇಕೆಂಬ ಸ್ಥಿತಿ ಇರುವಾಗ ಯಾರು ತಾನೆ ಕನ್ನಡ ಕಲಿಯಲು ಮುಂದಾಗಲು ಸಾಧ್ಯ. ಸರ್ಕಾರ ಒಂದೆಡೆ ಕನ್ನಡ ಉಳಿಸುವ ಮಾತನಾಡುತ್ತದೆ ಮತ್ತೊಂದೆಡೆ ಆಂಗ್ಲ ಶಾಲೆಗಳಿಗೆ ಮಾನ್ಯತೆ ನೀಡಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿದೆ ಇದರಿಂದ ಬರುವ ದಿನಗಳಲ್ಲಿ ಬಡವರು ಶಾಲೆಗೆ ಹೋಗದಂತಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ವಿಜಾಪುರ ದಲ್ಲಿ ನಡೆದ ಸಮ್ಮೇಳನದಲ್ಲಿ ಯಾರು ಈ ಬಗ್ಗೆ ಚಕಾರವೆತ್ತಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಎಂದು ಸರ್ಕಾರದ ವಿರುದ್ಧ ಬೀದಿಗಿಳಿದು, ಕನ್ನಡದಲ್ಲಿ ಆಡಳಿತ ಮಾಡುವ ಛಾತಿ ಇದ್ದರೆ ಕುರ್ಚಿ ಹತ್ತಿ, ಇಲ್ಲವೆ ಹತ್ತಬೇಡಿ ಎಂದು ಹೋರಾಟಕ್ಕೆ ಇಳಿಯುವ ಮನಸ್ಸು ಮಾಡಿಲ್ಲ. ಎಲ್ಲ ವಿಚಾರವಷ್ಟೇ ಆಚಾರದಲ್ಲಿ ಶೂನ್ಯ ಎಂದು ಶ್ರೀಗಳು ಹೇಳಿದರು.

ಈ ಸಲ ಕುಂಭಮೇಳದಲ್ಲಿ 3 ಕೋಟಿ ಜನ ಸ್ನಾನ ಮಾಡಿದ್ದಾರೆ. ಹಿಂದೂ ಆಚರಣೆ ಪ್ರತೀಕ ಎಂದು ಬಿಂಬಿಸಲಾಗುತ್ತಿರುವ ಈ ಮೇಳದಲ್ಲಿ ಯಾಕೆ ಜಾಗೃತಿ ಮಾತುಗಳನ್ನು ಸ್ವಾಮೀಜಿಗಳು ಸಂತರು ಜನರಿಗೆ ಹೇಳಿಕೊಡಬಾರದು. ಅದನ್ನು ಹೊರತು ಪಡಿಸಿ ನಿರ್ಧಿಷ್ಟ ದಿನದಂದು ಸ್ನಾನ ಮಾಡಿದರೆ ಪಾಪ ಪರಿಹಾರ ಆಗುತ್ತದೆ ಎನ್ನುವ ಭ್ರಮೆಯನ್ನು ಜನರಲ್ಲಿ ಬಿತ್ತಲಾಗುತ್ತಿದೆ. ಅದರ ಬದಲು ವಾಸ್ತವಿಕ ಸತ್ಯ ಮತ್ತು ಬದುಕಿನ ಚಿಂತನೆಗಳನ್ನು ತುಂಬಿದಲ್ಲಿ ಇದೇ 3 ಕೋಟಿ ಜನರು ಅನ್ಯಾಯ, ಅಧರ್ಮ, ಅಶಾಂತಿ ಕಂಡಾಗ ರಾಷ್ಟ್ರದ ರಕ್ಷಣೆಗೆ ಸಿಡಿದೇಳುತ್ತಿದ್ದರು. ಅದನ್ನು ಮಾಡಲು ನಮಗೆ ಸಾಧ್ಯವಾಗುತ್ತಲೇ ಇಲ್ಲ ಎಂದು ಹೇಳಿದರು.


ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ಪಾರ್ವತಿ ಮೆನನ್ ರವರು, ವಾಸ್ತವದಲ್ಲಿ ಈ ಭಾಗದ ಅಭಿವೃದ್ಧಿಗೆ 371 ನೇ ವಿಧಿ ಒಂದು ಸಾಧನವಾಗಲಿದೆ. ಆದರೆ, ಅದಕ್ಕೂ ಮುಂಚೆ ಕೆಲ ಕಾರ್ಯಗಳು ಆಗಬೇಕಿವೆ. ಹೈದ್ರಾಬಾದ ಕರ್ನಾಟಕ ಹಿಂದುಳಿದ ಪ್ರದೇಶವೆಂಬ ಕಾರಣಕ್ಕೆ ಸರ್ಕಾರದಿಂದ ಸಾಕಷ್ಟು ಅನುದಾನ ನೀಡಲಾಗಿದೆ. ಆದರೆ ಅಭಿವೃದ್ಧಿಯಾಗಿಲ್ಲ. ಆ ಅನುದಾನ ಎಲ್ಲಿಗೆ ಹೋಯಿತು, ಎಷ್ಟರಮಟ್ಟಿಗೆ ಬಳಕೆಯಾಗಿದೆ ಎಂದು ಪ್ರಶ್ನಿಸಿದ ಮೆನನ್, ಅಭಿವೃದ್ಧಿಗೆ ಪಾರದರ್ಶಕವಾಗಿ ದುಡಿಯುವ ಜನಪ್ರತಿನಿಧಿಗಳು ಬೇಕು ಎಂದು ಅಭಿಪ್ರಾಯಪಟ್ಟರು.

ಡಾ. ನಂಜುಂಡಪ್ಪ ಆಯೋಗದ ವರದಿ ಅನುಷ್ಠಾನ ಸಮಿತಿ, ಎಚ್‌ಕೆಡಿಬಿ ಸೇರಿದಂತೆ ಇತರೆ ಯೋಜನೆಗಳಿಗೆ ಸಾಕಷ್ಟು ಹಣ ಬಂದಿದೆ. ಅದನ್ನು ಬಳಕೆ ಮಾಡಿಕೊಳ್ಳುವಲ್ಲಿ ಆಗಿರುವ ಲೋಪಗಳಿಂದಾಗಿ ಈ ಭಾಗ ಹಿಂದುಳಿದಿದೆ. ಆ ಅನುದಾನ ಎಷ್ಟರಮಟ್ಟಿಗೆ ಬಳಕೆಯಾಗಿದೆ ಎನ್ನುವುದನ್ನು ತಿಳಿಯಬೇಕಿದೆ. ಹಳೇ ಮೈಸೂರು ಭಾಗದಂತೆ ಉತ್ತರ ಕರ್ನಾಟಕದಲ್ಲಿ ಅಷ್ಟೊಂದು ಪ್ರಭಾವಿಯಾಗಿ ಭೂ ಸುಧಾರಣಾ ಕಾಯ್ದೆ ಅನ್ವಯವಾಗಿಲ್ಲ. ಹೀಗಾಗಿ, ಈ ಭಾಗದ ಜನರು ರಾಜ್ಯದ ವಿವಿಧ ಪ್ರದೇಶಗಳಿಗೆ ಮತ್ತು ಹೊರರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಒಂದು ವೇಳೆ ಈ ಭಾಗ ಅಭಿವೃದ್ಧಿಯಾಗ ಬೇಕಾದರೆ, ಜನಾವಶ್ಯಕ ವಸ್ತುಗಳು ಪೂರೈಸಲ್ಪಡಬೇಕು. ವಲಸೆ ಪ್ರಮಾಣ ತಗ್ಗಬೇಕು ಎಂದು ಅಭಿಪ್ರಾಯಪಟ್ಟರು. ಜನತೆ ಸಾರ್ವಜನಿಕ ಕ್ಷೇತ್ರಗಳಲ್ಲಿ ಹೆಚ್ಚೆಚ್ಚು ಹೂಡಿಕೆ ಮಾಡಬೇಕು, ಉದ್ಯೋಗ ಖಾತ್ರಿ ಯೋಜನೆ(ನರೇಗಾ) ದಂತಹ ಯೋಜನೆ ಮತ್ತು ಇನ್ನೂ ಹಲವು ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳು ಸರಿಯಾಗಿ ಅನುಷ್ಠಾನಗೊಳ್ಳಬೇಕು ಅದರ ಸದ್ಬಳಕೆ ಸರಿಯಾಗಿ ಆಗಬೇಕು ಎಂದು ಹೇಳಿದರು.

'ಟೀಚರ್' ವಿಶೇಷ ಸಂಚಿಕೆ ಬಿಡುಗಡೆ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಬೋಳುವಾರು ಮಹಮ್ಮದ್ ಕುಂಞ ಅವರು ಟೀಚರ್ ವಿಶೇಷ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದರು. ದೇಶದಲ್ಲಿ ಮುಸ್ಲಿಮರು ತಾವೂ ಈ ದೇಶಕ್ಕೆ ನಿಷ್ಠರಾಗಿದ್ದೇವೆ ಎನ್ನುವುದನ್ನು ದಿನಕ್ಕೆ 5 ಬಾರಿ ಸಾಬೀತು ಪಡಿಸಬೇಕಾದ ಪರಿಸ್ಥಿತಿಯ ಒತ್ತಡದಲ್ಲಿದ್ದಾರೆ. ಅವರು ಏನೇ ಮಾಡಿದರೂ ಅದನ್ನು ಸಂಶಯಾಸ್ಪದವಾಗಿ ನೋಡುವ ವಾತಾವರಣ ಬೆಳೆಯುತ್ತಿದೆ. ದೇಶ ಅಂದರೆ, ಕೇವಲ ಭಕ್ತಿ ಭೂಮಿ ಅಲ್ಲ, ಮನುಷ್ಯರು, ದನಕರುಗಳು, ಗಿಡ ಮರಗಳು ಎಲ್ಲವುಗಳು ಇರುವಿಕೆ ದೇಶ ಎಂದಾಗುತ್ತದೆ ಎಂದು ಹೇಳಿದರು.

ಒಂದು ಬಾರಿ ಯಾರೋ ಒಬ್ಬ ವ್ಯಕ್ತಿ ವಿಧಾನಸಭೆಗೆ ಫೋನ್ ಮಾಡಿದರಂತೆ! ನೀವು ಲಿಂಗಾಯತರಾದರೆ ಒಂದನ್ನು ಒತ್ತಿ, ಒಕ್ಕಲಿಗರಾದರೆ ಎರಡನ್ನು ಒತ್ತಿ, ಕುರುಬರಾದರೆ ಮೂರನ್ನು ಒತ್ತಿ, ಮುಸ್ಲಿಮರಾದರೆ ನಾಲ್ಕನ್ನು ಒತ್ತಿ, ಎಂದಿದ್ದರಂತೆ. ಆಗ ಮುಸ್ಲಿಂ ವ್ಯಕ್ತಿ ನಾಲ್ಕನ್ನು ಒತ್ತಿದಾಗ... 'ದಯವಿಟ್ಟು ಕ್ಷಮಿಸಿ. ನಿಮ್ಮದು ಅಂತರರಾಷ್ಟ್ರೀಯ ಕರೆ' ಎಂದು ಹೇಳಿದರಂತೆ ಎಂದು ಹಾಸ್ಯ ಚಟಾಕಿ ಹಾರಿಸಿದರು.



ಶಿಕ್ಷಕರು ಇಂದಿನ ಮುಸ್ಲಿಂ ಮಕ್ಕಳು ಅನುಭವಿಸುವ ಪರಿಸ್ಥಿತಿ ನೋಡಿ, ಅರ್ಧ ಅಂಕವನ್ನು ಹೆಚ್ಚು ನೀಡಬೇಕು. ಇದರಿಂದ ಅವರು ಇನ್ನಷ್ಟು ಶೈಕ್ಷಣಿಕವಾಗಿ ಮುಂದೆ ಬರಲು ಸಾಧ್ಯವಾಗುತ್ತದೆ ಎಂದು ಶಿಕ್ಷಕ ಸಮುದಾಯಕ್ಕೆ ಮನವಿ ಮಾಡಿದರು. ನಾವು ಇಂದು ಸಂಪೂರ್ಣ ಸತ್ಯ ಮಾತನಾಡಲು ಸಾಧ್ಯವಾಗುವುದಿಲ್ಲ. ನಾನೂ ಸೇರಿಕೊಂಡು ಇಲ್ಲಿ ಯಾರು ಸಂಪೂರ್ಣ ಸತ್ಯ ಮಾತನಾಡಲಿಕ್ಕೆ ಸಾಧ್ಯವಿಲ್ಲ. ನಾನಾದರೂ ಅರ್ಧ ಸತ್ಯವನ್ನಷ್ಟೇ ಹೇಳುತ್ತೇನೆ

ಜಾಗತೀಕರಣ ನೀತಿ ಆರೋಗ್ಯ ಪರವೇ?

ಪುಟ 2 ರಿಂದ

ಚಿಕಿತ್ಸೆ ಬದ್ದರಾಗಿವೆ.

ಔಷಧಿಗಳು

ಭಾರತದಲ್ಲಿ ಔಷಧಿ ಉದ್ಯಮದ ಬೆಳವಣಿಗೆ ಗಣನೀಯವಾದುದು. ಆದರೆ ಪೇಟೆಂಟ್ ನೆಪದಲ್ಲಿ ಔಷಧಿ ಉದ್ಯಮಕ್ಕೆ ಆಪತ್ತು ಉಂಟಾಗಿ ಔಷಧಿ ಬೆಲೆ ಜಾಸ್ತಿಯಾಗುತ್ತಿವೆ ಹಾಗೂ ಭಾರತದಲ್ಲಿ ಔಷಧಿ ಉದ್ಯಮಗಳು ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿದೆ.

ವೈದ್ಯಕೀಯ ಸಂಶೋಧನೆ : ಇಂದು ವೈದ್ಯಕೀಯ ಕ್ಷೇತ್ರದಲ್ಲಿನ ಹೆಚ್ಚು ಜನರು ಅನುಭವಿಸುವ ಕಾಯಿಲೆಗಳ ಬದಲು ಕೆಲವೇ ಜನರ ಸಮಸ್ಯೆಗಳತ್ತ (ಶ್ರೀಮಂತರ)ಸಾಗಿವೆ. ಆರೋಗ್ಯ ಕ್ಷೇತ್ರದಲ್ಲಿ ಸಂಶೋಧನೆಗೆ 56 ಬಿಲಿಯನ್ ಡಾಲರ್ ಖರ್ಚಾಗುತ್ತಿದೆ. ಶೇಕಡಾ 10 ಕ್ಕಿಂತ ಕಡಿಮೆ ಹಣವನ್ನು ಜಗತ್ತಿನ 90% ಜನರು ಅನುಭವಿಸುತ್ತಿರುವ ರೋಗಗಳ ಸಂಶೋಧನೆಯ ಉಪಯೋಗಲಾಗಿಸಲಾಗು ... ಭಾರತದಲ್ಲಿ ಸಂಶೋಧನೆ ಒಳ್ಳೆಯ ಸಂಸ್ಥೆಗಳು ಇದ್ದಾಗ್ಯೂ ಸಂಶೋಧನೆಗೆ ಹಣಕಾಸು ಕೊಡಲಾಗಿಲ್ಲ. ಹೊರದೇಶದ ಔಷಧಿ ಪ್ರಯೋಗಕ್ಕೆ ನಮ್ಮ ಜನರನ್ನು ಬಲಿಪಶುವನಾಡಲು, ಸಂಸ್ಥೆಗಳು ಹುಟ್ಟಿಕೊಂಡಿವೆ. ಆ ಸಂಸ್ಥೆಗಳ ಮೇಲೆ ಸರ್ಕಾರದ ಯಾವ ನಿಯಮವೂ ಜಾರಿ ಇಲ್ಲ.

ವೈದ್ಯಕೀಯ ಪ್ರವಾಸೋದ್ಯಮ

ನಮ್ಮ ದೇಶದ ಜನರಿಗೆ ಆರೋಗ್ಯ ಸೇವೆಗಳು ದೊರಕುತ್ತಿಲ್ಲ. ಆದರೆ ಇತರೇ ದೇಶದ ಜನರಿಗೆ ಆರೋಗ್ಯ ಸೇವೆ ನೀಡಲು ಸಾಂಸ್ಥಿಕ ಆಸ್ಪತ್ರೆಗಳು ಸಜ್ಜಾಗಿವೆ. ಈ ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯಗಳನ್ನು ಕೊಡಿಸಲು ಸರಕಾರ ಮುಂದಾಗಿದೆ ಹಾಗೂ ಅಲ್ಲಿ ಚಿಕಿತ್ಸೆ ಪಡೆಯಲು ಬೇರೆ ಬೇರೆ ದೇಶದವರನ್ನು ಆಕರ್ಷಿಸಲಾಗುತ್ತಿದೆ. ಅವರಿಗೆ ತಮ್ಮ ದೇಶದಲ್ಲಿ ದೊರಕುವ ಸೇವೆಯ ಖರ್ಚಿನ ಕೇವಲ ಶೇಕಡಾ 10 ರಷ್ಟು ಮಾತ್ರ ಖರ್ಚಾಗುವುದರಿಂದ ನಮ್ಮ ದೇಶಕ್ಕೆ ಬಂದು ಚಿಕಿತ್ಸೆ ಪಡೆಯಲು ಮುಂದಾಗಿದ್ದಾರೆ.

ಬಡತನ ಹೆಚ್ಚಾಗುತ್ತಿದೆ

ಜಾಗತೀಕರಣದಿಂದ ಬಡತನ, ಅಸಮಾನತೆ ಹೆಚ್ಚುತ್ತಿದೆ. ವಿಶ್ವಬ್ಯಾಂಕು, ಬಡತನ ಕಡಿಮೆ ಮಾಡಿದೆಯೆಂದು ಹೇಳುತ್ತಿದೆಯಾದರೂ, ಇಂದಿಗೂ ನಮ್ಮ ದೇಶದಲ್ಲಿ 200 ದಶಲಕ್ಷ ಕಡು ಬಡವರಿದ್ದಾರೆ. ಬಡತನದಿದಾಗಿ ಜನರಿಗೆ ಆಹಾರ ಧ್ಯಾನ್ಯಗಳ ದೂರಕುವಿಕೆ ಕಡಿಮೆಯಾಗಿದೆ.

ವರ್ಷಕ್ಕೆ ತಲಾ ಆಹಾರ ದೊರಕುವಿಕೆ

1991	2004
178(ಕೆ ಜಿ)	154(ಕೆ ಜಿ)

ಜನರಿಗೆ ದೊರಕುತ್ತಿರುವ ತಲಾ ಕ್ಯಾಲೋರಿ ಮಟ್ಟವನ್ನು (1900ಕ್ಯಾಲೊರೀಸ್) ಗಮನಿಸಿದರೆ ಭಾರತದ 75 ರಷ್ಟು ಜನರು ಬಡವರಾಗಿದ್ದಾರೆಂದು ಗೊತ್ತಾಗುತ್ತದೆ. ಆದರೆ ಸರಕಾರ ತಲಾ ಕ್ಯಾಲೋರಿ ಮಟ್ಟ 2800 ಎಂದು ಹೇಳಿ ಬಡತನದ ಪ್ರಮಾಣ ಕಡಿಮೆ ತೋರಿಸಲಾಗುತ್ತಿದೆ. ಬಡತನದಿಂದಾಗಿ ಕಡಿಮೆಯಾಗುತ್ತಿದ್ದ ಶಿಶುಮರಣ ಸಂಖ್ಯೆ ಮತ್ತೆ ಹೆಚ್ಚಾಗುತ್ತಿರುವುದು ಕಂಡುಬಂದಿದೆ.

ವರ್ಷ	ಕಡಿಮೆಯಾದ ಶಿಶುಮರಣ ದರ
1971–1981	14.7
1981–1991	27.3
1991–1999	10

ಕೊನೆಮಾತು : ಯಾವುದೇ ದೇಶದಲ್ಲಿ ಜನಪರ ಆರೋಗ್ಯ ನೀತಿ ಇದ್ದಲ್ಲಿ ಮಾತ್ರ, ಅದು ಸಾರ್ವಜನಿಕ ಆರೋಗ್ಯಕ್ಕೆ ಪೂರಕವಾದ ಅಂಶಗಳನ್ನು ಹೊಂದಿದ್ದರೆ ಮಾತ್ರ, ಆ ದೇಶದ ಆರೋಗ್ಯ ಸುದಾರಿಸಬಹುದಾಗಿದೆ. ಜಾಗತೀಕರಣದ ಉದ್ದೇಶ ಜನಾರೋಗ್ಯವನ್ನು ಸುಧಾರಿಸುವುದಲ್ಲ. ಅದರ ಉದ್ದೇಶ ಬಹುರಾಷ್ಟ್ರೀಯ ಕಂಪನಿಗಳ ಮುಂದುವರೆದ ದೇಶಗಳಿಗೆ ಲಾಭ ಮಾಡಿಕೊಡುವುದು.

ಈ ನೀತಿ ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಬದಲು ದ್ವಿತೀಯ, ತೃತೀಯ ಆರೋಗ್ಯ ಸೇವೆಗಳಿಗೆ ಹೆಚ್ಚು ಗಮನ ಕೊಡುತ್ತದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಬದಲು ಖಾಸಗೀಕರಣಕ್ಕೆ ಪ್ರೋತ್ಸಾಹ ನೀಡುತ್ತದೆ. ದೂರದೃಷ್ಟಿಯ ವ್ಯವಸ್ಥೆ ಬದಲು ತಾತ್ಕಾಲಿಕ ತುರ್ತು ವ್ಯವಸ್ಥೆ ಬಗ್ಗೆ ಗಮನಹರಿಸುತ್ತದೆ. ಎಲ್ಲ ಜನರ ಆರೋಗ್ಯದ ಬಗ್ಗೆ ಆಸಕ್ತಿ ವಹಿಸುವ ಬದಲು ಕೆಲವರ ಆರೋಗ್ಯಕ್ಕೆ ಗಮನ ನೀಡುತ್ತದೆ. ರಾಷ್ಟ್ರೀಯ ಆರೋಗ್ಯ ಔಷಧಿ ನೀತಿ, ಜನಸಂಖ್ಯಾ ನೀತಿಯನ್ನು ಬದಿಗಿಟ್ಟು ವಿಶ್ವಬ್ಯಾಂಕ್ ಆದೇಶವನ್ನು ಸ್ವಾಗತ ಮಾಡುತ್ತದೆ. ಇಲ್ಲಿಯವರೆಗೆ ಆರೋಗ್ಯ ಕ್ಷೇತ್ರದಲ್ಲಿ ಸಾಧಿಸಿದ್ದನ್ನು ಉಳಿಸಿಕೊಳ್ಳುವ ಬದಲು ಕೈ ಬಿಡಲು ಆದೇಶ ನೀಡುತ್ತದೆ.

ವಿಶ್ವ ಅರೋಗ್ಯ ಸಂಸ್ಥೆಯು ಜಾಗತೀಕರಣ ನೀತಿ ಅಪಾಯಕರವೆಂದು ಗೊತ್ತಿದ್ದರೂ ಅದನ್ನು ವಿರೋಧಿಸಲಿಲ್ಲ. ಜಾಗತೀಕರಣ ನೀತಿಯನ್ನು ನಮ್ಮ ಸರಕಾರಗಳು ಬರ ಮಾಡಿಕೊಂಡಾಗ, ಜನರಿಗೆ ಅದರ ಬಗ್ಗೆ ತಿಳಿವಳಿಕೆ ಕೊಡಲಿಲ್ಲ. ಅದರ ಬಗ್ಗೆ ಸಂಸತ್ತಿನಲ್ಲಿಯೂ ಚರ್ಚೆಯಾಗಲಿಲ್ಲ. ಇದರಿಂದಾಗಿ ಜನಪ್ರತಿನಿಧಿಗಳಿಗೂ ಅದರ ಬಗ್ಗೆ ತಿಳಿದಿರಲಿಲ್ಲ. ವೈದ್ಯಕೀಯ ರಂಗ ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಈ ನೀತಿ ಜನಾರೋಗ್ಯಕ್ಕೆ ಮಾರಕವಾಗುವ ಸಾಧ್ಯತೆ ಇದೆ. ಈ ನೀತಿಗೆ ವ್ಯಾಪಕವಾದ ಪ್ರತಿರೋಧ ಬಂದಲ್ಲಿ ಮಾತ್ರ ಈ ನೀತಿಯಿಂದಾಗುವ ಕೆಲವು ತೊಂದರೆಗಳನ್ನು ತಡೆಗಟ್ಟಬಹುದಾಗಿದೆ. ಈ ಸಾಮ್ರಾಜ್ಯಶಾಹಿ ಜಾಗತೀಕರಣ ಮುಂದುವರೆದ ದೇಶಗಳ ಆರ್ಥಿಕ ಲೂಟಿಗಾಗಿ ಎಂಬುದನ್ನು ಎಂದಿಗೂ ಮರೆಯುವಂತಿಲ್ಲ.

◎

ರಾಜ್ಯಮಟ್ಟದ ಶೈಕ್ಷಣಿಕ ಹಬ್ಬ....

ಎಂದು ಹೇಳಿದರು

ಟೀಚರ್ ಮಾಸಪತ್ರಿಕೆ ಪ್ರಧಾನ ಸಂಪಾದಕ ಪ್ರೊ. ಬಿ. ಗಂಗಾಧರಮೂರ್ತಿ ಮಾತನಾಡಿ, ಇಂದು ಶಿಕ್ಷಕರ ವರ್ಗ ಹಲವಾರು ಸ್ಪರ್ಧಾತ್ಮಕ ...ಳನ್ನು ಎದುರಿಸಬೇಕಾಗಿದೆ. ಈ ನಟ್ಟಿನಲ್ಲಿ ಅವರನ್ನು ಗಟ್ಟಿಗೊಳಿಸುವುದು ನಮ್ಮ ಟೀಚರ್ ...ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಕಳೆದ 10 ವರ್ಷಗಳಿಂದ ಸಾರ್ಥಕ ಲೇಖನಗಳ ಮೂಲಕ ಶಿಕ್ಷಕ ಸಮುದಾಯದಲ್ಲಿ ಹೊಸ ಚಿಂತನೆ ಮತ್ತು ವಿಚಾರಗಳನ್ನು ಬಿತ್ತಲಾಗುತ್ತಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಟಿ.ಜಯರಾಮು ಉದ್ಯಮಿ ಎಸ್.ಎಸ್.ಪಾಟೀಲ ಕಡಗಂಚಿ, ಭಾರತ ಜ್ಞಾನ ವಿಜ್ಞಾನ ಸಮಿತಿಯ ಶ್ರೀಶೈಲ ಘೂಳಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತರ ಕಚೇರಿಯ ನಿರ್ದೇಶಕ ರುದ್ರಪ್ಪ, ಡಾ. ನಿಂಗು ಸೊಲಗಿ ಇದ್ದರು. ಉಮಾಕಾಂತ ನಿಗ್ಗುಡಗಿ ಸ್ವಾಗತಿಸಿದರು ಲವಿತ್ರ ಕೆ. ವಸ್ತ್ರದ ಕಾರ್ಯಕ್ರಮ ನಿರೂಪಿಸಿದರು. ಜಿ. ವಿನುತ ಪ್ರಾಸ್ತಾವಿಕ ಮಾತನಾಡಿದರು.

ಶಿಕ್ಷಣ ಹಕ್ಕು ಕಾಯ್ದೆ 2009 ಕುರಿತು ಗೋಷ್ಠಿ:

...ಪ್ರಕಾಶ ಕಾಮತ್, ಚಂದ್ರೇಗೌಡ್ರ ಅವರು ಶಿಕ್ಷಣ ಹಕ್ಕು ಕಾಯ್ದೆ 2009 ವಿಷಯ ಕುರಿತು ವಿಷಯ ಮಂಡಿಸಿದರು. ಈ ಕಾಯ್ದೆಯಲ್ಲಿರುವ ಅಂಶಗಳನ್ನು ಗಮನಿಸಿ ಶಿಕ್ಷಕರು ಹೆಜ್ಜೆ ಇಟ್ಟರೆ ಪ್ರಗತಿ ಸಾಧ್ಯವಾಗುತ್ತದೆ. ಈ ಹಿಂದೆ ಬಿಸಿಯೂಟ ಯೋಜನೆ ಜಾರಿಗೊಳಿಸಿದಾಗ, ಎಸ್‌ಡಿಎಮ್‌ಸಿ ರಚನೆ ಮಾಡಿದಾಗ ಅವುಗಳಿಗೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ವಿರೋಧಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಹವಣಿಸಿದ್ದು ಬೆಳಕಿಗೆ ಬಂದ ನಂತರವೇ ವಿರೋಧ ಧ್ವನಿ ಕಡಿಮೆಯಾಯಿತು ಇದರಲ್ಲೂ ಹೀಗೆ ಇದೆ, ಹೀಗಾಗಿ ಶಿಕ್ಷಕರು ವಿರೋಧಿಸಬಾರದು ಎಂದು ಹೇಳಿದರು.

ಶಾಲೆ ನೋಡದ ಸೋಲಿಗರು, ದಲಿತರು, ಗೊಲ್ಲರಹಟ್ಟಿ ಮಕ್ಕಳು, ಶಾಲೆಯನ್ನು ನೋಡುವಂತಾಗಲು, ಮಕ್ಕಳ ಹಕ್ಕುಗಳನ್ನು ಗೌರವಿಸಲು ಶಾಲೆಯಲ್ಲಿ ಅವರಿಗೆ ಕುಡಿಯುವ ನೀರು, ಶೌಚಾಲಯ, ಅಗತ್ಯ ಪೀಠೋಪಕರಣಗಳನ್ನು ಒದಗಿಸಲು ಆರ್‌ಟಿಇ ಬರಬೇಕಾಗಿರಲಿಲ್ಲ. ಇವುಗಳನ್ನು ನಾವು ಆದ್ಯತೆಯ ಮೇಲೆ ಕಲ್ಪಿಸಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು. ಕಡ್ಡಾಯ ಶಿಕ್ಷಣ ಕಾಯ್ದೆಯ ಅಂಶಗಳನ್ನು ಸರಿಯಾಗಿ ಅರ್ಥೈಸಿಕೊಂಡು ಚೆನ್ನಾಗಿ ಅನುಷ್ಠಾನಗೊಳಿಸುವ ಮೂಲಕ ಎಲ್ಲರಿಗೂ ಅನವು ಮಾಡಿಕೊಡಬೇಕು ಎಂದು ತಿಳಿಸಿದರು.

ಅಧೀವೇಶನದ ಅಧ್ಯಕ್ಷತೆ ವಹಿಸಿದ್ದ ಎಫ್. ಸಿ. ಚೇಗರಡ್ಡಿ ಉಪಾಧ್ಯಕ್ಷ ಬಿಜಿವಿಎಸ್ ರಾಜ್ಯ ಸಮಿತಿ ಮಾತನಾಡಿ, ಯಾವ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು ಎಂಬ ಘೋಷಿತ ಆಶಯದೊಂದಿಗೆ ಜಾರಿಗೆ ತರಲಾಗಿರುವ ಕಡ್ಡಾಯ ಶಿಕ್ಷಣ ಕಾಯಿದೆಯಲ್ಲಿನ ಸೂಕ್ಷ್ಮತೆ ಅರಿತುಕೊಳ್ಳದೆ ಹೋದರೆ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಗೆ ಬಂದ ಸ್ಥಿತಿ ಆರ್‌ಟಿಇಗೂ ಬರಲಿದೆ ಎಂದು ಹೇಳಿದರು.

ಭಾನಾಮತಿ ಕುರಿತ ವಿಚಾರ ಗೋಷ್ಠಿ:

ಭಾನಾಮತಿ ಕುರಿತು ಗೋಷ್ಠಿಯಲ್ಲಿ ಎಸ್.ಪಿ. ಮೇಲಕೇರಿ ಮತ್ತು ಶಿವಶರಣ ಮೂಳೆಗಾಂವ ಮಾತನಾಡಿ, ಭಾನಾಮತಿ ಹೆಸರಲ್ಲಿ ಸಮಾಜದ ದುಷ್ಟ ವ್ಯಕ್ತಿಗಳು ನಮ್ಮನ್ನು ಅಧೀರರನ್ನಾಗಿ ಮಾಡಿ ತಮ್ಮ ಕೆಲಸ ಪೂರೈಸಿಕೊಳ್ಳುತ್ತಾರೆ. ಇದಕ್ಕೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಭಾರತ ಜ್ಞಾನ ವಿಜ್ಞಾನ ಸಮಿತಿ ಮಾಡಿದೆ ಎಂದರು. ಬಿಜಿವಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಶ್ರೀಶೈಲ ಘೂಳಿ ಅಧ್ಯಕ್ಷತೆ ವಹಿಸಿದ್ದರು.

ಇತರೆ ಪ್ರಮುಖ ವಿಚಾರ ಗೋಷ್ಠಿಗಳು:

"ಜಾಗತಿಕ ತಾಪಮಾನ ಹಾಗೂ ಹವಾಮಾನ ಬದಲಾವಣೆ" ಎಂಬ ಗೋಷ್ಠಿಯಲ್ಲಿ ಐಐಎಸ್‌ಸಿಯ ಪರಿಸರ ವಿಜ್ಞಾನಿ ಪ್ರೊ.ಟಿ.ವಿ. ರಾಮಚಂದ್ರ ರವರು ಜಾಗತಿಕ ತಾಪಮಾನದ ಕಾರಣಗಳು, ಅದರಿಂದ ಕೃಷಿ ಮತ್ತು ಜನಜೀವನದ ಮೇಲುಂಟಾಗುವ ಪರಿಣಾಮಗಳು ಮತ್ತು ಪರಿಹಾರಗಳ ಕುರಿತು ವಿಚಾರ ಮಂಡಿಸಿದರು. "ಆರ್ಟಿಕಲ್ 371 ಜೆ.: ಹೈದ್ರಾಬಾದ ಕರ್ನಾಟಕ್ಕೆ ಸಿಗಬಹುದಾದ ಶೈಕ್ಷಣಿಕ ಹಾಗೂ ಉದ್ಯೋಗಾವಕಾಶಗಳು" ಗೋಷ್ಟಿಯಲ್ಲಿ ಶ್ರೀ ಬಸವಂತರಾಯ ಕುರಿ, ಶ್ರೀ ಹೃಷೀಕೇಶ ಬಹಾದ್ದೂರ ದೇಸಾಯಿ ಮತ್ತು ಶ್ರೀ ಉಮಾಕಾಂತ ನಿಗ್ಗಡಗಿ ವಿಚಾರ ಮಂಡಿಸಿದರು.

"ಮಹಿಳೆ ಮತ್ತು ಶಿಕ್ಷಣ ಸಮಸ್ಯೆಗಳು ಮತ್ತು ಸವಾಲುಗಳು" ಗೋಷ್ಟಿಯಲ್ಲಿ ಡಾ. ಸಬೀಹಾ ಭೂಮಿಗೌಡ, ಎನ್ ಪ್ರಭಾ ಮತ್ತು ಡಾ. ಮೀನಾಕ್ಷಿ ಬಾಳಿ ಮಾತನಾಡಿದರು. ನಮ್ಮಲ್ಲಿರುವ ಶಿಕ್ಷಣ ವ್ಯವಸ್ಥೆಯಲ್ಲಿಯೂ ಮಹಿಳಾ ಪರ ಭಾಷೆ ಇಲ್ಲ. ಸಮಾನತೆ ಬೆಳೆಸುವಲ್ಲಿ ನಮ್ಮ ಪಠ್ಯಪುಸ್ತಕಗಳೂ ಅಡ್ಡಿಯಾಗುತ್ತಿವೆ ಎಂದು ಖ್ಯಾತ ಬರಹಗಾರ್ತಿ ಸಬಿಹಾ ಭೂಮಿಗೌಡ ಆತಂಕ ವ್ಯಕ್ತಪಡಿಸಿದರು. ಪಠ್ಯಪುಸ್ತಕದಲ್ಲಿನ ಈ ತಾರತಮ್ಯದಿಂದಾಗಿ ಸಮಾನತೆಯನ್ನು ಬೋಧಿಸಬೇಕಾದ ಶಾಲಾ ಕೇಂದ್ರಗಳೂ ಪುರುಷ ಪ್ರಧಾನತೆಯನ್ನು ಉಣಬಡಿಸುತ್ತಿವೆ. ಸ್ವಾವಲಂಬನೆಗೆ ದಾರಿ ಮಾಡಿಕೊಡಬೇಕಾದ ಶಿಕ್ಷಣ ನೀತಿ ಮತ್ತೆ ಮಹಿಳೆಯನ್ನು ಅಲಕ್ಷಿಸುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

"ಹೈದ್ರಾಬಾದ್ ಕರ್ನಾಟಕದ ಶೈಕ್ಷಣಿಕ ಸವಾಲುಗಳು ಮತ್ತು ಸಾಧ್ಯತೆಗಳು" ಗೋಷ್ಟಿಯಲ್ಲಿ ಡಾ. ಪ್ರಭು ಖಾನಾಪುರೆ. ಮತ್ತು ಹಂಪಿ ವಿಶ್ವವಿದ್ಯಾನಲಯದ ಡಾ. ಎಚ್.ಡಿ. ಪ್ರಶಾಂತ್ ವಿಚಾರ ಮಂಡಿಸಿದರು.

ವರದಿ : ಮುರುಗೇಶ್

JANASHAKTHI KANNADA VARA PATRIKE MAR 17, 2013 Price : Rs. 10/- RNI No. KARKAN /2006/17926 Posted on every Sat
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-2

"ಹೊರೆ ಹೊರುವ ಪಶುಗಳಾಗಿದ್ದ ನಾವು ಮನುಷ್ಯರಾಗುತ್ತೇವ

(ಮಿಲಿಟರಿ ಆಡಳಿತದ ಹೇರಿಕೆಯನ್ನೆದುರಿಸಿ ಕಾರ್ಮಿಕರ ಯಶಸ್ವಿ ಮುಷ್ಕರ)



ಜಿ.ಎಸ್.ನಾಗರಾಜ್ 25

1922 ರ ಮೇ ದಿನ. ಅನಿಯುವಾನ್ ಕಲ್ಲಿದ್ದಲು ಹಾಗೂ ರೇಲುವೆ ಕಾರ್ಮಿಕರಿಗೆ ತಲೆಯೆತ್ತಿ ನಿಲ್ಲಲು ಆಧಾರವಾದ ಕಾರ್ಮಿಕ ಸಂಘದ ಸ್ಥಾಪನೆಯನ್ನು ದೊಡ್ಡ ಮೆರವಣಿಗೆ ಹಾಗೂ ಸಮರಧೀರ ಘೋಷಣೆಗಳ ಮೂಲಕ ಸಾರಿದ ದಿನ. ಆ ನಂತರ ಕಾರ್ಮಿಕರ ಕ್ಲಬ್ ಎಂಬ ಹೆಸರಿನಲ್ಲಿ ಆರಂಭವಾದ ಈ ಸಂಘ ಒಂದು ಸ್ವ-ಯಂ ಸೇವಕರ ದಳವನ್ನೂ ಆರಂಭಿಸಿತು. ಗಣಿ ಕಾರ್ಮಿಕರ ನಡುವೆ ಇದ್ದ ಅರಾಜ-ಕತೆ, ದುರಭ್ಯಾಸಗಳ, ಗೂಂಡಾಗಿರಿಯ ವಾತಾರಣದಲ್ಲಿ ಒಂದು ಶಿಸ್ತು ಬದ್ಧತೆಯನ್ನು ತರಬೇಕಾದರೆ ಸ್ವಯಂ ಸೇವಕ ಪಡೆಯ ಬಹಳ ಅವಶ್ಯಕತೆ ಇತ್ತು. ಈ ಸ್ವಯಂ ಸೇವಕ ದಳಕ್ಕೆ ಕೆಂಪು ರಹಸ್ಯ ಕೂಟದಲ್ಲಿ ಕೆಳ ಹಂತದ ದಳಪತಿಗಳಾಗಿದ್ದ ಅನೇಕ ಕಾರ್ಮಿಕರನ್ನು ಸೇರಿಸಿಕೊಳ್ಳಲಾಯಿತು. ಇದು ಕಾರ್ಮಿಕರಲ್ಲಿ ಶಿಸ್ತು ಮೂಡಿಸುವುದಕ್ಕೆ ಬಹಳ ಸಹಾಯಕ ವಾಯಿತು.

ಇಲ್ಲಿಯುವರೆಗೆ ಇದೊಂದು ಶಾಲೆ ಎಂಬಂತೆ ನೋಡುತ್ತಿದ್ದ ಗಣಿ ಕಂಪನಿಯ ಆಡಳಿತ ವರ್ಗಕ್ಕೆ ಇವರು ಸಹಕಾರಿ ಸಂಘ ಆರಂಭಿಸಿದಾಗಲೇ ಇದೇನೋ ಬೇರೆ ಎಂಬ ಅರಿವಾಗತೊಡಗಿತ್ತು. ಮೇ ದಿನಾಚರಣೆ ಮತ್ತು ಅಂದಿನ ಘೋಷಣೆಗಳು ನಂತರ ಆರಂಭಿಸಿದ ಸ್ವಯಂ ಸೇವಕರ ಪಡೆ ಇವರ ಉದ್ದೇಶವನ್ನು ಸ್ಪಷ್ಟಪಡಿಸಿತು. ಇವರನ್ನು ಮಟ್ಟ ಹಾಕಲು ಆಡಳಿತ ವರ್ಗ ತಾನು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಯೋಚಿಸುತ್ತಿರುವಾಗಲೇ ವಿಶ್ವದಲ್ಲಿ ಆರ್ಥಿಕ ಹಿಂಜರಿತದ ಕಾರಣವಾಗಿ ಕಲ್ಲಿದ್ದಲ ಬೆಲೆ ಇಳಿತಕ್ಕೆ ತುತ್ತಾಯಿತು. ಇದರಿಂದ ಕಾರ್ಮಿಕರಿಗೆ ಸಂಬಳ ನೀಡದೆ ಹಲವಾರು ತಿಂಗಳ ಬಾಕಿಯಾಯಿತು. ಇದು ಕಾರ್ಮಿಕರ ಜೀವನವನ್ನು ಮತ್ತಷ್ಟು ದುಸ್ಥಿತಿಗೆ ದೂಡಿತು. ಅವರಲ್ಲಿ ಅತೃಪ್ತಿ ಅಸಮಾಧಾನ ಹೆಚ್ಚಿತು. ಆಗೊಮ್ಮೆ ಅಲ್ಲಿಗೆ ಭೇಟಿ ನೀಡಿದ ಮಾವೋರವರು ಕಾರ್ಮಿಕರೊಂದಿಗೆ ಬೆರೆತು ಮಾತಿಗಿಳಿದಾಗ ಅವರ ಆಕ್ರೋಶವನ್ನು ಅರ್ಥ ಮಾಡಿಕೊಂಡರು. ಜೊತೆಗೆ ಅಲ್ಲಿ ಕಾರ್ಮಿಕರ ಸಂಘಟನೆಯುಲ್ಲಿ ಆಗಿದ್ದ ಪ್ರಗತಿಯನ್ನು ಗಮನಿಸಿ ತಕ್ಷಣವೇ ಮುಷ್ಕರಕ್ಕೆ ಸಿದ್ಧತೆ ಆರಂಭಿಸಬೇಕೆಂದು ಸೂಚಿಸಿದರು.

ಮುಷ್ಕರಕ್ಕೆ ಭರದ ಸಿದ್ಧತೆಗಳು

ಮುಷ್ಕರದ ಸಿದ್ಧತೆಯಾಗಿ ಕಾರ್ಮಿಕರ ಸಂಘಟನಾ ಶಕ್ತಿಯನ್ನು ಬಲಗೊಳಿಸುವ ಅವರ ತಿಳುವಳಿಕೆಯನ್ನು ಹೆಚ್ಚಿಸುವ ಕೆಲಸ ಆರಂಭವಾಯಿತು. ಪ್ರತಿ ಹತ್ತು ಕಾರ್ಮಿಕರಿಗೆ ಒಂದರಂತೆ ಒಂದು ತಂಡವನ್ನ. ಹೀಗೆ ರೂಪಿಸಲ್ಪಟ್ಟ ತಂಡಗಳ ನಾಯಕರು ಸೇರಿದ ಕಾರ್ಖಾನೆಯ ಒಂದೊಂದು ವಿಭಾಗಕ್ಕೆ ಒಂದು ಸಮಿತಿಯನ್ನು ರಚಿಸಲಾಯಿತು. ಹೀಗೆ ಚೀನಾ ಇಲ್ಲಿಯವರೆಗೂ ಕಾಣದ ರೀತಿಯ ಒಂದು ದೃಢವಾದ ಸಂಘಟನೆಯ ಸ್ವರೂಪವನ್ನು ಕಂಡುಕೊಳ್ಳಲಾಯಿತು. ಮೇ ದಿನಾಚರಣೆಯ ನಂತರ ಕಾರಖಾನೆಯ ಆಡಳಿತ ವರ್ಗ ಹಾಗೂ ಆ ಪ್ರದೇಶದ ಯುದ್ಧಕೋರ ಪಾಳೆಯಗಾರರು ಕಾರ್ಮಿಕ ಸಂಘ ಹಾಗೂ ನಾಯಕರ ಮೇಲೆ ಕ್ರೂರ ಧಾಳಿ ಮಾಡಲು ಸಿದ್ಧತೆ ನಡೆಸಿದ್ದರು.



ಅನಿಯುವಾನ್ ಕಲ್ಲಿದ್ದಲು ಕಾರ್ಮಿಕರದಲ್ಲಿ ಲಿ ಯು ಶಾವೋಕಿ

ಅಂತಹ ಧಾಳಿಗಳಿಂದ ರಕ್ಷಣೆ ಮಾಡಲು ಕಾರ್ಮಿಕರ ಸ್ವಯಂ ಸೇವಕರ ದಳಗಳು ಕಛೇರಿಯ ಕಾವಲು, ನಾಯಕರಿಗೆ ಬೆಂಗಾವಲು ಪಡೆಗಳನ್ನು ನೇಮಿಸಿದರು. ಸ್ವಯಂ ಸೇವಕ ದಳಗಳು ಕಾರ್ಮಿಕರಿಗೆ ತುರ್ತಾಗಿ ಮಾಹಿತಿ ನೀಡುವ ಹಾಗೂ ಸಂಗ್ರಹಿಸುವ ಕೆಲಸವನ್ನು ನಿರ್ವಹಿಸಲು ನಿಯೋಜಿಸಲಾಯಿತು. ಇವುಗಳ ಜೊತೆಗೆ ಮುಖ್ಯವಾಗಿ ಆಡಳಿತ ವರ್ಗ ಹಾಗೂ ಪೋಲೀಸು, ಸೈನ್ಯ ಹಾಗೂ ಯುದ್ಧಕೋರರು ಯಾವ ಕ್ರಮಗಳನ್ನು ಕೈಗೊಳ್ಳುವ ಯೋಚನೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಸಂಗ್ರಹಿಸುವ ಗುಪ್ತಚಾರರ ಪಡೆಯಾಗಿ ಕೂಡ ಸ್ವಯಂ ಸೇವಕರ ಪಡೆಯಲ್ಲಿ ವಿಭಜನೆ ಮಾಡಿ ಕೆಲಸ ವಹಿಸಲಾಯಿತು.

ಇನ್ನೊಂದು ಪ್ರಮುಖ ನಿರ್ಧಾರವೆಂದರೆ ಈ ಹೋರಾಟದ ಸಂದರ್ಭದಲ್ಲಿ ನಿರ್ಣಾಯಕ ಗಳಿಗೆಗಳಲ್ಲಿ ತೀರ್ಮಾನ ಕೈಗೊಳ್ಳುವ ಅಧಿಕಾರದ ಬಗ್ಗೆ ಸ್ಪಷ್ಟತೆ. ಅಲ್ಲಿಯ ಕಾರ್ಮಿಕರ ಜೊತೆಗೂಡಿ ಸಂಘವನ್ನು ಕಟ್ಟಿದ ಲಿ ಲಿಸಾನ್ ರವರನ್ನು ಹೋರಾಟದ ದಂಡನಾಯಕನಾಗಿ (ಕಮ್ಯಾಂಡರ್) ಆಗಿ ನೇಮಕ ಮಾಡಲಾಯಿತು. ಅದೇ ಸಮಯದಲ್ಲಿ ಅವರಲ್ಲಿದ್ದ ದುಡುಕುವ ಪ್ರವೃತ್ತಿ, ಹೋರಾಟದ ಸಂದರ್ಭದಲ್ಲಿ ತೀವ್ರವಾದ ಸಮಸ್ಯೆಗಳಿಗೆ ಕಾರಣವಾಗುವ ಅಪಾಯವನ್ನು ಮುಂಗಂಡು ಶಾಂಘೈನಲ್ಲಿ ಅಖಿಲ ಚೀನಾ ಕಾರ್ಮಿಕ ಸಂಘದ ಕೇಂದ್ರ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ ಹುನಾನ್ ರಾಜ್ಯದವರೇ ಆದ ಲಿಯು ಶಾವೋಖಿಯುವರನ್ನು ಕಲ್ಲಿದ್ದಲ ಗಣಿ ಪ್ರದೇಶಕ್ಕೆ ಕಳುಹಿಸಲಾಯಿತು. ಅವರು ಆ ವೇಳೆಗಾಗಲೇ ರಷ್ಯಾದಲ್ಲಿನ ಶ್ರಮಿಕರ ವಿಶ್ವ ವಿದ್ಯಾಲಯದಲ್ಲಿ ತರಬೇತು ಪಡೆದವರಾಗಿದ್ದರು. ಕಾರ್ಮಿಕ ಸಂಘದ ನಾಯಕರ ಮೇಲೆ ಕೊಲೆಯ ಪ್ರಯತ್ನಗಳನ್ನು ನಡೆಸುತ್ತಿರುವ ಮಾಹಿತಿ ಲಭ್ಯವಾಯಿತು. ಈ ಕುತಂತ್ರವನ್ನು ಎದುರಿಸಲು ಕಾರ್ಮಿಕ ಸಂಘದ ಒಂದು ರಹಸ್ಯ ಕೇಂದ್ರವನ್ನು ಆರಂಭಿಸಿ ಅಲ್ಲಿ ಗೆ ಲಿ ಲಿಸಾನ್ ಮೊದಲಾದ ಅಲ್ಲಿಯ ನಾಯಕರನ್ನು ನೆಲೆಗೊಳಿಸಲಾಯಿತು. ಇನ್ನು ಮಾಲೀಕ ವರ್ಗದ ಜೊತೆ ಸಂಧಾನ ನಡೆಸಲು ಲಿಯು ಶಾವೋಖಿಯುವರನ್ನು ಪ್ರಧಾನ ಸಂಧಾನಕಾರರೆಂದು ನೇಮಕ ಮಾಡಲಾಯಿತು.

ಇನ್ನೊಂದು ಮುಖ್ಯ ವಿಷಯ ಇಡೀ ಹೋರಾಟದ ಮೇಲೆ ಅನರ್ಥಕಾರೀ ಪರಿಣಾಮ ಬೀರುವಂತಹ ಗಂಭೀರ ವಿಷಯ: ರಹಸ್ಯ ಕೂಟವನ್ನು ನಿಭಾಯಿಸುವುದು. ಮಾಲೀಕ ವರ್ಗದೊಡನೆ ಹತ್ತಿರದ ಸಂಬಂಧ, ಜೂಜು ಕಟ್ಟೆಗಳು, ವೇಶ್ಯಾವಾಟಿಕೆಗಳು, ಅಫೀಮು ವ್ಯಾಪಾರ ಇವುಗಳ ಮೇಲೆ ನಿಯಂತ್ರಣ ಹೊಂದಿರುವುದರ ಜೊತೆಗೆ ಕಾರ್ಮಿಕರ ಮೇಲೆ ಕೂಡ ಗಣನೀಯ ಪ್ರಭಾವ ಪಡೆದಿರುವ ಈ ಕೂಟದ ಮುಖಂಡರು ಮುಷ್ಕರವನ್ನು ಹದಗೆಡಿಸುವ ಅಪಾರ ಸಾಧ್ಯತೆ ಇತ್ತು. ಅದಕ್ಕಾಗಿಯೇ ಅವರನ್ನು ಎದುರು ಹಾಕಿಕೊಳ್ಳದೇ ಸಂಘವನ್ನು ಬಲಪಡಿಸುವ ತಂತ್ರವನ್ನು ಬಳಸಿದ್ದರು. ಮೇಲೆ ಹೇಳಿದಂತೆ

ಅವರಲ್ಲಿದ್ದ ಕಾರ್ಮಿಕ ವರ್ಗದ ಕೆಳ ಹ
ನಾಯಕರು ಕೆಲವರು ಕಾರ್ಮಿಕ ಸಂಘದ
ಸೆಳೆಯಲ್ಪಟ್ಟರೂ ಹಾನಿಯುಂಟು ಮಾ
ಅವರ ಸಾಮರ್ಥ್ಯ ಬಹಳವಾಗಿತ್ತು.
ಲಿಯು ಶಾವೋಖಿಯವರು ಲಿ ಲಿಸಾ
ಈ ರಹಸ್ಯ ಕೂಟದ ಮುಖಂಡರ
ಭೇಟಿ ಮಾಡಿ ಅವರ ಸಹಕಾರ ಕೋ
ಸಲಹೆಯಿತ್ತರು.

ಆ ರಹಸ್ಯ ಕೂಟಗಳು ಅನುರಿಸು
ಆಚರಣೆಗಳನ್ನೇ ಅನುಸರಿಸಿ ಅವರ
ಭೇಟಿ ಮಾಡಲು ಹೊರಟರು. ತ
ಕಾರ್ಮಿಕ ಸಂಘದಲ್ಲಿ ಕ್ರಿಯಾಶೀಲವಾ
ಅವರ ಕೂಟದವರೂ ಆಗಿದ್ದ ನಾಯಕರ
ಜೊತೆಯಲ್ಲಿ ಕರೆದುಕೊಂಡು, ಪರಸ್ಪರ
ಭೇಟಿ ಮಾಡುವಾಗ ಗೌರವ ಸಲ್ಲಿಸ
ಅವರು ಬಳಸುತ್ತಿದ್ದ ಒಂದು ಹುಂಜವ
ಹಾಗೂ ಇನ್ನಿತರ ಸಾಮಗ್ರಿಗಳ
ಒಯ್ದರು. ಅವರು ಮಾಡುತ್ತಿದ್ದಂತೆ
ಬಾಗಿ ನಮಸ್ಕರಿಸಿ ಹುಂಜದ ತಲೆ ಕತ್ತ
ಹುಂಜದ ರಕ್ತವನ್ನು ಕೂಟದ ಪ್ರಧ
ನಾಯಕನ ಜೊತೆ ಹಂಚಿಕೊಂ
ಕುಡಿದರು. ಇಷ್ಟಾದ ಮೇಲೆ ಆ ನಾಯಕ
ಇವರ ಮೇಲೆ ನಂಬಿಕೆ ಬಂತು. ನಿ
ಭೇಟಿಯ ಕಾರಣವೇನು ಎಂದು ಕೇಳ
ಇವರು ಮೂರು ಕೋರಿಕೆಗಳನ್ನು ಅ
ಮುಂದೆ ಮಂಡಿಸಿದರು. ಒಂದು ಮುಷ್ಕ
ಅವಧಿಯಲ್ಲಿ ಅಫೀಮು ಮಾರಬಾರ
ಎರಡು, ವೇಶ್ಯಾವಾಟಿಕೆಗಳನ್ನು, ಮೂ
ಜೂಜುಕಟ್ಟೆಗಳನ್ನು ಮುಚ್ಚಬೇಕು. ಅವ
ಮೂರು ಬಾರಿ ತನ್ನ ಎದೆ ಬಡಿದ
ಕೊಂಡು ಈ ಮೂರು ಕೊರಿಕೆಗಳನ್ನು ನ
ಕೊಡುತ್ತೇನೆಂದು ಮಾತು ಕೊಟ್ಟ.

ಇಷ್ಟಕ್ಕೆ ಬಿಡಲಿಲ್ಲ. ಲಿಂ
ಶಾವೋಖಿಯವರ ಸಲಹೆಯ ಮೇ
ಕಾರ್ಮಿಕರ ಸಂಘ (ಕ್ಲಬ್)ನಿಂದ ಅಲ್ಲಿ
ಎಲ್ಲ ರೀತಿಯ ವೃತ್ತಿ ಸಂಘಗಳಿಗೆ- ವಿ
ವ್ಯಾಪಾರಿ ಸಂಘಗಳು, ವಾಣಿಜ್ಯ ಒಕ್ಕೂ
ಇತರ ಕುಶಲ ಕರ್ಮಿಗಳ ಸಂಘಗಳು ನೌಕ
ಸಂಘಗಳು ಇವರೆಲ್ಲರಿಗೂ ಮುಷ್ಕ
ಸಹಕಾರ ನೀಡಬೇಕು. ಕಾರ್ಮಿಕರ ಸಂ
ಗಳಿಗೆ ಪರಿಹಾರವೊದಗಿಸುವ ಕೆಲಸದ
ಅವರೂ ಭಾಗವಹಿಸಬೇಕು ಎಂಬು
ಅವರ ಮನವಿ. ಹೀಗೆ ಕಾರ್ಮಿಕರ
ಸಿದ್ಧಗೊಳಿಸು ವುದರ ಜೊತೆಗೆ ಸಮಾಜ
ವಿವಿಧ ಅಂಗಗಳು ತಮ್ಮ ಹೋರಾ
ಅಡ್ಡ ಬರದಂತೆ ತಟಸ್ಥಗೊಳಿಸಲು ಪ್ರಯ
ನಡೆಸಿದರು.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout,
BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-
560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12,
18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross,
Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout,
BANGALORE-560086 Editor : NITHYANANDASWAMI

.ಕಾಂ.ವೇದರಾಜ್